ಕಳುಹಿಸಿದ್ದಾರೆ. ಮಾನ್ಯ ಸದಸ್ಯರುಗಳಲ್ಲಿ ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ, ನಾನು ಹೇಳುವುದಕ್ಕೆ ಮಾನ್ಯತೆ ಕೊಡಿ. ಮೈಸೂರು ಸಿಟಿಗೆ ಡಾಕ್ಟರುಗಳನ್ನು ಕಳುಹಿಸಿದ್ದಾರೆ. ಇದು ರಂಜಾನ್ ತಿಂಗಳು. ಡೇ ಟೈಮ್‌ನಲ್ಲಿ ಮುಸ್ಲಿಂ ಜನಾಂಗದವರು ವಾಕ್ಸಿನ್. ತೆಗೆದುಕೊಳ್ಳುವುದಿಲ್ಲ. ಸಾಯಂಕಾಲ 7 ಗಂಟೆಯ ಮೇಲೆ ರಾತ್ರಿ 11 ಗಂಟೆಯೊಳಗೆ ವಾಕ್ಸಿನ್ ಕೊಡ ಬೇಕಾಗುತ್ತದೆ. ಮೈಸೂರು ಸಿಟಿ ಉತ್ತರ ಭಾಗ ಏನಿದೆ ಅಲ್ಲಿ ಕಂಪ್ಲೀಟ್ ಕ್ಲೀನ್ ಆಗಬೇಕು. ವಾರ್‌ಫುಟಿಂಗ್‌ನಲ್ಲಿ ಕೆಲಸವಾದರೆ ಅಲ್ಲಿ ಡಿಸೀಸ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯತೆಯಿದೆ. ಇಲ್ಲದಿದ್ದರೆ ನೂರಾರು ಜನ ಸಾಯುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಎತ್ತಿದಂತಹ ಪ್ರಶ್ನೆ ಬಹಳ ಗಂಭೀರವಾಗಿದೆ. ನಾವು ಯುದ್ಧದೋಪಾದಿಯಲ್ಲಿ ಕ್ಲೀನ್ ಮಾಡತಕ್ಕದ್ದು ಮತ್ತು ವಾಕ್ಸಿನ್ ಕೊಡತಕ್ಕ ಕಾರ್ಯಕ್ರಮ ಪ್ರಾರಂಭ ಮಾಡಿದ್ದೇವೆ. ಈಗಾಗಲೇ ನಮ್ಮ ಸಚಿವರಾದ ವಿಶ್ವನಾಥ್‌ರವರು ಅಲ್ಲಿ ಹೋಗಿದ್ದಾರೆ. ಎಂಟೈರ್ ಮೆಡಿಕಲ್ ಟೀಮ್ ಕಳುಹಿಸಿದ್ದೇವೆ. ತಾವೇನು ಸಲಹೆ ಕೊಟ್ಟಿದ್ದೀರಿ, ಡೆಬ್ರಿ ಕ್ಲೀನ್ ಮಾಡತಕ್ಕದ್ದು ಮತ್ತೆ ವಾಕ್ಸಿನ್ ಸಂಜೆ ಕೆಲವು ಭಾಗದಲ್ಲಿ ಕೊಡತಕ್ಕದ್ದು ಮತ್ತು ಪ್ರವೇಟ್ ಡಾಕ್ಟರುಗಳಿಗೆ ವಾಕ್ಸಿನ್ ಕೊಡಲಿಕ್ಕೆ ಆಥರೈಸ್ ಮಾಡಿದ್ದೇವೆ. ಎಲ್ಲಾ ಕಡೆಯಿಂದ ಸಾಕಷ್ಟು ವೈದ್ಯರ ತಂಡವನ್ನು ಕಳುಹಿಸಿದ್ದೇವೆ. ಡೆಬ್ರಿ ಕ್ಲೀನ್ ಮಾಡತಕ್ಕದ್ದು ಮತ್ತು ವಾಕ್ಸಿನ್ ಕೊಡತಕ್ಕ ಕೆಲಸವನ್ನು ಸಮರೋಪಾದಿಯಲ್ಲಿ ಮಾಡುತ್ತೇವೆ. ಆ ಭಾಗದ ಶಾಸಕರಾದ ತಮ್ಮ ಜೊತೆಯಲ್ಲಿ ಮಾತನಾಡಿಕೊಂಡು ಯಾವ ರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡಲಿಕ್ಕೆ ಸಿದ್ಧರಿದ್ದೇವೆ.

<u>ನಿಯಮ 68ರ ಕೆಳಗೆ ಪ್ರಸ್ತಾವನೆ.</u>

ರೈತರ ಸಾಲ ಮನ್ನಾ ಮತ್ತು ಬಡ್ಡಿ ರಿಯಾಯಿತಿ (ಮುಂದುವರಿಯುದು)

† ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಈ ದಿವಸ ಬಹಳ ಪ್ರಾಮುಖ್ಯವಾದ ವಿಚಾರವನ್ನು ನಾವು ಮಾತನಾಡುತ್ತಿದ್ದೇವೆ. ಅಸೆಂಬ್ಲಿಯಲ್ಲಿ ಕಳೆದ ಮೂರು ವರ್ಷಗಳಿಂದ ರೈತರ ವಿಚಾರ ಒಂದಲ್ಲ ಒಂದು ಸಂದರ್ಭದಲ್ಲಿ ಪ್ರಸ್ತಾಪವಾಗಿ ಸಾಕಷ್ಟು ಈ ಸದನದ ಕಾಲವನ್ನು ನಾವು ಕಳೆದಿದ್ದೇವೆ. ಕಳೆದ ಮೂರು ವರ್ಷಗಳಿಂದ ಎಷ್ಟೇ ಮಾತನಾಡಿದರೂ ಸಹ ರೈತರಿಗೆ ಇರತಕ್ಕ ಕಷ್ಟ ಕಡಿಮೆಯಾಗುವುದಕ್ಕೆ ಬದಲಾಗಿ ಏರುತ್ತಾ ಇವೆ, ಇನ್ನೊಂದು ಕಡೆ ಸೀಮೆಗೊಬ್ಬರದ ಬೆಲೆ ಆಕಾಶಕ್ಕಿಂತ ಮೇಲೆ ಹೋಗಿದೆ. ಸಾಮಾನ್ಯ ರೈತರು ಗೊಬ್ಬರ ಮುಟ್ಟುವ ಪರಿಸ್ಥಿತಿಯಲ್ಲಿ ಇಲ್ಲ. ಅವರಿಗೆ ಸಿಗುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕ ಪರಿಸ್ಥಿತಿ ಇದೆ. ವಿದ್ಯುತ್ ಅನೇಕ ಕಡೆಗಳಲ್ಲಿ ಕಂಬಿ ಹಾಕಿರುವ ಲೈನ್ ವೈರನ್ನು ಮುಟ್ಟಿದರೂ ಶಾಕ್ ಹೊಡೆಯದಿರತಕ್ಕ ವಿದ್ಯುತ್ ಅನ್ನು ಕೊಡುತ್ತಿದ್ದಾರೆ. ಇನ್ನು ಕೆಲವು ಕಡೆ ಎಂದೂ ಕಾಣದಿರತಕ್ಕ ಪ್ರವಾಹ ಬಂದು ಜನ ಜಾನುವಾರು ಕೊಚ್ಚಿಕೊಂಡು ಹೋಗಿ ನೂರಾರು ಕೋಟಿ ರೂಪಾಯಿಗಳ ನಷ್ಟವಾಯಿತು. ಇದರ ಬಗ್ಗೆ ಒಂದಲ್ಲ ಒಂದು ರೀತಿಯಲ್ಲಿ ಕಳೆದ ಮೂರು ವರ್ಷಗಳಿಂದ ಚರ್ಚೆಯಾಗುತ್ತಿದೆ. ಆದರೆ ರೈತರಿಗೆ ಸಿಕ್ಕಿದತಕ್ಕದ್ದು, ಆದರಿಂದ ಪ್ರಯೋಜನವಾಗಿರತಕ್ಕದ್ದು ಶೂನ್ಯ. ನಮ್ಮಲ್ಲಿರತಕ್ಕ ಪಕ್ಷಗಳವರದು ಒಬ್ಬೊಬ್ಬರದು ಒಂದೊಂದು ನಿಲುವು ಆಗಿತ್ತು. ಉದಾಹರಣೆಗೆ ಮಾನ್ಯ ಯಡಿಯೂರಪ್ಪನವರು ರೈತರ ಸಾಲ ಪೂರ್ತಿ ವಜಾ ಆಗಬೇಕು ಎನ್ನತಕ್ಕ ನಿಲುವನ್ನು ತಾಳಿದ್ದರು. ಈ ಬಗ್ಗೆ ಸಾಕಷ್ಟು ಈ ವಿಚಾರದಲ್ಲಿ ಸದನದ ಒಳಗಡೆ-ಮತ್ತು ಹೊರಗಡೆ ಇದಕ್ಕೋಸ್ಕರ ಹೋರಾಟ ಮಾಡಿದ್ದಾರೆ, ಮಾತನಾಡಿದ್ದಾರೆ. ಅದೇ ರೀತಿ ಬೇರೆ ಪಕ್ಷದವರು, ನಮ್ಮ ಜನತಾದಳ ಪಕ್ಷದ ಸದಸ್ಯರು ಸಹ ರೈತರ ಸಾಲವನ್ನು ವಜಾ ಮಾಡಬೇಕೆಂದು ಹೇಳಿದ್ದರು. ಮಾನ್ಯ ನಂಜುಂಡಸ್ವಾಮಿಯವರು ಇಲ್ಲಾ ನಾವು ಈ ಸಾಲದಿಂದ ಮುಕ್ತರಾಗಿದ್ದೇವೆಂದು ಅವರೇ ಘೋಷಿಸಿಕೊಳ್ಳುತ್ತೇವೆನ್ನುವ ಮಾತನ್ನು ಕೂಡ ಹೇಳುತ್ತಾ ಇದ್ದರು. ಆದರೆ ಇಲ್ಲಿ ವಾತಾವರಣ ಏನಾಗಿದೆ ಎಂದರೆ ಈ ಕಡೆ ಕುಳಿತಿರತಕ್ಕವರು

ಬಹುತೇಕ ಎಲ್ಲರೂ ನಮ್ಮ ಪಕ್ಷದವರು ನಾವೆಲ್ಲರೂ ಸೇರಿ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ಕೊನೆಯ ಪಕ್ಷ ನಾವು ಮೂರು ವರ್ಷಗಳಿಂದ ಮಾತನಾಡಿದ್ದೇವೆ. ಈಗಿರತಕ್ಕ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒಂದು ಅವಧಿಗೆ ಮಾತ್ರ ವಜಾ ಮಾಡಿ. ರೈತರ ಮೇಲಿನ ಸಾಲದ ಹೊರೆ ಏನಿದೆ ಆ ಸಾಲದ ಹೊರೆಯಿಂದ ರೈತರನ್ನು ಇಳಿಸಿ ಅವರನ್ನು ರಕ್ಷಿಸಬೇಕೆಂದು ನಾವೆಲ್ಲರೂ ತೀರ್ಮಾನ ಮಾಡಿದ್ದೇವೆ. ಇದಕ್ಕೆ ಹಿನ್ನೆಲೆ ಏನಿದೆ ಅಂದರೆ ಏಕೆ ಇಂತಹ ಪರಿಸ್ಥಿತಿ ಬಂತೆಂದರೆ ತಮಗೆ ಗೊತ್ತಿದೆ ಜನತಾದಳ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ರೈತರ 10 ಸಾವಿರದವರೆಗಿನ ಸಾಲವನ್ನು ವಜಾ ಮಾಡುತ್ತೇವೆ ಎನ್ನತಕ್ಕ ಆಶ್ವಾಸನೆಯನ್ನು ಕೊಟ್ಟರು. ಆದರೆ ಅದು ಕಾರ್ಯಗತವಾಗಿದ್ದು ಯಾವ ರೀತಿ ಅಂದರೆ ಅವರಿಂದ ಅಣೆವಾರಿ ಪದ್ಧತಿಗೆ ಜಾರಿಗೆ ಬಂತು.

ಬೆಳೆ ಎಷ್ಟು ಆಗುತ್ತಿತ್ತು ಅಂತ ಹಿಂದಿನ ಕಾಲದಲ್ಲಿ ಆಣೆವಾರು ಲೆಕ್ಕ ಬರೆಯುತ್ತಿದ್ದರು. ಆದರೆ ಇವತ್ತು ಅಣೆವಾರಿ ಅಂತ ಸುಮ್ಮನೆ ಹೆಸರಿಗಿದೆ. ಒಂದು ಕಡೆಯಾದರೂ ಅದು ಸರಿಯಾಗಿ ನಡೆಯುತ್ತಿಲ್ಲ. ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಮಾಡಬೇಕೆಂದು ಇದೆ. ತಾವು ಇವತ್ತಿನ ದಿವಸ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದೀರಿ. ಹಳ್ಳಿಯಿಂದ ಬಂದಿರತಕ್ಕಂಥ ನಾವು ಅನೇಕ ಜನರು ಇಲ್ಲಿ ಕುಳಿತಿದ್ದೇವೆ. ಯಾರ ಕ್ಷೇತ್ರದಲ್ಲೂ ಕೂಡ ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಮಾಡಿ ಕರಾರುವಾಕ್ಕಾಗಿ ಬೆಳೆ ಇಷ್ಟು ಪ್ರಮಾಣದಲ್ಲಿ ಆಗಿದೆಯೆಂದು ಮಾಡಿದ್ದುದು ಇಲ್ಲ. ಪಹಣಿ ಬರೆಯತಕ್ಕಂಥ ಕಾಲದಲ್ಲಿ ಭೂಮಿಯ ಹತ್ರ ಹೋಗಿ ನೋಡಿ ಸ್ಥಳದಲ್ಲಿ ಬೆಳೆ ಎಷ್ಟು ಇದೆಯೆಂದು ನೋಡಿ ಬರೆಯತಕ್ಕದ್ದು ನಮ್ಮ ಲ್ಯಾಂಡ್ ರೆವಿನ್ಯೂ ಆ್ಯಕ್ಟ್, ಕೋಡ್‌ನಲ್ಲಿ ಇರತಕ್ಕದ್ದು. ಇದು ಬಿಸಿಲಿಗೆ ಹೋಗಿ ಪಹಣಿ ಬರೆಯಬೇಕಾದದ್ದು. ನಮ್ಮ ಕಡೆ ಏನು ಹೇಳುತ್ತಾರೆ ಎಂದರೆ ನೆರಳುಪಾಣಿ ಅಂತ. ನೆರಳು ಪಹಣಿಯನ್ನು ಹೋಟೆಲಲ್ಲೋ, ಬಾರಲ್ಲೋ ಕುಳಿತುಕೊಂಡು ಬರೆಯತಕ್ಕದ್ದು. ಇದು ಬಾರು ಪಹಣಿಯಾಗಿ ರೈತರ ಕುತ್ತಿಗೆಗೆ ಬಂದು ಯಾವ ಪ್ರತಿಫಲ ಸಿಗಬೇಕಾಗಿತ್ತೋ ಅದು ಸಿಕ್ಕಿಲ್ಲ. ವಿ.ಪಿ. ಸಿಂಗ್ ಅವರು ಏನು ಪ್ರಚಾರ ಮಾಡಿದ್ದರೋ, ಅಥವಾ ಏನು ಒಪ್ಪಿಕೊಂಡಿದ್ದರೋ, ಅದು ಇವತ್ತಿನ ದಿವಸ ಸಿಕ್ಕಿಲ್ಲ. ಅವರನ್ನು ನಂಬಿ ಅನೇಕ ಜನ ರೈತರು ನಮ್ಮ ಸಾಲ ವಜಾ ಆಗುತ್ತದೆ ಎಂದು ನಂಬಿ ಅವರು ಕೆಟ್ಟರು. ಉದಾಹರಣೆಗೆ ನಾವೇ ಕೊಳವೆ ಬಾವಿ ಹಾಕಿಸುವುದಕ್ಕೆ ಸಾಲ ಮಾಡಿದ್ದೇವೆ. ನಾನು ಸಾಲ ಚುಕ್ತಾ ಮಾಡುತ್ತಾ ಇದ್ದೆ. ಆದರೆ ಏನೋ ಸಾಲ ವಜಾ ಮಾಡುತ್ತೇವೆ ಎಂದು ಹೇಳಿದರು. ಎಲ್ಲರದ್ದೂ ವಜಾ ಆಗುವುದಾದರೆ ನನ್ನದೂ ವಜಾ ಆಗಲಿ ಎಂದು ಹೇಳಿ ನಾನು ಕಟ್ಟಲಿಕ್ಕೇ ಹೋಗಲಿಲ್ಲ. ಇವತ್ತು ಏನಾಗಿದೆ ಎಂದರೆ ಅದಕ್ಕೆ ಸುಸ್ತಿ ಬಡ್ಡಿ ಬಿದ್ದಿದೆ. ಇವತ್ತು ಕೂಡ ಸಾಲ ವಜಾ ಆಗುತ್ತದೆ ಎಂದು ನಾನು ಕಟ್ಟಿಲ್ಲ. ನನ್ನಂಥವನ ಪರಿಸ್ಥಿತಿಯೇ ಹೀಗಿರುವಾಗ ಸಾಮಾನ್ಯ ರೈತರ ಪರಿಸ್ಥಿತಿ ಏನಾಗುತ್ತದೆ ? ಏನೋ ನಾಲ್ಕು ಕಾಸು ಉಳಿಯುತ್ತದೆ ಎಂದು ನಂಬಬಾರದವರನ್ನೆಲ್ಲ ನಂಬಿ ಇವತ್ತಿನ ರೈತರು ಕೆಟ್ಟಿದ್ದಾರೆ. ಶ್ರೀಮಾನ್ ಯಡಿಯೂರಪ್ಪನವರು ಪ್ರತಿಯೊಂದು ಸದನ ಪ್ರಾರಂಭವಾದಾಗಲೂ ಸಾಲ ವಜಾ ಮಾಡಿ, ಸಾಲ ವಜಾ ಮಾಡಿ ಎಂದು ಹೇಳುತ್ತಾರೆ. ಇವರ ಮಾತನ್ನು ಕೂಡ ಕೇಳಿ ಅನೇಕ ಜನ ರೈತರು ಕೆಟ್ಟರು. ಸಾಲ ವಜಾ ಆಗಲಿಲ್ಲ. ರೈತರು ಕೆಟ್ಟಿದ್ದಾರೆ. ಆಮೇಲೆ ಪ್ರೊಫೆಸರ್ ನಂಜುಂಡಸ್ವಾಮಿಯವರು ಸಾಲದಿಂದ ನಾವು ಮುಕ್ತರಾಗಿದ್ದೇವೆ ಎನ್ನುವ ಘೋಷಣೆಯನ್ನೂ ಮಾಡಿಬಿಟ್ಟರು. ಅವರ ಮಾತನ್ನು ಕೂಡ ಕೇಳಿ ಅನೇಕ ಜನ ರೈತರು ಕೆಟ್ಟಿದ್ದಾರೆ. ಹೀಗೆ ಒಂದಲ್ಲ ಒಂದು ರೀತಿಯಲ್ಲಿ ರೈತನ ಸಾಲದ ಹೊರೆಯನ್ನು ಹೇರಿಸತಕ್ಕಂಥಾದ್ದರಲ್ಲಿ ಯಶಸ್ವಿಯಾಗಿದ್ದೇವೆ. ಆದರೆ ಈ ಭಾರವನ್ನು ಇಳಿಸುವುದರಲ್ಲಿ ಯಾರೂ ಕೂಡ ಯಶಸ್ವಿಯಾಗಿಲ್ಲ. ಇನ್ನೂ ಒಂದು ಆ ಕಡೆಯ ಸದಸ್ಯರಿಂದ ನಡೆದಿರತಕ್ಕದ್ದು ಏನು ? ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿದ್ದರು. ನಾವು ಅಧಿಕಾರಕ್ಕೆ ಬಂದರೆ ಸಾಲವನ್ನು ವಜಾ ಮಾಡತಕ್ಕದ್ದನ್ನು ಕೇಂದ್ರ ಸರ್ಕಾರದ ಮುಂದೆ ಒತ್ತಾಯ ಮಾಡುತ್ತೇವೆ, ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ ಎಂದು ಅವರ ಚುನಾವಣಾ ಪ್ರಣಾಳಿಕೆಯಲ್ಲಿದೆ. ಆದರೆ ಏನಾಯಿತು ? ಏನೂ ಆಗಲಿಲ್ಲ.

ಅನೇಕ ಸಂದರ್ಭಗಳಲ್ಲಿ ಈ ವಿಚಾರ ಪ್ರಸ್ತಾಪ ಆಗಿದೆ. ಪ್ರಣಾಳಿಕೆಯಲ್ಲಿ ಏನಿದೆ ಎಂಬುದನ್ನು ನಾವು ಕೂಡ ನೋಡಿದ್ದೇವೆ. ಏನಾಯಿತು ? ಅವರೂ ಕೂಡ ಹೇಳಲಿಲ್ಲ. ಅವರದ್ದೇ ಪಕ್ಷದ ಅಧಿಕಾರ ಇದೆ. ಏನನ್ನೂ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿದ್ದರೋ, ಅದನ್ನು ಕಾರ್ಯಗತ ಮಾಡುವುದಕ್ಕೆ ಅವಕಾಶ ಒದಗಿಬಂದಿದೆ. ಆದರೆ ಅದನ್ನು ಮಾಡಲಿಲ್ಲ. ಮಾಡಿದ್ದು ಏನೆಂದರೆ ಗೊಬ್ಬರದ ಬೆಲೆಯನ್ನು ಮುನ್ನೂರು ಪಟ್ಟು ಜಾಸ್ತಿ ಮಾಡುವುದನ್ನು ಮಾತ್ರ ಬಹಳ ಯಶಸ್ವಿಯಾಗಿ ಮಾಡಿದ್ದೀರಿ. ಅವರನ್ನು ಕೂಡ ನಂಬಿ ರೈತರು ಕೆಟ್ಟಿದ್ದಾರೆ. ದಾರಿಯಲ್ಲಿ ಹೋಗುವ ಎಲ್ಲರನ್ನೂ ಕೂಡ ನಂಬಿ ರೈತರು ಕೆಟ್ಟಿದ್ದಾರೆ. ಸ್ವಾಮಿ, ಇವತ್ತು ಪರಿಸ್ಥಿತಿ ಹೇಗೆ ಇದೆ ಎಂದರೆ ನಾವು ಆಕಾಶವನ್ನು ನೋಡಬೇಕು. ಏನೋ ಸ್ವಲ್ಪ ಮೋಡ ಬಂದರೆ ಮಳೆ ಬರುತ್ತದೆ ಎಂದು ಖುಷಿಯಾಗುತ್ತದೆ. ಮಳೆ ಇಲ್ಲ. ಕಳೆದ ಮೂರು – ನಾಲ್ಕು ವರ್ಷಗಳಿಂದ ನಮಗೆ ಮಳೆ ಇಲ್ಲ. ಹೋದವರ್ಷ ಅಲ್ಲ, ಅದರ ಹಿಂದಿನ ವರ್ಷ ಮಳೆ ಡಿಸೆಂಬರ್ ತಿಂಗಳಲ್ಲಿ ಬಂತು, ಇದ್ದ ಬೆಳೆಯೆಲ್ಲ ನಾಶವಾಯಿತು. ಸಾವಿರಾರು ಮನೆಗಳು ಬಿದ್ದುಹೋದುವು. ಜನ ಗುಡಿಸಲುಗಳನ್ನು ಕಳೆದುಕೊಂಡರು. ಸಣ್ಣ ಜಂತಿ ಮನೆಗಳನ್ನು ಕಳೆದುಕೊಂಡರೇ ವಿನಹ ನಮಗಂತೂ ಪ್ರಯೋಜನ ಆಗಲಿಲ್ಲ. ಮತ್ತೆ ಈಗ ವಿದ್ಯುತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಇವತ್ತು ನಾನು ಬೆಳಿಗ್ಗೆ ಬರಬೇಕಾದ್ದರೆ ನನ್ನ ಕ್ಷೇತ್ರದಲ್ಲಿ ಅಲ್ಲಿ ಒಂದು ಸಣ್ಣ ಸಮಾರಂಭ ಇತ್ತು. ಕಣ್ಣಲ್ಲಿ ನೀರು ಇಟ್ಟುಕೊಂಡು ಬಂದು ಹೇಳುತ್ತಾ ಇದ್ದೇನೆ. ಸ್ವಾಮಿ ನಾನು ಈ ಕರೆಂಟ್‌ನ್ನು ನಂಬಿ ಮುಕ್ಕಾಲು ಎಕರೆ ಆಲೂಗಡ್ಡೆ ಹಾಕಿದ್ದೆ, ಅದಕ್ಕೆಂದು ಹತ್ತು – ಹನ್ನೆರಡು ಸಾವಿರ ಖರ್ಚು ಮಾಡಿದ್ದೆ ಈಗ ಏನೂ ಇಲ್ಲ, ಹತ್ತು ಹನ್ನೆರಡು ಸಾವಿರವೂ ಹೋಯಿತು, ಏನೂ ಇಲ್ಲ ಎಂದು ಅಲ್ಲಿ ಒಬ್ಬರು ಹೇಳಿದರು. ಏಕೆಂದರೆ ಕರೆಂಟ್ ಇಲ್ಲದಿದ್ದರೆ ಕುಡಿಯುವ ನೀರು ಕೂಡ ಇಲ್ಲ.ಇದು ನಾನು ಬೆಳಿಗ್ಗೆ ಸದನಕ್ಕೆ ಬರುವುದಕ್ಕೆ ಮೊದಲು ನಡೆದಿರತಕ್ಕಂಥ ಘಟನೆ.

ಮುಕ್ಕಾಲು ಎಕರೆಯಲ್ಲಿರತಕ್ಕ ಆಲೂಗಡ್ಡೆಗೆ ಸುಮಾರು 25–30 ಸಾವಿರ ರೂಪಾಯಿಗಳು ಬರಬೇಕಾಗಿತ್ತು. ಅವನು 10–12 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾನೆ. ಅದು ಸರ್ವನಾಶವಾಯಿತು. ಅದು ಒಬ್ಬನದೇ ಅಲ್ಲ. ಇವತ್ತು ಸಾವಿರಾರು ಜನ ರೈತರು ಈ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅವರ ನೆರವಿಗೆ ಬರುವುದಕ್ಕೆ ಯಾರೂ ತಯಾರಿಲ್ಲ. ಇವತ್ತು ವ್ಯವಸಾಯ ಎನ್ನುವುದು ಮೂಲ, ಈ ವ್ಯವಸಾಯ ನಿಂತುಹೋಯಿತು ಎಂದರೆ, ರೈತ ನೇಗಿಲು ಹಿಡಿಯುವುದನ್ನು ಮೇಣಿ ಹಿಡಿಯುವುದನ್ನು ಕೈ ಬಿಟ್ಟ ಎಂದರೆ, ಎಲ್ಲವೂ ನಿಂತುಹೋಗುತ್ತದೆ. ಆ ಪರಿಸ್ಥಿತಿಗೆ ಇವತ್ತಿನ ದಿವಸ ಬರುತ್ತೇವೆ. ಮಾನ್ಯ ತಿಮ್ಮಪ್ಪನವರು ಭೂಮಿಗೋಸ್ಕರ ಹೋರಾಟ ಮಾಡಿ, ಅದರ ಪ್ರತಿಫಲದಿಂದ ಇಲ್ಲಿ ಬಂದು ಕುಳಿತಿದ್ದಾರೆ. ಅವರು ನಗುತ್ತಿದ್ದಾರೆ, ಇದಕ್ಕೆ ನಾನೇನು ಹೇಳಲಿ. ಎಂತಹ ವಿಪರ್ಯಾಸ. ಮನುಷ್ಯ ಟ್ರಾನ್ಸ್‌ಫಾರ್ಮೇಷನ್ ಹೇಗೆ ಆಗುತ್ತಾನೆ ಎನ್ನುವುದಕ್ಕೆ ಅವರೇ ಒಂದು ಉದಾಹರಣೆ. ಇವತ್ತಿನ ದಿವಸ ನಾವು ಆಹಾರ ಧಾನ್ಯ ಬೆಳೆಯುತ್ತೇವೆ. ನಮ್ಮ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಆಹಾರ ಎಲ್ಲಿಂದ ಬರುತ್ತದೆ? ರೈತ ಬೆಳೆದುದರಲ್ಲಿ, ಹೆಚ್ಚುವರಿಯಾದುದನ್ನು ಒಂದಲ್ಲ ಒಂದು ರೀತಿಯಿಂದ ತೆಗೆದುಕೊಳ್ಳುತ್ತಿದ್ದೀರಿ. ನೀವು ರೈತರಿಂದ ನೇರವಾಗಿ ಪಡೆಯುತ್ತಾ ಇಲ್ಲವೆಂದು ಹೇಳಬಹುದು. ಆದರೆ, ಮಿಲ್ ಪಾಯಿಂಟ್ ಲೆವಿಯನ್ನು ಹಾಕಿದ್ದೀರಿ. ಈ ಮಿಲ್ ಪಾಯಿಂಟ್‌ನಲ್ಲಿ ಲೆವಿ ಹಾಕಿರುವುದರಿಂದ, ಕೊಂಡುಕೊಳ್ಳತಕ್ಕ ಮಿಲ್ ಮಾಲೀಕ, ಅವನೇನು ಧರ್ಮಾತ್ಮನೇ, ಧರ್ಮಸಂಸ್ಥೆಯನ್ನು ನಡೆಸುತ್ತಿದ್ದಾನೆಯೇ ? ಹಾಗಾದರೆ ಈ ಲೆವಿಯನ್ನು ತೆಗೆಯಿರಿ. ಯಾವ ಬೆಳೆಗೆ ಅವನಿಗೆ ಗಿಟ್ಟುತ್ತದೋ, ಲಾಭ ಸಿಗುತ್ತದೋ, ಆ ಲಾಭವನ್ನು ಅನುಸರಿಸಿ, ಮಾರುಕಟ್ಟೆಯಲ್ಲಿ ಖರೀದಿ ಮಾಡುತ್ತಾನೆ. ಅದನ್ನು ತೆಗೆದರೆ ಬೆಳೆದಿರತಕ್ಕ ರೈತನಿಗೆ 4 ಕಾಸು ಜಾಸ್ತಿ ಬರುತ್ತದೆ. ಇದನ್ನು ತೆಗೆಯಿರಿ ಹಾಗಾದರೆ ನೋಡೋಣ. ಇದನ್ನು ತೆಗೆಯುವುದಕ್ಕೆ ನೀವು ತಯಾರಿಲ್ಲ. ಇನ್ನೊಂದು, ಇವತ್ತಿನ ದಿವಸ ರೈತರು ಕಬ್ಬು ಬೆಳೆಯುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಿಲ್ ಪಾಯಿಂಟ್ ಲೆವಿಯನ್ನು ನೀವು ಇದ್ದಾಗಲೂ ತೆಗೆಯಲಿಲ್ಲ.

ಶ್ರೀ ಸಿ. ಬೈರೇಗೌಡ:- ರೈತ ಎಲ್ಲರನ್ನೂ ನಂಬಿ ಕೆಟ್ಟಿದ್ದಾನೆಂದು ಈಗಾಗಲೇ ಹೇಳಿದ್ದೇವೆ. ನಾವು ಇದ್ದಾಗ ಬಡ್ಡಿ ಮತ್ತು ಸಾಲದ ಮೇಲಿರತಕ್ಕ ಸುಸ್ತಿ ಬಡ್ಡಿಯನ್ನು ಇಡೀ ರಾಜ್ಯದಲ್ಲಿ ವಜಾ ಮಾಡಿದ್ದೇವೆ. ನಾನು ಅವತ್ತಿನ ದಿವಸ ಮಂತ್ರಿಮಂಡಲದಲ್ಲಿದ್ದೆ. ಆಗಿನ ಸರ್ಕಾರದಲ್ಲಿ ಅಧಿಕಾರದಲ್ಲಿದ್ದೆ, ಅದರ ಉದಾಹರಣೆ ಇದೆ.

ಶ್ರೀ ಹೆಚ್. ಏಕಾಂತಯ್ಯ:- ನಾವು, 5 ವರ್ಷಗಳಲ್ಲಿ 179 ಕೋಟಿ ರೂಪಾಯಿಗಳ ಬಡ್ಡಿಯನ್ನು ವಜಾ ಮಾಡಿದ್ದೇವೆ. ಅದಕ್ಕಿಂತ ಹೆಚ್ಚಾಗಿ, ಶೇಕಡ 7ರಷ್ಟು ಎಲ್ಲಾ ರೈತರಿಗೂ ಬಡ್ಡಿಯಲ್ಲಿ ರಿಯಾಯಿತಿ ಕೊಟ್ಟು; ಸಾಲವನ್ನು ಕೊಟ್ಟಿದ್ದೇವೆ. ಆಗ ಇದ್ದಂಥ ಎಲ್ಲಾ ಯೋಜನೆಗಳನ್ನೂ ನೀವು ನಿಲ್ಲಿಸಿದ್ದೀರಿ. ಇದಕ್ಕೆ ತಾವು ಏನು ಹೇಳುತ್ತೀರಿ ? ಕಡಿಮೆ ಬಡ್ಡಿ ದರದಲ್ಲಿ, ಸಾಲ ಕೊಡುವಂಥ ಪದ್ಧತಿ ಇತ್ತು. ಸರ್ಕಾರದವರು ಸಹಾಯಧನ ಕೊಡುತ್ತಿದ್ದರು. ತಾವು ಈ ಯೋಜನೆಯನ್ನೂ ನಿಲ್ಲಿಸಿದ್ದೀರಿ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಏಕಾಂತಯ್ಯನವರು ಸಹಕಾರಿ ರಂಗದಲ್ಲಿ ಪಳಗಿದವರು. ಕೃಷಿ ಕಾರ್ಮಿಕರಿಗೆ ಕೊಡತಕ್ಕ ಸಾಲದ ವಿಚಾರದಲ್ಲಿ ನಾವು ಕೈ ಹಾಕಬಾರದು. ಒಂದು ವೇಳೆ ಕೈ ಹಾಕುವುದಾದರೆ, ನಾವು ಸಾಲವನ್ನೇ ಕೊಡುವುದಿಲ್ಲವೆಂದು ಹೇಳುತ್ತೇವೆ. ಹೋದ ಸಾರಿ ಸ್ವಲ್ಪ ಜನಕ್ಕೆ ಕೊಟ್ಟರು, ಕೊಡುವಾಗ ರೈತರಿಂದ ಸಾಲ ಪೂರ್ಣವಾಗಿ ವಸೂಲಾತಿಯಾದ ಮೇಲೆ ಅವನಿಗೆ ಮತ್ತೆ ಚೆಕ್ ಕೊಡುವಂಥ ಸನ್ನಿವೇಶ ಬಂತು. ಈ ರೀತಿ ಕೊಡುವ ಹಣದಲ್ಲಿ 5 ಪರ್ಸೆಂಟ್ ಕಡಿಮೆ ಹಣವನ್ನು ವಸೂಲಿ ಮಾಡಿತ್ತು. ಇದನ್ನು ನಬಾರ್ಡ್‌ನವರು ಒಪ್ಪದೇ ಇರುವ ಕಾರಣದಿಂದ, ಹಾಗೂ ಅವರು ಯಾವುದೇ ಕಾರಣದಿಂದ ವಿನಾಯಿತಿ ಕೊಡಬಾರದೆಂದು ತಿಳಿಸಿದ್ದರಿಂದ, ನಾವು ಪೂರ್ಣವಾಗಿ ವಸೂಲ್ಮಾಡಿಕೊಂಡು, ಸರ್ಕಾರದಿಂದ 5 ಪರ್ಸೆಂಟ್ ಹಣವನ್ನು ಚೆಕ್ ಮುಖಾಂತರ ನಬಾರ್ಡ್‌ನವರಿಗೆ ಕೊಡಲಾಯಿತು. ನೀವು ಹಿಂದೆ ಕೊಟ್ಟಿದ್ದು, ಅದು ಒನ್ ಟೈಮ್ ಆಪರೇಷನ್.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಕಾಗೋಡು ತಿಮ್ಮಪ್ಪನವರು ಇದರ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿಲ್ಲ. ಮೊಟ್ಟ ಮೊದಲನೆಯದಾಗಿ, ಇದಕ್ಕೆ ಪ್ರೋತ್ಸಾಹ ಯೋಜನೆ ಇತ್ತು. ತಾವು ನಿಲ್ಲಿಸಿದ್ದೀರಿ. ತಾವು ಹೇಳುತ್ತಿರುವುದು ಒನ್ ಟೈಮ್ ಆಪರೇಷನ್. ಅದಕ್ಕಿಂತ ಹೆಚ್ಚಾಗಿ, ತಾವು ಹೇಳಿದಿರಿ. ನಬಾರ್ಡ್‌ನವರು ಆಕ್ಷೇಪ ಮಾಡುತ್ತಾರೆ ಎಂದು. ನಬಾರ್ಡ್‌ನವರು 1983ರಿಂದ ಸತತವಾಗಿ 6 ವರ್ಷಗಳ ಕಾಲ ಆಕ್ಷೇಪ ಮಾಡಿದರು. ಆದರೂ ಸಹ ನಮ್ಮ ಸರ್ಕಾರ ಇದ್ದಾಗ, ಈ ಯೋಜನೆಯನ್ನು ನಿಲ್ಲಿಸಲಿಲ್ಲ. ಇದರ ಜೊತೆಯಲ್ಲಿ, ಸುಮಾರು 150 ಕೋಟಿಗಿಂತಲೂ ಹೆಚ್ಚಿನ ಬಡ್ಡಿಯನ್ನು ರಿಯಾಯಿತಿ ದರದಲ್ಲಿ, ಈ ದೇಶದ ರೈತರಿಗೆ ಬಿಟ್ಟಿದ್ದೇವೆ. ತಾವು ಒನ್ ಟೈಮ್ ಆಪರೇಷನ್ ಮಾಡುತ್ತಾ ಇಲ್ಲ. ಅದಕ್ಕಿಂತ ಹೆಚ್ಚಾಗಿ, ಮಾನ್ಯ ಭೈರೇಗೌಡರು ಹೇಳುವುದೇನೆಂದರೆ, ಕನಿಷ್ಟ ಪಕ್ಷ ನೀವು ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುವಂಥ ವ್ಯವಸ್ಥೆ ಮಾಡಿ ಎಂದು.

ಶ್ರೀ ಕಾಗೋಡು ತಿಮ್ಮಪ್ಪ:- ಅಲ್ಪಾವಧಿ ಪ್ರಶ್ನೆ ಇಟ್ಟು ಚರ್ಚೆ ಮಾಡುವುದಕ್ಕಿಂತ ಯಾವುದಾದರೊಂದು ದಿವಸ ವಿಶೇಷವಾಗಿ ನಾವು ಈ ವಿಷಯಗಳನ್ನು ಚರ್ಚೆ ಮಾಡಿದರೆ ಖಂಡಿತವಾಗಿ ಸಾರ್ವತ್ರಿಕವಾಗಿ ನಾವೆಲ್ಲರೂ ಕೂಡ ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಈ ಅಲ್ಪಾವಧಿ ಚರ್ಚೆ ಮಾಡಿಕೊಂಡು ಏನು ಮಾಡುವುದಕ್ಕೆ ಆಗುತ್ತದೆ ?

ಶ್ರೀ ಸಿ. ಬೈರೇಗೌಡ:- ರೂಲ್ 68ರಲ್ಲಿ ತಂದಿರತಕ್ಕ ವಿಷಯಗಳು ಕೂಡ ಹಿಂದೆ ದಿನಗಟ್ಟಲೆ ಚರ್ಚೆ ಆಗಿರತಕ್ಕಂಥ ಉದಾಹರಣೆ ಇದೆ. ಆದ್ದರಿಂದ ಇವತ್ತಿಗೆ ಇದು ಮುಕ್ತಾಯವಾಗಬೇಕು ನಾವೇ

ಪೂರ್ತಿ ಅದರ ಜವಾಬ್ದಾರಿ ಲಾಭ ಪಡೆದುಕೊಳ್ಳಬೇಕು ಎನ್ನುವುದು ಖಂಡಿತವಾಗಿ ಇಲ್ಲ, ನಾವು ಯಾರೂ ಇವತ್ತಿನ ದಿವಸ ಇದರಲ್ಲಿ ರಾಜಕೀಯ ಮಾಡುವುದಕ್ಕೆ ತಯಾರಾಗಿಲ್ಲ. ಆ ಪಾಪದ ಕೆಲಸ ಈ ವಿಚಾರದಲ್ಲಿ ಯಾರಾದರೂ ಕೂಡ ರಾಜಕೀಯ ಮಾಡಿದರೆ ಅದು ಅತ್ಯಂತ ಘೋರ ಪಾಪದ ಕೆಲಸ ಎಂದು ನಾನು ನಂಬಿದ್ದೇನೆ. ಆ ಕೆಲಸ ನಾವ್ಯಾರು ಮಾಡುವುದಕ್ಕೆ ತಯಾರಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಕೃಷಿಗೆ ಸಂಬಂಧಪಟ್ಟ ಚರ್ಚೆ ಮಾಡುವುದು ಅಷ್ಟು ಸುಲಭ ಅಲ್ಲ. ಇಲ್ಲಿ ಎಲ್ಲಾ ಮಂತ್ರಿಗಳು ಇರಬೇಕಾಗುತ್ತದೆ. ನೀರಾವರಿ ಮಂತ್ರಿಗಳು, ವಿದ್ಯುತ್ ಮಂತ್ರಿಗಳು, ಕೃಷಿ ಮಂತ್ರಿಗಳು ಇರಬೇಕಾಗುತ್ತದೆ. ಎಲ್ಲರನ್ನು ಒಳಗೊಂಡಂತೆ ಚರ್ಚೆ ಮಾಡಿದರೆ ಏನಾದರೂ ಒಂದು ತೀರ್ಮಾನ ತೆಗೆದುಕೊಂಡು, ಇದರ ಬಗ್ಗೆ ಹೊಸ ಬೆಳಕು ಚೆಲ್ಲುವುದಕ್ಕೆ ಅನುಕೂಲವಾಗುತ್ತದೆ. ಸಾಲ ಮನ್ನಾ ಮಾಡಬೇಕು, ಬಡ್ಡಿ ಮನ್ನಾ ಮಾಡಬೇಕು. ಯಾರೂ ಏನೂ ಅವರ ಮನೆ ದುಡ್ಡು ತಂದು ಕೊಡುವುದಿಲ್ಲ. ಸರ್ಕಾರದ ದುಡ್ಡನ್ನು ರೈತರಿಗೆ ಸಹಾಯ ಮಾಡೋಣ ಅಂದರೆ ಎಲ್ಲರೂ ಸೇರಿ ಒಂದು ಒಮ್ಮತಕ್ಕೆ ಬಂದರೆ ತೀರ್ಮಾನ ಮಾಡಬಹುದು. ಅದಕ್ಕೆ ರಾಜಕೀಯ ಏಕೆ ಬೇಕು ? ನಾವು ರೈತರು, ನೀವು ರೈತರು ಎಲ್ಲರೂ ರೈತರೇ. ಆದ್ದರಿಂದ ನಮ್ಮ ನಮ್ಮಗೆ ಸಹಾಯ ಮಾಡಿಕೊಳ್ಳುವುದಕೋಸ್ಕರವಾಗಿ ರಾಜಕೀಯವನ್ನು ಇದರಲ್ಲಿ ಬೆರೆಸಬೇಕಾಗಿಲ್ಲ. ಅದಕ್ಕೆ ನಾನು ಹೇಳುವುದು, ರೂಲ್ಸ್ 68ರಲ್ಲಿ ಈ ವಿಚಾರ ತಂದು ಅರ್ಧಂಬರ್ಧ ಚರ್ಚೆ ಮಾಡುವುದಕ್ಕಿಂತ ಒಂದು ವಿಶೇಷವಾದ ದಿನವನ್ನು ಅದಕ್ಕೆ ಮೀಸಲಾಗಿಟ್ಟುಕೊಂಡು ಅದು ಯಾವ ರೀತಿಯಿಂದ ಇವತ್ತು ನಾವು ರೈತರಿಗೆ ಸಹಾಯ ಮಾಡಿದರೆ ಅವನನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯ ಅವನಿಗೆ ಉದ್ಧಾರ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಚರ್ಚೆ ಮಾಡಿದರೆ ಅದರಿಂದ ಉಪಯೋಗ ಆಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ:– ಸರ್ಕಾರ ಅದಕ್ಕೆ ಒಪ್ಪಿದರೆ ನಮ್ಮ ಕಡೆಯಿಂದ ತಕರಾರು ಏನೂ ಇಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾನು ಒಂದು ಸೂಚನೆ ಕೊಟ್ಟಿದ್ದೇನೆ. ಆದೇನೋ ರೈತರನ್ನು ಉದ್ಧಾರ ಮಾಡತಕ್ಕಂಥ ಮಾತು ಬಂತು. ತಾವೇನೂ ಉದ್ಧಾರ ಮಾಡಬೇಕಾಗಿಲ್ಲ. ಇಲ್ಲಿ ಎಲ್ಲರೂ ಮಾತನಾಡುತ್ತಿರುವಾಗ ಬರೀ ಸಾಲದ ವಿಷಯವನ್ನೇ ಪ್ರತ್ಯೇಕಿಸಿ ಮಾತನಾಡುತ್ತಿದ್ದಾರೆ. ನಾವು ಎಲ್ಲಿ ತಪ್ಪು ಮಾಡುತ್ತಿದ್ದೇವೆ ಎಂದು. ಏಕೆ ಹೇಳಬಾರದು ಎಂದು ನಾನು ಹೇಳುತ್ತೇನೆ. ರೈತನಿಗೆ ಮೋಸ ಮಾಡುತ್ತಿರುವುದನ್ನು ನಿಲ್ಲಿಸಿದರೆ ಸಾಕು. ರೈತನಿಗೆ ಏನು ಮೋಸ ಮಾಡುತ್ತಿದ್ದೇವೆ ನಾವು ಅದನ್ನು ನಿಲ್ಲಿಸಿದರೆ ಸಾಕು. ಎಲ್ಲಿ ಮೋಸ ಆಗುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ:– ಈ ವಿಷಯವನ್ನು ನಾವು ಪಕ್ಷದ ಸಭೆಯಲ್ಲಿ ಕೂಡ ಪ್ರಸ್ತಾಪ ಮಾಡಿದ್ದೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಇಲ್ಲಿ ವಿಷಯವನ್ನೇನೋ ಸರಿಯಾಗಿ ತಂದಿದ್ದಾರೆ. ಭೀಕರ ಬರಗಾಲ, ನೆರೆಹಾವಳಿ, ಅಸಮರ್ಪಕ ವಿದ್ಯುತ್ ಸರಬರಾಜು ಹಾಗೂ ರೈತರ ಬೆಳೆಗಳ ದರ ಇಳಿತದಿಂದ ರೈತನನ್ನು ರಕ್ಷಿಸಿದರೆ ಸಾಕು. ರೈತರನ್ನು ಯಾರೂ ಉದ್ಧಾರ ಮಾಡಬೇಕಾಗಿಲ್ಲ. ರೈತರಿಗೆ ಏನು ಮೋಸ ಮಾಡುತ್ತಿದ್ದೇವೆ ನಾವು ಅದನ್ನು ತಡೆದರೆ ಸಾಕು. ಏಕೆಂದರೆ ಪ್ರತಿ ವರ್ಷ ಇಲ್ಲಿ ಬಂಗು, ಬಡ್ಡಿ ರದ್ದು ಮಾಡಿ ಸುಸ್ತಿ ಬಡ್ಡಿ ರದ್ದು ಮಾಡಿ, ಸಾಲ ರದ್ದು ಮಾಡಿ ಆ ಚರ್ಚೆ ಇನ್ನು ಮೇಲೆ ಬರಬಾರದು. ಏಕೆಂದರೆ ದಿವಸಕ್ಕೆ 16 ಗಂಟೆ ಕೆಲಸ ಮಾಡುವಂತಹವನಿಗೆ ಸಾಲ ಬರುವಂಥದ್ದು ಈ ದೇಶದಲ್ಲಿ ಮಾತ್ರ ನಡೆಯುತ್ತಿದೆ. ದಿವಸಕ್ಕೆ 16 ಗಂಟೆ ಕೆಲಸ ಮಾಡುವವರು ಒಂದೊಂದು ಸಾರಿ 24 ಗಂಟೆ ಕೆಲಸ ಮಾಡುತ್ತೇವೆ, ನಾವು 24 ಗಂಟೆ ಕೆಲಸ ಮಾಡುವವನಿಗೆ ಸಾಲ ಬರುವಂತಹ ಒಂದು ವಿಚಿತ್ರ ವ್ಯವಸ್ಥೆ ಈ ದೇಶದಲ್ಲಿ ಮಾತ್ರ ಇರುವುದು.

ಕಳೆದ 3 ವರ್ಷ ಒಂದೇ ಒಂದು ಸಣ್ಣ ಕಾನೂನು ಮಾಡಿ ಎಂದು ನಾನು ಕೇಳುತ್ತಿದ್ದೇನೆ. ರೈತರಿಗೆ ಮೋಸ ಏನಾಗುತ್ತಿದೆ ಎಂದು ಹೇಳಿದ್ದೇನೆ. ಸರ್ಕಾರದ ಒಂದು ಹಳೇ ಜೀಪನ್ನು ಹರಾಜು ಹಾಕಬೇಕಾದರೂ ಒಂದು ಕಾನೂನು ಇಟ್ಟುಕೊಂಡು ಇಷ್ಟು ಕಡಿಮೆಗೆ ಕೂಗಬಾರದೆಂದು ಮಾಡಿದ್ದಾರೆ. ಇಂಥ ಸಣ್ಣ ಕಾನೂನು ಮಾಡಿದರೂ ರೈತ ಸಾಲದಿಂದ ಮುಕ್ತನಾಗುತ್ತಾನೆ. ಯಾವುದೇ ಸರ್ಕಾರಕ್ಕೂ ಅದನ್ನು ಮಾಡುವುದಕ್ಕಾಗಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಇದು ಬಹಳ ಮಹತ್ವ ವಿಷಯ ಇದೆ. ಬಹಳ ಸದಸ್ಯರಿಗೆ ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕಾಗಿದೆ. ಆದ್ದರಿಂದ ಎಲ್ಲಾ ಸದಸ್ಯರು ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಇದರಿಂದ ಸಹಾಯವಾಗುತ್ತದೆ. ಯಾವ ಸದಸ್ಯರ ಹತ್ತಿರ ಮಾಹಿತಿ ಇದೆಯೋ ಅದೆಲ್ಲವನ್ನೂ ಕೊಟ್ಟರೆ ರಿಪ್ಲೈ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು:– ತಾವೂ ಕೂಡ ನನಗೆ ಸಹಕಾರ ಕೊಡಬೇಕು. ಮಾತನಾಡುವವರು ಐದೈದು ನಿಮಿಷ ಮಾತನಾಡಿದರೆ ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೆ, ಮಿಲ್ ಪಾಯಿಂಟ್‌ನಲ್ಲಿ ಲೆವಿ ಹಾಕತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನೆ. ಲೆವಿಯನ್ನು ವಸೂಲಿ ಮಾಡುವುದಕ್ಕೆ ಯಾವ ನೈತಿಕ ಬಲ ಇದೆ ? ಅದನ್ನು ರದ್ದು ಮಾಡತಕ್ಕಂಥದ್ದಕ್ಕೆ ಯೋಚನೆ ಮಾಡಿ. ಅದನ್ನು ರದ್ದು ಮಾಡಿದರೆ 4 ಕಾಸು ರೈತರಿಗೆ ಹೆಚ್ಚಿಗೆ ಸಿಗುತ್ತದೆ. ಸಕ್ಕರೆಯನ್ನು ಉತ್ಪತ್ತಿ ಮಾಡುತ್ತಿರುವುದು ಈ ದೇಶದಲ್ಲಿರತಕ್ಕಂಥ ರೈತರು. ರೈತರು ಬೆಳೆದು ಕಾರ್ಖಾನೆಗೆ ತಂದು ಹಾಕಿದ ಕಬ್ಬಿಗೆ ಬೆಲೆ ನಿಗದಿ ಮಾಡತಕ್ಕಂಥವರು ನಂಜುಂಡಸ್ವಾಮಿಯವರು ಹಾಗೂ ಇನ್ನಿತರರು ಬೆಂಗಳೂರಿನಲ್ಲಿ ಕುಳಿತುಕೊಂಡು ಬೆಲೆ ನಿಗದಿ ಮಾಡುತ್ತಾರೆ. ಯಾವುದೋ ಒಂದು ಪದ್ಧತಿ ಪ್ರಕಾರ ಬೆಲೆ ನಿಗದಿ ಆಗುತ್ತದೆಂದು ತಿಳಿದುಕೊಳ್ಳೋಣ. ರೈತರು ಕಬ್ಬನ್ನು ಕಾರ್ಖಾನೆಗೆ ತಂದ ತಕ್ಷಣ ಹಣ ಕೊಡುವಂಥ ಪದ್ಧತಿ ಇದೆಯೋ ? ಸಹಕಾರಿ ರಂಗದಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆ ಇರಬಹುದು, ಖಾಸಗೀರಂಗದಲ್ಲಿರತಕ್ಕಂಥ ಕಾರ್ಖಾನೆಗಳು ಇರಬಹುದು. 10-6 ಕೋಟಿ ರೂಪಾಯಿಗಳು ರೈತರಿಗೆ ಬಾಕಿ ಇದ್ದಾರೆ. ಅವರಿಗೆ ಬಡ್ಡಿ ಕೊಡಿಸುತ್ತೀರಾ ? ರೈತರು ಹಗಲು ರಾತ್ರಿ ದುಡಿದು, ಬೆವರು ಸುರಿಸಿ, ಕಾದು, ಕಣ್ಣು ಕಟ್ಟಿ, ನಿದ್ದೆಗೆಟ್ಟು, ಬೆಳೆದಂಥ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಹಾಕಿ, ಬರಬೇಕಾದಂಥಹ ದುಡ್ಡನ್ನು ತೆಗೆದುಕೊಳ್ಳುವುದಕ್ಕೆ ಭಿಕ್ಷುಕರ ತರಹ ಸಕ್ಕರೆ ಕಾರ್ಖಾನೆಯ ಗೇಟಿನ ಹತ್ತಿರ ನಿಂತುಕೊಳ್ಳಬೇಕಾದ ಪರಿಸ್ಥಿತಿ ಇದೆ ಸ್ವಾಮಿ. ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬಿನಿಂದ ಸಕ್ಕರೆ ತೆಗೆದಾದ ಮೇಲೆ ಮೊಲಾಸಿಸ್ ಉಳಿಯುತ್ತದೆ. ಆ ಮೊಲಾಸಿಸ್‌ನಿಂದ ಎಲ್ಲಾ ತರಹದ ಮಾದಕ ಪಾನೀಯಗಳು ಇವತ್ತಿನ ದಿವಸ ತಯಾರಾಗುತ್ತಿದೆ. ಮಾದಕ ಪಾನೀಯಗಳು ತಯಾರಾಗಬೇಕಾದರೆ ಕಬ್ಬೇ ಇವತ್ತಿನ ದಿವಸ ಮೂಲ ಅಥವಾ ಬೇರೆ ಮಾಲ್ಟ್ ಅಂಥ ಆಹಾರ ಧಾನ್ಯಗಳು ಇದ್ದಾವೆ, ಅದರಿಂದ ಅದನ್ನು ತೆಗೆಯಬಹುದು. ಈ ಎರಡೇ ಇದಕ್ಕೆ ಮೂಲ. ವ್ಯವಸಾಯ ರಂಗದಿಂದ ಬರುವ ವಸ್ತುಗಳಿಂದ ಮಾತ್ರ ಈ ಮಾದಕ ಪಾನೀಯಗಳು ತಯಾರಾಗುತ್ತವೆ. ಇವತ್ತು ನೂರಾರು ರೂಪಾಯಿಗಳು ಬೆಲೆ ಬಾಳತಕ್ಕಂಥ ಮಾದಕ ಪಾನೀಯಗಳಿವೆ. ರೈತ ಒಂದು ಕ್ವಿಂಟಾಲ್ ರಾಗಿಯನ್ನು ಮಾರಿದರೆ ಅದಕ್ಕೆ ಒಂದು ಬಾಟಲ್ ಅಲ್ಲ ಕಾಲು ಬಾಟಲ್ ಪಾನೀಯ ಕೂಡ ಬರುವುದಿಲ್ಲ. ಇದರ ಬಗ್ಗೆ ನಾನು ಮುಖ್ಯ ಮಂತ್ರಿಗಳಿಗೆ ಹೇಳಿದ್ದೆ, ಅವರು ಅದಕ್ಕೆ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ನಿನ್ನೆಯೇ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ. ಎಕ್ಸೈಸ್ ಡಿಪಾರ್ಟ್‌ಮೆಂಟಿನಿಂದ ಸರ್ಕಾರಕ್ಕೆ 700 ಕೋಟಿ ಚಿಲ್ಲರೆ ಆದಾಯ ಬರುತ್ತಿದೆ. ನನ್ನ ಪ್ರಕಾರ ಅದು 1500 ಕೋಟಿ ರೂಪಾಯಿಗಳಾಗುತ್ತವೆ. ಅಷ್ಟು ಕೆಪಾಸಿಟಿ ಈ ಲಿಕ್ಕರ್‌ಗೆ ಇದೆ. ಇದಕ್ಕೆಲ್ಲಾ ರೈತ ಅಲ್ಲವೇ ಮೂಲ ?

ನೀವು ಕಬ್ಬು ಬೆಳೆದಂಥ ರೈತರಿಗೆ ಏನು ಕೊಡುತ್ತಿದ್ದೀರಿ ? ಒಂದು ಸಣ್ಣ ವೈನ್ ಶಾಪ್ ಇಟ್ಟಿದ್ದಾನಲ್ಲ ಅವನ ಮನೆಯಲ್ಲಿ 50 ಎಕರೆ 100 ಎಕರೆ ಜಮೀನು ಇಟ್ಟುಕೊಂಡಿರುವ ಸನ್ನಂಥವರು ಇವತ್ತಿನ ದಿವಸ ಕಸ ಗುಡಿಸಬೇಕು. ರೈತನಿಗೆ ಆ ಮಟ್ಟದಲ್ಲಿ ಇಟ್ಟಿದ್ದೀರಿ. ಕಬ್ಬನ್ನು ಬೆಳೆದು ಮೊದಲಿನಿಂದ ಕೊನೆಯವರೆಗೂ ಯಾವ ರೀತಿ ಲಾಭ ಬರುತ್ತದೆಯೋ ಅದರಲ್ಲಿ ರೈತನಿಗೆ ಸ್ವಲ್ಪ ಕೊಡಿ. ಕೊಡುತ್ತಿದ್ದೀರಾ ನೀವು ? ನಮ್ಮ ರಾಜ್ಯದಲ್ಲಿ ಎಕ್ಸೈಸ್ ದೊರೆಗಳಿದ್ದಾರಲ್ಲ ? ಆ ದೊರೆಗಳ ಒಬ್ಬನ ಸಮಾನ ಇಡೀ ರೈತ ವರ್ಗವನ್ನು ತೂಕ ಹಾಕುವುದಕ್ಕೆ ಆಗುತ್ತದೆಯೇ ಇವತ್ತಿನ ದಿವಸ ? 5 ಲಕ್ಷ ಅಥವಾ 10 ಲಕ್ಷ ಇಟ್ಟುಕೊಂಡು ಮಜವಾಗಿರತಕ್ಕ ಒಬ್ಬ ರೈತ ಎಲ್ಲಿಯಾದರೂ ಇದ್ದಾನೆಯೇ ? ಏಕೆ ಈ ರೀತಿ ? ರೈತನಿಗೆ ಪ್ರತಿಯೊಂದು ಹಂತದಲ್ಲೂ ಅವನ ರಕ್ತ ಹೀರಿ ಹೀರಿ ಅವನು ಎಲ್ಲಿ ಇರಬೇಕೋ ಅಲ್ಲೇ ಇಟ್ಟಿದ್ದೀರಿ. ಕಳೆದ ಒಂದು ವರ್ಷದಿಂದ ರೈತರುಗಳನ್ನು ಇನ್ನೂ ಅಧಃಪತನಕ್ಕೆ ತುಳಿಯತಕ್ಕಂಥ ಪ್ರಯತ್ನ ಇಡೀ ರಾಜ್ಯದಲ್ಲೇ ಅಲ್ಲ ಇಡೀ ದೇಶದಲ್ಲೇ ನಡೆಯುತ್ತಿದೆ. ಅದಕ್ಕೆ ಹೇಳುತ್ತೀರಿ, ವಾಷಿಂಗ್‌ಟನ್ ಅಥವಾ ಐಎಂಎಫ್‌ನಲ್ಲೊ; ನಿಮ್ಮ ಬೀಗದ ಕೈಯನ್ನು ತಿರುಗಿಸಿದರೆ ಇಲ್ಲಿ ನಿಮ್ಮ ಖಜಾನೆ ಓಪನ್ ಆಗುತ್ತದೆ. ನಿಮ್ಮ ಬೀಗದ ಕೈ ವಾಷಿಂಗ್‌ಟನ್‌ನಲ್ಲಿ ಇದೆ. ಇಲ್ಲಿ ನೀವು ಖಜಾನೆ ತೆಗೆಯುತ್ತೀರಿ. ಅವರ ಮಾತನ್ನು ಕೇಳಿಕೊಂಡು ಇಲ್ಲಿ ರೈತರುಗಳನ್ನು ತುಳಿಯುವುದಕ್ಕೆ ಹೊರಟಿದ್ದೀರಿ.

ಇವತ್ತು ರೈತ ಉತ್ಪಾದನೆ ಮಾಡತಕ್ಕ ಹತ್ತಿಯನ್ನು ಕೇಳುವವರಿಲ್ಲ. ಆಮೇಲೆ 300 ರೂಪಾಯಿ ಇದ್ದ ಬತ್ತದ ಬೆಲೆ ಕಡಿಮೆಯಾಗುತ್ತಿದೆ, ರಾಗಿ ಬೆಲೆ ಕಡಿಮೆಯಾಗುತ್ತಿದೆ. ರೇಷ್ಮೆ ಇಲ್ಲದಿದ್ದರೆ ನಾವು ಬದುಕುವುದಕ್ಕೇ ಆಗುವುದಿಲ್ಲ ಅಂಥಾ ಪರಿಸ್ಥಿತಿ ಇದೆ. ಕಳೆದ ವರ್ಷ ಕೇಜಿಗೆ 200 ರೂಪಾಯಿ ಇದ್ದ ರೇಷ್ಮೆಗೂಡಿನ ಬೆಲೆ ಈ ವರ್ಷ 70–80 ರೂಪಾಯಿಗೆ ಇಳಿದಿದೆ. ಹೊರ ದೇಶದಿಂದ ತರುತ್ತಿರತಕ್ಕಂಥ ರೇಷ್ಮೆ ಆಮದನ್ನು ನಿಲ್ಲಿಸಿ ಎಂದು ಇದೇ ಸದನದಲ್ಲಿ ಚರ್ಚೆ ಆಯಿತು. ಇದರ ಬಗ್ಗೆ ನಿಮ್ಮ ದೆಹಲಿ ದೊರೆಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದಕ್ಕೆ ಒಂದು ನಿಯೋಗವನ್ನು ಕರೆದುಕೊಂಡು ಹೋಗಬೇಕೆಂದು ಮಾಡಿದ್ದೀರಿ. ಈ ನಿಯೋಗದಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ನನ್ನ ದೃಢವಾದ ನಂಬಿಕೆ. ಆದರೂ ಇದನ್ನು ತಡೆಯಬಹುದೇನೋ ಎಂಬ ಒಂದು ಆಸೆ ಅಷ್ಟೇ ವಿನಹ ಬೇರೆ ಏನೂ ಇಲ್ಲ. ಈ ದೇಶದ ವ್ಯವಸ್ಥೆಯಲ್ಲಿ ನೂರೆಂಟು ಲಾಬಿಗಳು ಇವೆ. ಆದರೆ ರೈತರ ಲಾಬಿ ಎನ್ನುವುದು ಇಲ್ಲವೇ ಇಲ್ಲ. ಇವತ್ತು ಇವರಿಗೆ ಯಾರೂ ಕೂಡಾ ರಕ್ಷಣೆ ಕೊಡುತ್ತಿಲ್ಲ. ವಾರಣಾಸಿಯಲ್ಲಿರತಕ್ಕಂಥ ರೇಷ್ಮೆ ವರ್ತಕರು ಏನು ಬೇಕಾದರೂ ಮಾಡುತ್ತಾರೆ. ಎಷ್ಟು ಬೇಕಾದರೂ ಹೊರಗಡೆಯಿಂದ ರೇಷ್ಮೆಯನ್ನು ತರಿಸಿ ಕಸಕ್ಕಿಂತ ಕಡಿಮೆ ಮಾಡುವುದು ಅವರಿಗೆ ಗೊತ್ತಿದೆ. ಅದಕ್ಕಾಗಿ ದೆಹಲಿಯ ದೊರೆಗಳನ್ನು ಓಲೈಸತಕ್ಕಂಥ ಕಲೆ ಅವರಿಗೆ ಗೊತ್ತಿದೆಯೇ ಹೊರತು ನಮಗೆ ಏನು ಗೊತ್ತಿದೆ ? ಇವತ್ತು ರೇಷ್ಮೆ ಬೆಳೆಯುವವರು ಯಾರಿದ್ದಾರೆ ಅವರನ್ನು ನೆಲಸಮ ಮಾಡತಕ್ಕಂಥ ಕೆಲಸ ನಡೆದಿದೆ. ತರಕಾರಿಗಳ ಬೆಲೆ ಏನಾಗಿದೆ ಅಧ್ಯಕ್ಷರೆ, ಇವತ್ತು ಟೊಮೇಟೋ ಬೀದಿಯಲ್ಲಿ ಬಿದ್ದಿರತಕ್ಕದ್ದನ್ನು ತಾವು ನಮ್ಮ ಕ್ಷೇತ್ರಕ್ಕೆ ಬಂದರೆ ತೋರಿಸುತ್ತೇನೆ. ರಸ್ತೆಗಳಲ್ಲಿ ತರಕಾರಿ ಬೀಳುವಂಥ ಪರಿಸ್ಥಿತಿ ಬಂದಿದೆ. ಬೆಳೆ ಏನು ಬಂದಿದೆ ? ಆ ಬೆಳೆಯನ್ನು ಕೀಳತಕ್ಕ ಕೂಲಿಯೂ ಬರದೇ ಇರತಕ್ಕಂಥ ಪರಿಸ್ಥಿತಿಗೆ ಇವತ್ತು ಬಂದಿದೆ. ಈ ತರಕಾರಿ ಬೆಳೆಯತಕ್ಕಂಥವರಿಗೆ ಏನು ರಕ್ಷಣೆ ಕೊಟ್ಟಿದ್ದೀರಿ ಸ್ವಾಮಿ ? ಈ ದೇಶದ ಸಮಾಜ ನಮಗೆ ಉದ್ಧಾರ ಮಾಡುತ್ತದೆಂದು ನಂಬಿ ನಂಬಿ ರೈತ ಬಹಳ ತೊಂದರೆಗೆ ಸಿಕ್ಕಿ ಹಾಕಿಕೊಂಡಿದ್ದಾನೆ. ರಾಜಕೀಯ ಕಾರಣಗಳಿಂದ ಏನು ನಡೆಯುತ್ತಿದೆ ಈ ದೇಶದಲ್ಲಿ ಅಂದರೆ, ಇವರು ಚಾಪೆ ಕೆಳಗಡೆ ತೂರುವುದಕ್ಕೆ ಸಾಧ್ಯವಾಗುತ್ತದೆ. ಆದರೆ ರಂಗೋಲೆ ಕೆಳಗೆ ತೂರತಕ್ಕಂಥಾದ್ದು, ಚುನಾವಣೆ ಬಂತು ಅಂದರೆ, ಎಲ್ಲಾ ರೈತರನ್ನು ಉದ್ಧಾರ ಮಾಡುತ್ತೇವೆಂದು ಎಲ್ಲರೂ ಹೇಳಿದ್ದೇ ಹೇಳಿದ್ದು.

ಶ್ರೀ ಎಂ.ವಿ. ವೆಂಕಟಪ್ಪ:– ಕಾಂಕ್ರೀಟ್ ಕೆಳಗೆ ತೂರುವುದು ?

ಶ್ರೀ ಸಿ. ಬೈರೇಗೌಡ:– ಕಾಂಕ್ರೀಟ್ ಕೆಳಗೆ ಹೆಗ್ಗಣಗಳು ತೂರುತ್ತವೆ. ನಾವು, ನೀವೂ ತೂರುವುದಕ್ಕಾಗುವುದಿಲ್ಲ. ಕಾಂಕ್ರೀಟ್ ಕೆಳಗೆ ತೂರುವುದಕ್ಕೆ ಹೋಗಿಯೇ ಈ ದೇಶಕ್ಕೆ ಈ ಗತಿ ಬಂದಿರತಕ್ಕಂಥಾದ್ದು.

ಆದ್ದರಿಂದ ಈ ವ್ಯವಸ್ಥೆಗೆ ಸಿಕ್ಕಿ ನುಚ್ಚು ನೂರಾಗಿರತಕ್ಕಂಥ ರೈತರನ್ನು ಕೊನೆಯ ಪಕ್ಷ ನಾನು ಇನ್ನು ಏನನ್ನೂ ಕೂಡ ಕೇಳುತ್ತಿಲ್ಲ. ನಾವು ಈ ಕಡೆ ಇರತಕ್ಕಂಥವರು, ನಂಜುಂಡಸ್ವಾಮಿಯವರು ಇದರ ಬಗ್ಗೆ ಏನು ಹೇಳುತ್ತಾರೋ ಗೊತ್ತಿಲ್ಲ. ನಾವು ಈ ಕಡೆ ಇರತಕ್ಕಂಥವರು ನಾವೊಂದು ತೀರ್ಮಾನಕ್ಕೆ ಬಂದಿದ್ದೇವೆ. ಕೊನೆಯ ಪಕ್ಷ ಒಂದೇ ಒಂದು ಅವಧಿಗೆ, ನಾವು ಇನ್ನು ಮುಂದೆ ಸಾಲ ವಜಾ ಮಾಡಿ ಎಂದು ನಾವು ಕೇಳುವುದಿಲ್ಲ, ಅದು ಮೂರ್ಖತನ. ಮೊದಲಿನಿಂದಲೂ ಕೂಡ ನಾನು ಇಲ್ಲಿ ಅದೇ ಮಾತನ್ನು ಹೇಳುತ್ತಿದ್ದೇನೆ. ಸಾಲ ವಜಾ ಮಾಡುವುದಕ್ಕೆ ನನ್ನ ವಿರೋಧ ಇದೆ. ಅದರೆ, ಇವತ್ತಿನ ದಿವಸ ಎಲ್ಲರನ್ನೂ ನಂಬಿ ರೈತರು ವಂಚಿತರಾಗಿದ್ದಾರೆ. ಹಾಗೆ ನಂಬಿದವರಲ್ಲಿ ನಾನೂ ಸಹ ಒಬ್ಬ. ನಾನು ಸಾಲವನ್ನು ಕಟ್ಟಲಿಕ್ಕೆ ಆಗಲಿಲ್ಲ ಕಟ್ಟಿಲ್ಲ. ಒಂದೇ ಒಂದು ಅವಧಿಗೆ ಇರತಕ್ಕಂಥ ಸಾಲ, ಸಾಲದ ಮೇಲೆ ಇರತಕ್ಕಂಥ ಬಡ್ಡಿ ಮತ್ತು ಸುಸ್ತಿ ಬಡ್ಡಿ ಇದನ್ನು ವಜಾ ಮಾಡಿ. ಹಿಂದೆ ಅನೇಕ ಕಡೆ ತೆರೆದ ಬಾವಿಗಳನ್ನು ತೆಗೆಸುತ್ತಿದ್ದರು. ಅದು ರಾಜ್ಯದ ಅನೇಕ ಕಡೆಗಳಲ್ಲಿ ಇತ್ತು. ಇವತ್ತು ನೀರಿನ ಮಟ್ಟ 300–400 ಅಡಿಗೆ ಹೋಗಿದೆ. ಈ ವರ್ಷ ತೆಗಿಸಿದಂತಹ ಕೊಳವೆ ಬಾವಿಯಲ್ಲಿ ಮುಂದಿನ ವರ್ಷ ನೀರು ಇರುವುದಿಲ್ಲ. ಏಕೆಂದರೆ ಅವುಗಳ ಸಂಖ್ಯೆ ಜಾಸ್ತಿಯಾಗಿ ನೀರು ಹೀರುವುದು ಯಥೇಚ್ಛವಾಗಿ ನಡೆಯುತ್ತಿದೆ. ಆದ್ದರಿಂದ ಕೊಳವೆ ಬಾವಿಗಳಲ್ಲಿ ನೀರಿಲ್ಲ. ಯಾವ ತೆರೆದ ಬಾವಿಗಳಲ್ಲಿಯೂ ನೀರಿಲ್ಲ. ತೆರೆದ ಬಾವಿಗಳು ಏನಿದ್ದಾವೆ ಅವೆಲ್ಲವೂ ಅನಾಮತ್ತಾಗಿ ಇವತ್ತಿನ ದಿವಸ ನೀರು ಇಲ್ಲದೆ ಬತ್ತಿ ಹೋಗಿವೆ. ಅವುಗಳ ಮೇಲೆ ಇದ್ದಂತಹ ಸಾಲ, ಅದನ್ನು ರೈತನು ಮಾಡಿದ್ದಲ್ಲ. ಅದು ವಾಸ್ತವಿಕವಾಗಿ, ಪ್ರಕೃತಿಯಿಂದ ಆಗಿರತಕ್ಕಂಥದ್ದು, ಅದಕ್ಕೆ ರೈತನು ಜವಾಬ್ದಾರನಲ್ಲ. ಅದರ ಮೇಲೆ ಇರತಕ್ಕಂಥ ಸಾಲವನ್ನು ಪೂರ್ತಿ ವಜಾ ಮಾಡಬೇಕು. ಒಂದು ಟೈಮ್ ಆಪರೇಷನ್, ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜ್ಞಾ ಮಾಡಿ, ಮುಂದೆ ರೈತರೆಲ್ಲರಲ್ಲೂ ಕೂಡ ಡಿಸಿಪ್ಲೀನ್ ತರಬೇಕಾಗಿರತಕ್ಕಂಥದ್ದು ಅವಶ್ಯಕತೆ ಇದೆ. ಅವಧಿಯೊಳಗಾಗಿ ಸಾಲವನ್ನು ವಾಪಸ್ಸು ಕೊಡತಕ್ಕಂಥ ರೈತರಿಗೆ ನೀವು ಕಡಿಮೆ ದರ ಬಡ್ಡಿ ಹಾಕಬೇಕು. ಈ ಯೋಜನೆ ಮೊದಲೇ ಜಾರಿಯಲ್ಲಿತ್ತು. ಅದನ್ನು ಜಾರಿಗೆ ತನ್ನಿ. ಶೇಕಡ 7ರಷ್ಟು ಬಡ್ಡಿಯಲ್ಲಿ ಕಡಿಮೆ ಮಾಡತಕ್ಕ ಪದ್ಧತಿ ಇತ್ತು. ಇದನ್ನು ಜಾರಿಗೆ ತನ್ನಿ. ಸಾಲವನ್ನು ವಾಪಸ್ಸು ಕಟ್ಟುವುದಕ್ಕೆ ಕನಿಷ್ಠ ಅಂದರೆ 6 ರಿಂದ 8 ತಿಂಗಳಾದರೂ ಅವಕಾಶ ಕೊಡಬೇಕು. ಕೆ.ಇ.ಬಿ. ವಿಚಾರದಲ್ಲಿಯೂ ಸಾಲ ಹಾಗೆಯೇ ಉಳಿದುಕೊಂಡಿದೆ. ರೈತರ ಮೇಲೆ ಇರುವ ಸಾಲವನ್ನು ಪೂರ್ತಿಯಾಗಿ ವಜಾ ಮಾಡಿದ್ದೇವೆಂದು ಹೇಳುತ್ತಾರೆ. ಸರ್ಕಾರಕ್ಕೆ ಯಾರು ಪೂರ್ತಿಯಾಗಿ ವಜಾ ಮಾಡಿ ಎಂದು ಅರ್ಜಿ ಕೊಟ್ಟಿದ್ದರೋ ನಮಗಂತೂ ಗೊತ್ತಿಲ್ಲ. ನಾನು ಅನೇಕ ಕಡೆ ರೈತರನ್ನು ಕೇಳಿದ್ದೇನೆ ಏನಪ್ಪ ಪೂರ್ತಿಯಾಗಿ ಕೆ.ಇ.ಬಿ.ಯಿಂದ ನಿಮಗೆ ಪುಕ್ಕಟೆ ಪವರ್ ಕೊಡುತ್ತಿದ್ದಾರಲ್ಲಾ ಎಂದು ಕೇಳಿದೆ, ಹೌದು ಸ್ವಾಮಿ ನಾವು ಅವರಿಗೆ ಕರೆಂಟ್ ಚಾರ್ಜ್ ಅನ್ನು ಕೊಡುವಷ್ಟು ಇಲ್ಲ, ನೀವು ಕರೆಂಟ್ ಕೊಡ್ರಪ್ಪ ಅಂತ ನಾವು ಅವರಿಗೆ ಕೇಳುವಷ್ಟು ಇಲ್ಲ. ಒಬ್ಬ ರೈತನೂ ಕೂಡ ಅದನ್ನು ಒಪ್ಪುತ್ತಿಲ್ಲ. ಆದರೆ ಇವತ್ತು ಅದರ ಸಾಲವೂ ಉಳಿದಿದೆ. ಅದನ್ನು ಸೇರಿಸಿ ಕೆ.ಇ.ಬಿ.ಯಲ್ಲಿರತಕ್ಕ ಅರಿಯರ್ಸ್ ರೈತರಿಂದ ಬರಬೇಕಾದ್ದು ಏನಿದೆ ಅದಕ್ಕೂ ಕೂಡ ನೀವು ಇದೇ ಪದ್ಧತಿಯನ್ನು ಅನುಸರಿಸಿದ್ದೇ ಆದರೆ ನಿಮಗೆ ಬರಬೇಕಾಗಿರತಕ್ಕ ಹಣ ವಾಪಸ್ಸು ಬರುತ್ತದೆ. ಇದನ್ನು ಮಾಡದೆ ಇದ್ದರೆ ಸ್ವಾಮಿ ನೀವು ಯಾರು ಬಂದರೂ ವಸೂಲಿ ಮಾಡುವುದಕ್ಕೆ ಆಗುವುದಿಲ್ಲ. ನೀವು ಸೈನ್ಯವನ್ನು ತೆಗೆದುಕೊಂಡು ಹೋದರೂ ವಸೂಲಿ ಮಾಡುವುದಕ್ಕಾಗುವುದಿಲ್ಲ. ಆ ರೈತರ ಭೂಮಿಯನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅಧಿಕಾರ ಇದೆ, ತೆಗೆದುಕೊಳ್ಳುತ್ತೀರಿ, ಅದನ್ನು ಏನು

ಮಾಡುತ್ತೀರಾ ? ಒಬ್ಬ ರೈತನನ್ನ ನೀವು ಭೂಮಿಯಿಂದ ಹೊರಗಡೆ ಹಾಕುವುದಕ್ಕೆ ಸಾಕಾಗುತ್ತದೆಯೇ ? ಆಗುವುದಿಲ್ಲ. ಸಾಧ್ಯವೇ ಇಲ್ಲದೆ ಇರತಕ್ಕಂಥದ್ದು. ಆದ್ದರಿಂದ ಈ ವಾಸ್ತವಾಂಶಗಳನ್ನು ದಯವಿಟ್ಟು ಗಮನಿಸಿ. ನೀವು ಒಳ್ಳೆಯ ಕೆಲಸವನ್ನು ಕೆಲವು ಮಾಡಿದ್ದೀರಿ. ಎಕ್ಸೈಜ್ ಒಂದರಲ್ಲಿ ಬಾಟ್ಲಿಂಗ್ ವ್ಯವಸ್ಥೆಯನ್ನು ತೆಗೆದುಹಾಕಿದ್ದರಿಂದ ಸರ್ಕಾರದ ಅಂಕಿ ಅಂಶಗಳ ಪ್ರಕಾರ ನಿಮಗೆ 100 ಕೋಟಿ ರೂಪಾಯಿಗಳ ಆದಾಯ ಹೆಚ್ಚಾಗಿ ಬರುತ್ತದೆ. ಅದನ್ನು 200–250 ಕೋಟಿ ರೂಪಾಯಿ ಬರೀ ಬಾಟ್ಲಿಂಗ್ ವ್ಯವಸ್ಥೆ ಸರಿಪಡಿಸಿದರೆ ಸರ್ಕಾರಕ್ಕೆ ಆದಾಯ ಬರುತ್ತದೆ ಮತ್ತು ಇನ್ನು ಕೆಲವು ಎಕ್ಸೈಜ್‌ನಲ್ಲಿರತಕ್ಕದ್ದನ್ನು ಅನುಸರಿಸಿದರೆ, ನಿಮಗೆ 1500 ಕೋಟಿ ರೂಪಾಯಿ ಬರುತ್ತದೆ. ನಾನು ಇದನ್ನು ಒಂದು ಸವಾಲೆಂದು ಹೇಳುತ್ತಿದ್ದೇನೆ. ನಾನು ಹೇಳಿದಂತಹ ರೀತಿಯಲ್ಲಿ ಇವರು ಮಾಡಿದ್ದಾದರೆ ಆ ವಿಲ್‌ಪವರ್ ಸರ್ಕಾರಕ್ಕೆ ಇದ್ದಿದ್ದು ಆದರೆ 1500 ಕೋಟಿ ರೂಪಾಯಿ ಇವತ್ತಿನ ದಿವಸ ಆದಾಯ ಬರುವುದಕ್ಕೆ ಸಾಧ್ಯವಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಸ್ಪಷ್ಟವಾಗಿ ಹೇಳಿದರು. ಮಾನ್ಯ ಬೈರೇಗೌಡರು ಇದರ ಬಗ್ಗೆ ಸಲಹೆಯನ್ನು ಕೊಟ್ಟಿದ್ದರು. ಆ ಸಲಹೆಯ ಮೇರೆಗೆ ಇದನ್ನು ಒಪ್ಪಿಕೊಂಡು ಮಾಡಿದ್ದೇವೆಂದು ಹೇಳಿದರು. ಅದಕ್ಕೆ ಕಾದು ನೋಡೋಣ 1500 ಸಾವಿರ ಕೋಟಿ ರೂಪಾಯಿಯನ್ನು ಕೊಡಿಸುತ್ತೇವೆಂದು ಹೇಳಿದ್ದೀರಿ, ನಾವು ಇದನ್ನೆಲ್ಲ ಅನೌನ್ಸ್ ಮಾಡಿದ್ದೇವೆ. ಅದರೊಳಗೆ 1500 ಕೋಟಿ ಬಂದರೆ ಮುಂದಿನ ಕಾರ್ಯಕ್ರಮಗಳು ಎಲ್ಲಾ ನಡೆಯುತ್ತದೆ.

ಶ್ರೀ ಸಿ. ಬೈರೇಗೌಡ:– ಇನ್ನು ಕೆಲವು ಇವೆ ಅದನ್ನು ಹೇಳುತ್ತೇನೆ. ಇನ್ನು ಮಾಡಬೇಕಾಗಿರತಕ್ಕಂಥದ್ದು ಇವೆ ಅದನ್ನು ಹೇಳುತ್ತೇನೆ. ಅದನ್ನು ಮಾಡಿದರೆ ಖಂಡಿತ ಒಂದುವರೆ ಸಾವಿರ ಕೋಟಿ ರೂಪಾಯಿ ಬರುತ್ತದೆ. ನಾವು ಕೇಳುತ್ತಿರತಕ್ಕ ಈ ಬಡ್ಡಿ ಮತ್ತು ಸುಸ್ತಿ ಬಡ್ಡಿ 180 ಕೋಟಿ ರೂಪಾಯಿ ಆಗಬಹುದು, ಅಥವಾ 150 ಕೋಟಿ ರೂಪಾಯಿಯಾಗಬಹುದು. ಅದಕ್ಕಿಂತ ಬಹುಪಟ್ಟು ರೈತನೇ ಮೂಲವಾಗಿರತಕ್ಕ ಕಬ್ಬು ಬೆಳೆಯಿಂದ ಬರತಕ್ಕ ಮೊಲಾಸಿಸ್ ಒಂದು ಬಾಬಿನಲ್ಲಿ ಇದಕ್ಕಿಂತ 3–4 ಪಟ್ಟು ನಿಮಗೆ ಲಾಭ ಬರುತ್ತದೆ. ಬೇರೆ ನೀವು ಏನನ್ನೂ ಕೊಡುವುದಕ್ಕೆ ಹೋಗಬೇಡಿ. ರೈತನಿಂದ ಏನು ಪಡೆಯುತ್ತಿದ್ದೀರೋ ಅದನ್ನು ರೈತರಿಗೆ ವಾಪಸ್ಸು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ. ಇದನ್ನು ನಾವು ಯಾರು ಬೇಡ ಅಂತ ಹೇಳುವುದಿಲ್ಲ. ಇನ್ನು ಇರತಕ್ಕಂಥ 2 ವರ್ಷದ ಅವಧಿಯಲ್ಲಿ ಈ ವಿಚಾರವನ್ನು ನಾನಂತೂ ಮಾತನಾಡುವುದಕ್ಕೆ ತಯಾರಿಲ್ಲ. ಅದೇ ರೀತಿ ಈ ಕಡೆ ಇರತಕ್ಕಂಥ ನಮ್ಮ ಸ್ನೇಹಿತರು ಈ ವಿಚಾರದ ಬಗ್ಗೆ ರೈತರ, ಬಡ್ಡಿ ಮತ್ತು ಸಾಲದ ವಿಚಾರದ ಬಗ್ಗೆ ಮಾತನಾಡುವುದಕ್ಕೆ ನಾವು ತಯಾರಿಲ್ಲ. ಈ ಜಂಟಲ್‌ಮೆನ್ಸ್ ಅಗ್ರಿಮೆಂಟ್‌ಗೆ ನಾವು ಬರುವುದಕ್ಕೆ ತಯಾರಿದ್ದೇವೆ. ಇದರ ಪ್ರತಿಫಲ ನಿಮಗೆ ಸಿಕ್ಕುತ್ತದೆ. ನಾವು ಇದಕ್ಕೆ ನಿಮಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ದಯವಿಟ್ಟು ಇದನ್ನು ಉಪಯೋಗಿಸಿಕೊಂಡು ಇದರ ಮೂಲಕ ರೈತರನ್ನು ರಕ್ಷಣೆ ಮಾಡಿ, ಅವರ ನೆರವಿಗೆ ಬರಬೇಕು ಅನ್ನತಕ್ಕ ಮಾತನ್ನು ಅಧ್ಯಕ್ಷರ ಮೂಲಕ ತಮಗೆ ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೆ, ಬಹುಶಃ ರೈತರ ಸಹಕಾರಿ ಸಂಘಗಳಿಂದ ಪಡೆದಂತಹ ಸಾಲ ಮನ್ನಾ ಆಗಬೇಕೆಂದು ಹೋರಾಟ ಮಾಡಿ ಮಾಡಿ, ಒಂದು ರೀತಿ ನಾನು ಕಲ್ಲು ಬಂಡೆಯಂತಹ ಈ ಸರ್ಕಾರಕ್ಕೆ ಮನವರಿಕೆಯನ್ನು ಮಾಡಿಕೊಡುವುದಕ್ಕೆ ಆಗದೇ ಅನಿವಾರ್ಯವಾಗಿ ನಾನು ಸೋತಿದ್ದೇನೆ. ರೈತನ ಹಿತದೃಷ್ಟಿಯಿಂದ ಸರ್ಕಾರಕ್ಕೆ ನಾನು ಶರಣಾಗಿದ್ದೇನೆ. ಬಹುಶಃ ಈ ಸದನದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ರೈತರನ್ನು ಋಣಮುಕ್ತರನ್ನಾಗಿ ಮಾಡುತ್ತೇವೆ, ಅವನು ಗೌರವದಿಂದ ನೆಮ್ಮದಿಯಿಂದ ಈ ಭೂಮಿ ತಾಯಿ ಸೇವೆಯನ್ನು ಮಾಡತಕ್ಕ

ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿ ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಮಾಡುವ ಯೋಜನೆಯನ್ನು ಘೋಷಣೆ ಮಾಡಿತ್ತು. ಅದನ್ನು ಕಾರ್ಯರೂಪಕ್ಕೆ ತರಬೇಕು. ಅಲ್ಲಿರುವಂಥ ಷರತ್ತುಗಳು ಈ ರಾಜ್ಯದ ರೈತನಿಗೆ ಅನುಕೂಲವಾಗುತ್ತಿಲ್ಲ ಎಂದು ಒತ್ತಾಯ ಮಾಡಿದ್ದು ನಿಜ, ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಅದಕ್ಕೆ ಮುಂದೆ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ಮನ್ನಾದ ಬಗ್ಗೆ ಕೇಂದ್ರಕ್ಕೆ ಒತ್ತಡ ತಂದು ಮಾಡುತ್ತೇವೆಂದು ಹೇಳಿ ಪ್ರಣಾಳಿಕೆಯಲ್ಲಿ ಏನು ಹೇಳಿದ್ದರೋ ಅದನ್ನು ಕಾರ್ಯರೂಪಕ್ಕೆ ತನ್ನಿ ಎಂದು 46 ದಿವಸ ಪ್ರಾರಂಭದಲ್ಲಿ ಧರಣಿ ಕುಳಿತುಕೊಂಡೆವು. ಆಗ ಸದನ ಮುಂದೆ ಹೋಯಿತು. ಮಾನ್ಯ ವೀರೇಂದ್ರ ಪಾಟೀಲರು ಸಾಲ ವಸೂಲಾತಿಗೆ ತಡೆಯಾಜ್ಞೆಯನ್ನು ಕೊಟ್ಟರು. ನಾನು ಈ ಸದನದ ಮೂಲಕ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ದಯಮಾಡಿ ಈ ನಾಡಿನ ಈ ದೇಶದ ರೈತನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ರಾಜಕೀಯ ಬದಿಗೊತ್ತಿ ಇವತ್ತಾದರೂ ಮಾಡಬೇಕಾಗಿದೆ. ರೈತನ ಸಾಲ ಮನ್ನಾ ಯೋಜನೆ ಮಾನ್ಯ ಯಡಿಯೂರಪ್ಪ ಕೇಳಿದ್ದುದು ಅಲ್ಲ, ಈ ದೇಶದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಹಗಲು ರಾತ್ರಿ ಹೊಲಗದ್ದೆಗಳಲ್ಲಿ ಬೆವರು ಸುರಿಸಿ ದುಡಿದಂತಹ ರೈತ ತನ್ನ ಕಾಲ ಮೇಲೆ ತಾನು ನಿಲ್ಲುವಂತಹ ಶಕ್ತಿ ಬರದೇ ಕುಗ್ಗಿ ಹೋಗಿದ್ದ, ಇದಕ್ಕಾಗಿ ಕೇಂದ್ರ ಸರ್ಕಾರವೇ ಮುಂದಾಲೋಚನೆ ಮಾಡಿ ಈ ಸ್ಕೀಮ್‌ನ್ನು ತಂದಿತ್ತು. ಅವತ್ತು ರೈತರ ಸಾಲ ಮನ್ನಾ ಯೋಜನೆಯನ್ನು ಜಾರಿಗೆಯನ್ನು ತರುತ್ತೇವೆಂದು ಹೇಳಿದಾಗ ಯಾವುದೇ ಷರತ್ತುಗಳನ್ನು ಹೇಳಲಿಲ್ಲ. ಎಲ್ಲಾ ರೈತರ ಎಲ್ಲಾ ತರಹದ ಸಾಲ ಮನ್ನಾವನ್ನು ನಮಗೆ ಅಧಿಕಾರವನ್ನು ಕೊಟ್ಟರೆ ಮನ್ನಾ ಮಾಡುತ್ತೇವೆಂದು ಅಂದಿನ ಕೇಂದ್ರ ಸರ್ಕಾರ ಅವತ್ತು ಹೇಳಿತ್ತು. ಅಧಿಕಾರ ಬಂತು, ಸಾಲ ಮನ್ನಾ ಮಾಡಲಿಲ್ಲ. "Agriculture & Rural Debt relief scheme 1990 was introduced by the Government of India to help the farmers to come out of the debt trap and improve the flow of credit to them. Unfortunately, the objectives of the scheme have not been achieved." ಇದನ್ನು ಯಾರು ಹೇಳಿದ್ದಾರೆ. ಇದನ್ನು ಹೇಳಿದವರು ಮಾನ್ಯ ಯಡಿಯೂರಪ್ಪ ಅಲ್ಲ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಂತಹ ಮಾನ್ಯ ಬಂಗಾರಪ್ಪನವರು ಪ್ರಧಾನಿಯವರಿಗೆ ಮನವಿ ಕೊಟ್ಟಾಗ ಹೇಳಿದರು.

ಎಲ್ಲಾ ವಿರೋಧ ಪಕ್ಷದ ನಾಯಕರನ್ನು ಕರೆದುಕೊಂಡು ಹೋದರು. ಏಕೆ, ಒಂದೂವರೆ ವರ್ಷದಿಂದ ಸತತವಾಗಿ ಹೋರಾಟ ಆದ ಮೇಲೆ ಪ್ರಧಾನಿಯವರಿಗೆ, ಹಣಕಾಸಿನ ಸಚಿವರಿಗೆ, ರಾಜ್ಯದ ಪರಿಸ್ಥಿತಿಯನ್ನು ಮನದಟ್ಟು ಮಾಡೋಣ ಎಂದು ನಮ್ಮನ್ನು ಕರೆದುಕೊಂಡು ಹೋದರು. 2–10–89ರವರೆಗೆ ಏನೇನು ಷರತ್ತು ಹಾಕಿದ್ದರು, ಆ ಷರತ್ತುಗಳಿಂದ ಈ ರಾಜ್ಯದ ಸಾಲ ಮನ್ನಾ ಆಗಲಿಲ್ಲ. ಬೇರೆ ರಾಜ್ಯದಲ್ಲಿ ಇದು ಉಪಯೋಗ ಆಯಿತು ಎನ್ನುವ ಮಾತನ್ನು ಪ್ರಧಾನಿಯವರಿಗೆ ಮನದಟ್ಟು ಮಾಡುವಂತಹ ಪ್ರಯತ್ನ ಮಾಡಿದೆವು. ಶ್ರೀ ಚಂದ್ರೇಗೌಡರು, ಶ್ರೀ ಬೈರೇಗೌಡರು, ನಾವೆಲ್ಲರು ಒಟ್ಟಿಗೆ ಸಹಿ ಮಾಡಿದ್ದೇವೆ.

The scheme is best with several difficulties; insisting on anewari is not practical. There is not consistent data for the relevant period and it is causing confusion to seek relief where it is due. ಆಣೆವಾರಿ, ಪಹಣಿ, ಸರಿಯಾಗಿ ದಾಖಲೆ ಇಲ್ಲದ ಪರಿಣಾಮ ಈ ಸಾಲದ ಮನ್ನಾ ಯೋಜನೆಯನ್ನು ಜಾರಿಗೆ ತರುವುದಕ್ಕೆ ಆಗುತ್ತಾ ಇಲ್ಲ. ಇದರಿಂದ ವಿಲ್‌ಫುಲ್ ಡಿಫಾಲ್ಟರ್ಸ್‌ಗೆ ಮಾತ್ರ ಅನುಕೂಲವಾಗಿದೆ, ಇದೆಲ್ಲವನ್ನು ಬದಿಗೊತ್ತಿ ತಕ್ಷಣ ರೈತನ ಎಲ್ಲಾ ಸಾಲ ಮನ್ನಾ ಮಾಡಬೇಕೆಂದು ಪ್ರಧಾನಿಯವರಿಗ ಮನವರಿಕೆ ಮಾಡಿದೆವು 21–9–91ರಂದು ಪ್ರಧಾನಿಯವರಿಗೆ ಒಂದು ಮನವಿಯನ್ನು ಕೊಟ್ಟ ಮೇಲೆ ನಾವು ಬಂದು

ಕುಳಿತುಕೊಂಡೆವು. ಎಲ್ಲಾ ಪಕ್ಷದ ಮುಖಂಡರು ಇದ್ದರು. ಆಗ ಶ್ರೀ ಬಂಗಾರಪ್ಪನವರು ಒಂದು ಮಾತನ್ನು ಹೇಳಿದರು. ಯಡಿಯೂರಪ್ಪನವರೆ ಇವತ್ತು ನೀವು ಸಾಲ ಮನ್ನಾ ಎನ್ನುವುದನ್ನು ಹೇಳದೆ ಇದ್ದರೆ ಆ ರೀತಿ ಒತ್ತಾಯ ಮಾಡದೆ ಇದ್ದರೆ ನಾನು ಇಲ್ಲಿ ತೀರ್ಮಾನ ತೆಗೆದುಕೊಂಡು ಎಲ್ಲಾ ರೈತರ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇನೆ ಎಂದು ಹೇಳಿದರು. ಕರ್ನಾಟಕ ಭವನದಲ್ಲಿ ಶ್ರೀ ವಾಟಾಳ್ ನಾಗರಾಜ್, ಶ್ರೀ ಬೈರೇಗೌಡ, ಶ್ರೀ ಚಂದೇಗೌಡ, ಎಲ್ಲಾ ಇದ್ದಾಗ ಬಂಗಾರಪ್ಪನವರು ಒಪ್ಪಿಕೊಂಡರು, ಆದರೆ ನಾವು ಇವತ್ತು ನಿಮ್ಮ ಸರ್ಕಾರ ಇದೆ. ಕೇಂದ್ರಸರ್ಕಾರಕ್ಕೆ ಮನದಟ್ಟು ಮಾಡಿ ರೈತರಿಗೆ ರಿಲೀಫ್ ಕೊಡಿ, ನಿಮಗೆ ಗೌರವ ಬರುತ್ತದೆ, ಸರ್ಕಾರಕ್ಕೆ ಒಳ್ಳೆಯದಾಗುತ್ತದೆ; ಎಂದು ಒತ್ತಾಯ ಮಾಡಿದೆವು, ಅದು ಆಗಲಿಲ್ಲ. ಏಕೆಂದರೆ ಅವತ್ತು ನಾವು ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವ ಮಾತನ್ನು ಒಪ್ಪಲಿಲ್ಲ. ಇವತ್ತು ಏಕೆ ನಿಯಮ 68ರ ಪ್ರಕಾರ ಸೂಚನೆಯನ್ನು ಕಳುಹಿಸಿದ್ದೇವೆ. ಇದನ್ನು ಕಳುಹಿಸಿದ ಉದ್ದೇಶ ಏನೆಂದರೆ ಈ ರೀತಿ ಕೇಂದ್ರ ಸರ್ಕಾರ ಹೇಳಿದ ಮಾತನ್ನು ಒಪ್ಪಿಕೊಂಡು ನಾವು ಕೊಟ್ಟಂತಹ ಭರವಸೆಗಳನ್ನು ಒಪ್ಪಿಕೊಂಡು, ಈ ಸರ್ಕಾರ ಸನ್ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಗಳಾಗಿ ಒಳಗಡೆ ಬಂದ ದಿವಸವೇ ಸಾಲ ವಸೂಲಿಗೆ ತಡೆಯಾಜ್ಞೆಯನ್ನು ಕೊಟ್ಟರು. ತತ್ಪರಿಣಾಮ ನಾಡಿನ ರೈತರು ಅಂದುಕೊಂಡರು. ನಮ್ಮ ಸಾಲ ಮನ್ನಾ ಆಗಬಹುದು ಎಂದು, ಆಗಲಿಲ್ಲ. ಅದು ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇಲ್ಲದ ಕಾರಣ ಕೇಂದ್ರ ಸರ್ಕಾರದವರು ಹೇಳಿದಂತೆ ಸಹಾಯ ಕೊಡದೆ ಇದ್ದ ಕಾರಣಕ್ಕೆ ಇರಬಹುದು. ಈಗಂತೂ ಅತಿವೃಷ್ಟಿ, ಬರಗಾಲ, ನೆರೆಹಾವಳಿಗೆ ಸಿಕ್ಕಿರುವಂತಹ ರೈತ ತತ್ತರಿಸಿ ಹೋಗಿದ್ದಾನೆ. ಈಗ ಹತ್ತು ಸಾವಿರ ಇದ್ದದ್ದು 10 ಸಾವಿರ ಬಡ್ಡಿಯಾಗಿದೆ. ನಾವು ಯಾರಿಗೆ ಸಾಲ ಮನ್ನಾ ಮಾಡುವುದಕ್ಕೆ ಹೊರಟಿದ್ದೇವೆ. ನಿಮ್ಮ ಮೂಲಕ ಕೇಳುತ್ತೇನೆ. ಈ ಸರ್ಕಾರಕ್ಕೆ ಅಧಿಕಾರಿಗಳನ್ನು ಕೇಳುತ್ತೇನೆ. ಯಾವ ಅಧಿಕಾರಿ ರೈತನ ಬಗ್ಗೆ ಪ್ರಾಮಾಣಿಕವಾಗಿ, ಅವರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರ್ಕಾರಕ್ಕೆ ಸರಿಯಾದಂತಹ ಮಾರ್ಗದರ್ಶನ ಮಾಡುವುದರಲ್ಲಿ ಹಿಂದು ಮುಂದು ನೋಡುತ್ತಿದ್ದಾನೆ. ಇವತ್ತು ರೈತ ಮತ್ತು ಅವನ ಮಕ್ಕಳ ಬಗ್ಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತಿರುವ ಅಧಿಕಾರಿಗಳಿಗೆ ಕೇಳಲಿಚ್ಛಿಸುತ್ತೇನೆ. ರೈತನ ದಯನೀಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ತಾವು ಮಾಡಿದ್ದೀರಾ. ಏನು ಅನುಕೂಲ ಮಾಡಿಕೊಟ್ಟಿದ್ದೀರಿ; ಈ 45 ವರ್ಷಗಳಲ್ಲಿ ಸಾಲದಲ್ಲೇ ಹುಟ್ಟಿ, ಸಾಲದಲ್ಲಿ ಬೆಳೆದು ಸಾಲದಲ್ಲೇ ಅವನು ಸಾಯುತ್ತಿದ್ದಾನೆ. ದೇಶಕ್ಕೆ ಅನ್ನ ಕೊಡುವಂಥ ಅವನಿಗೆ ಯಾವ ರಿಲೀಫ್ ಕೊಟ್ಟಿದ್ದೇವೆ. ಅವನು ಹೊಲಗದ್ದೆಗಳಲ್ಲಿ ಕೆಲಸ ಮಾಡಿ ದುಡಿದು ದೇಶಕ್ಕೆ ಅನ್ನ ಕೊಡುತ್ತಿದ್ದಾನೆ ಎನ್ನುವ ಅರಿವು ನಿಮಗೆ ಇಲ್ಲ ಎಂದು ಪದೇ ಪದೇ ಹೇಳುತ್ತಿದ್ದೇನೆ. ಇವತ್ತು ಶ್ರೀ ನಂಜುಂಡಸ್ವಾಮಿಯವರು ಪದೇ ಪದೇ ಏಕೆ ಈ ಮಾತನ್ನು ಹೇಳುತ್ತಾ ಇದ್ದಾರೆ. ಸಾಲ ಮನ್ನಾ ಮಾಡಿ ಎಂದು, ರೈತನ ಪರವಾಗಿ ಭಿಕ್ಷೆ ಕೇಳುತ್ತಿಲ್ಲ. ಏಕೆಂದರೆ ಸರ್ಕಾರವೇ ಸಾಲಗಾರರು, ಬೆವರು ಸುರಿಸಿ ದುಡಿದು ಅವರು ಬೆಳೆದಂತಹ ಬೆಳೆಗೆ ವೈಜ್ಞಾನಿಕ ಬೆಲೆಯನ್ನು ಕೊಡಲಿಲ್ಲ. ಅವರ ಮಕ್ಕಳಿಗೆ ವಿದ್ಯಾವಂತರಾಗಿ ಅವರ ಕೈಕಾಲು ಗಟ್ಟಿಯಾಗಿ ನಿಂತುಕೊಂಡು ದುಡಿಯುವಂತಹ ಶಕ್ತಿಯನ್ನು ಅವರಿಗೆ ತರಲಿಲ್ಲ. ಅವರ ಹೊಲಕ್ಕೆ ಸರಿಯಾದಂತಹ ನೀರು ಕೊಡಲಿಲ್ಲ. ಇದರ ಪರಿಣಾಮವಾಗಿ ಇವತ್ತು ಸಾಲಗಾರರ ಮಗನಾಗಿದ್ದಾನೆ. ಅವನಿಗೆ ಒಂದು ಸಾರಿ ರಿಲೀಫ್ ಕೊಡಿ ಎಂದು ಒತ್ತಡ ತರುವ ಪ್ರಯತ್ನ ಮಾಡಿದ್ದೇನೆ. ಅವನ ಸಮಸ್ಯೆ ಯಾವಾಗ ಬಗೆಹರಿಯುತ್ತದೆ ಎಂದರೆ ಅವನು ಅವನ ಕಾಲ ಮೇಲೆ ಯಾವಾಗ ನಿಲ್ಲುತ್ತಾನೆ ? ಯಾವಾಗ ಎಂದರೆ, ಒಂದು ಸಾರಿ ರಿಲೀಫ್ ಕೊಟ್ಟ ಮೇಲೆ ಉತ್ತಮ ಬೀಜ, ನೀರಾವರಿ ಅನುಕೂಲ ಕೊಡಬೇಕು. ಅವನು ಬೆಳೆದಂಥ ಬೆಳೆಗೆ ಬೇರೆ ವಸ್ತುಗಳಿಗೆ ಯಾವ ರೀತಿ ವೈಜ್ಞಾನಿಕವಾದ ರೀತಿಯಲ್ಲಿ ಬೆಲೆ ಕೊಡುತ್ತಾರೋ ಅದೇ ರೀತಿ ಬೆಲೆ ಕೊಟ್ಟಾಗ ಅವನು ಗಟ್ಟಿಯಾಗಿ ಆಗುತ್ತಾನೆ. ಇವತ್ತು ನಾವು ಯೋಜನೆ ಬಗ್ಗೆ ಮಾತನಾಡುತ್ತಿದ್ದೇವೆ. ಗ್ರಾಮೀಣ

ಪ್ರದೇಶದಲ್ಲಿ ಶೇಕಡ 68 ಭಾಗ ಇರುವ ಗ್ರಾಮೀಣ ರೈತರ ಬಗ್ಗೆ ಮಾತನಾಡುತ್ತಿದ್ದೇವೆ. 1987ರ ಅಂಕಿಅಂಶಗಳ ಪ್ರಕಾರ ಶೇಕಡ 32 ಭಾಗ ಬಡತನ ರೇಖೆಗಿಂತ ಕೆಳಮಟ್ಟದಲ್ಲಿ ಇದ್ದಾರೆ. ಈ ಜನಕ್ಕೆ ಏಕೆ ಈ ಸ್ಥಿತಿ ಬಂತು. ಅವರನ್ನು ಸುಧಾರಿಸಿದ್ದರೆ ಅವರಲ್ಲಿ ಸುಧಾರಣೆಯಾಗಿದ್ದರೆ, ಸಾಲ ಮಾಡುತ್ತಿರಲಿಲ್ಲ. ಬಡ್ಡಿ ಮನ್ನಾ ಎನ್ನುವ ಪರಿಸ್ಥಿತಿ ಬರುತ್ತಾ ಇರಲಿಲ್ಲ. ರೈತನ ಬಗ್ಗೆ ಪ್ರಸ್ತಾಪ ಮಾಡಿದರ ಕೆಲವರು ಹಗುರವಾಗಿ ಮಾತನಾಡುತ್ತಾರೆ.

ಸೀರಿಯಸ್ಸಾಗಿ ಅದನ್ನು ತೆಗೆದುಕೊಳ್ಳುತ್ತಾ ಇಲ್ಲ. ಅವರನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಯಾವ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುತ್ತಾ ಇದ್ದೀರಾ, ಏಕೆ ಕೊಡುತ್ತಿದ್ದೀರಾ,ಈ ಕೈಗಾರಿಕೆಗಳಿಗೆ ಶೇಕಡ 20–25 ಭಾಗ ಸಬ್ಸಿಡಿ ಕೊಡುತ್ತಿದ್ದೀರಿ. ಐದು ಲಕ್ಷ ಇರುವಂತಹ ಮಿಷನ್‌ಗೆ ಇಪ್ಪತ್ತು ಲಕ್ಷ ರೂಪಾಯಿಗಳ ಬಿಲ್ ತೆಗೆದುಕೊಂಡು ಬರುತ್ತಾರೆ. ಅವರಿಗೆ ನೀವು ಸಬ್ಸಿಡಿ ಕೊಡುತ್ತೀರಿ.

ಅನೇಕರು ಕಾರ್ಖಾನೆಗಳನ್ನು ಕಾಲಕ್ಕೆ ಸರಿಯಾದ ರೀತಿಯಲ್ಲಿ ನಡೆಸದೆ ಸಿಕ್ ಇಂಡಸ್ಟ್ರೀ ಎಂದು ಹೇಳಿ ಅವುಗಳನ್ನು ಮುಚ್ಚಿಸಿ ರಿಲೀಫ್ ಕೊಡುತ್ತೀರಿ ? ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ಒಳ್ಳೆಯ ಕಾರ್ಖಾನೆಗಳು ನಡೆಯುವುದರ ಬಗ್ಗೆ, ಸಬ್ಸಿಡಿ ಕೊಡುವುದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಇವತ್ತು ರೈತ ಇಲ್ಲದಿದ್ದರೆ ಈ ದೇಶ ಉಳಿಯುತ್ತದೆಯೇನು ? ಅವನ ಹೊಲಗದ್ದೆಗಳು ಏನು ಇವೆ ಅವು ಉಳಿಯಬೇಕಾಗಿದೆ. ಅದಕ್ಕೆ ಗಮನ ಕೊಡಿ ಎನ್ನುವಂತಹ ಒತ್ತಾಯವನ್ನು ನಾವು ತರುತ್ತಿದ್ದೇವೆ. ಆದರೆ, ಒಂದಲ್ಲ ಒಂದು ರೀತಿಯ ಪ್ರಹಾರ ಅವನ ಮೇಲೆ ಬೀಳುತ್ತಿದೆ. ಅವನು ಕಣ್ಣೀರು ಹಾಕುವಂತಹ ಒಂದು ದುಸ್ಥಿತಿ ಬರುತ್ತಿದೆ. ಅದಕ್ಕಾಗಿ ನಾನು ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ದೇಶಪಾಂಡೆಯವರ ಹತ್ತಿರ ಹೇಳಿದೆ. ಸ್ವಾಮಿ ನಾನು ರೈತರ ಸಾಲ ಮನ್ನಾದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ, ಕೊನೆ ಪಕ್ಷ ನಾವು ಹೇಳಿದಂತಹ ಭರವಸೆಯಲ್ಲಿ ಯಾರು ಸಾಲ ಕಟ್ಟದೆ ನಿರ್ಗತಿಕನಾಗಿದ್ದಾನೆ, ಕೋ–ಆಪರೇಟಿವ್ ಇನ್ಸ್‌ಟಿಟ್ಯೂಷನ್ ಬಾಗಿಲು ಹಾಕುವಂಥಹ ದುಸ್ಥಿತಿಗೆ ಬಂದಿದೆಯೋ, ಹೊಸ ರೈತರಿಗೆ ಸಹಕಾರ ಸಂಘದಿಂದ ಬೆಳೆ ಸಾಲ ಸಿಗದೇ ಇರುವಂತಹ ವಿಚಿತ್ರ ಪರಿಸ್ಥಿತಿ ನಮ್ಮ ತಪ್ಪಿನಿಂದ ಏನು ಅವನಿಗೆ ಬಂದಿದೆಯೋ ಅದಕ್ಕೆ ಒಂದು ಸಾರಿ ಸಣ್ಣ ರೈತ, ದೊಡ್ಡ ರೈತ ಎಂದು ಯಾವುದು ಭೇದಭಾವವನ್ನು ಮಾಡದೇ ಈ ಸಹಕಾರ ಸಂಘಗಳಿಂದ ತೆಗದುಕೊಂಡಿರುವಂತಹ ಸಾಲವನ್ನು ಮತ್ತು ನ್ಯಾಷನಲೈಜ್ ಬ್ಯಾಂಕುಗಳಿಂದ ತೆಗೆದುಕೊಂಡಿರುವಂತಹ ಸಾಲದ ಮೇಲಿನ ಬಡ್ಡಿಯನ್ನು ಅಥವಾ ಕೊನೆಯ ಪಕ್ಷ ಈ ಸುಸ್ತಿ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿ ಮತ್ತೊಮ್ಮೆ ಅವನಿಗೆ ಬೇಕಾದಂತಹ ಸವಲತ್ತನ್ನು ಒದಗಿಸಿಕೊಟ್ಟು ಆ ರೈತಾಪಿ ಕೆಲಸದಲ್ಲಿ ಅವನು ತಲ್ಲೀನನಾಗುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಈ ಪ್ರಸ್ತಾಪವನ್ನು ನಾವು ತಂದಿದ್ದೇವೆ. ನಿಜ, ಇದರಿಂದ ಏನೂ ಅನುಕೂಲವಾಗುವುದಿಲ್ಲ. ಸ್ವಾಮಿ ನಿಮಗೆ ಗೊತ್ತಿದೆ. ನಿನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಹೇಳಿದರು, ನಾನು ಅಧಿಕಾರಿಗಳನ್ನು ಕೇಳುತ್ತೇನೆ, ಯಾವ ಹಿಂದಿನ ಸರ್ಕಾರ 1992–93ನೇ ಸಾಲಿನಲ್ಲಿ ಎಂಟ್ರಿಟ್ಯಾಕ್ಸ್‌ನ್ನು ಹಾಕಬೇಕು ಎಂದು ನಿಶ್ಚಯ ಮಾಡಿ ಅದು ಕಾರ್ಯರೂಪಕ್ಕೆ ತರುವುದರಲ್ಲಿ ವಿಳಂಬವಾದ ಪರಿಣಾಮ ತಮ್ಮ ಸರ್ಕಾರದ ಬೊಕ್ಕಸಕ್ಕೆ ಸುಮಾರು 100 ಕೋಟಿ ರೂಪಾಯಿ ಆದಾಯ ಬರುವುದು ತಪ್ಪಿದ್ದು ನಿಜ ತಾನೇ ? ಸನ್ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಸದನದಲ್ಲಿ ಉತ್ತರ ಕೊಡುತ್ತಿದ್ದ ಸಂದರ್ಭದಲ್ಲಿ ಸುಮಾರು 500 ಕೋಟಿಗೂ ಹೆಚ್ಚು ಹಣ ಸಂಗ್ರಹಣೆಯಾಗಿ ನಮ್ಮ ಖಜಾನೆ ಭರ್ತಿಯಾಗಬೇಕಿತ್ತು, ಆದರೆ ನಾವು ಆ ಕಡೆ ಗಮನ ಕೊಡದ ಪರಿಣಾಮ ಈ ವರ್ಷ ಸುಮಾರು 150 ಕೋಟಿ ರೂಪಾಯಿ ಕಡಿಮೆಯಾಗುತ್ತದೆ ಎಂದು ಒಪ್ಪಿಕೊಂಡಿದ್ದು ನಿಜ ತಾನೇ ? ಹಾಗಾದರೆ ಇವತ್ತು ನೀವು ರೈತನ ಸುಸ್ತಿಬಡ್ಡಿ ಮನ್ನಾ ಮಾಡಿದರೆ 125 ಕೋಟಿ ಆಗಬಹುದು ಅಥವಾ ನೀವು ರೈತನ ಸಾಲವನ್ನೇ ಮನ್ನಾ ಮಾಡಿದರೆ ಎಷ್ಟು ಆಗಬಹುದು. 400 ಕೋಟಿ ರೂಪಾಯಿಯಾಗಬಹುದು. ನಾನು ಮೊನ್ನೆ ಸನ್ಮಾನ್ಯ ರಾಜಶೇಖರ ಮೂರ್ತಿಯವರ ಹತ್ತಿರ ಮಾತನಾಡುತ್ತಿದ್ದೆ. ಇವತ್ತು ಯಾವ ಪ್ಲಾಂಟೇಷನ್ ಗಳನ್ನು

ನಮ್ಮ ಜನ ಒತ್ತುವರಿ ಮಾಡಿದ್ದಾರೆ, ಆ ಜಮೀನುಗಳನ್ನು ನೀವು ಖಾಯಂ ಆಗಿ ಅವನಿಗೆ ಕೊಟ್ಟು ಒಂದು ಎಕರೆಗೆ 25 ರಿಂದ 30 ಸಾವಿರ ರೂಪಾಯಿಯವರೆಗೆ ವಸೂಲಿ ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಸುಮಾರು 200 ಕೋಟಿ ರೂಪಾಯಿ ಬರುತ್ತದೆ. ಕಳೆದ ಹತ್ತಾರು ವರ್ಷಗಳಿಂದ ನೂರಾರು ಎಕರೆ ಪ್ಲಾಂಟೇಷನ್‌ಗಳನ್ನು ಇವತ್ತು ಒತ್ತುವರಿ ಮಾಡಿದ್ದಾರೆ. ಅದರಲ್ಲಿ ಬಡವರೇ ಇದ್ದಾರೆ, ಆದರೆ ಅದಕ್ಕೆ ಇವತ್ತಿನ ಬೆಲೆ ಎಕರೆಗೆ ಕನಿಷ್ಠ ಎಂದರೆ 30 ಸಾವಿರ, ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ ಇದು ಪ್ರಸ್ತಾಪವಾಯಿತು. ಸರ್ಕಾರ ವಸೂಲು ಮಾಡಿದರೆ ಸುಮಾರು 200 ಕೋಟಿ ರೂಪಾಯಿ ಬರುತ್ತದೆ, ಆದರೆ ನೀವು ವಿಳಂಬ ಮಾಡುತ್ತಿದ್ದೀರಿ. ನೀವು ಒಂದು ಸಾರಿ ರೈತನ ಸಾಲ ಮನ್ನಾ ಮಾಡಬೇಕು ರೈತನಿಗೆ ನೆರವು ಕೊಡಬೇಕು ಎಂದು ನಿಮಗೆ ಅಪೇಕ್ಷೆ ಇದ್ದರೆ, ಮತ್ತು ಖಜಾನೆಯನ್ನು ತುಂಬುವುದಕ್ಕೆ ಸಹ ಅನೇಕ ಮಾರ್ಗಗಳು ನಿಮಗೆ ಸಿಗುತ್ತವೆ. ಆದರೆ ಆ ದಿಕ್ಕಿನಲ್ಲಿ ತಾವು ಯೋಚನೆ ಮಾಡದ ಪರಿಣಾಮ ನಾವು ಈ ಒಂದು ದುಸ್ಥಿತಿಗೆ ಬಂದಿದ್ದೇವೆ. ಆದುದರಿಂದ ಯಡಿಯೂರಪ್ಪ ಸಾಲ ಮನ್ನಾ ಮಾಡಬೇಕು ಎಂದು ಹೋರಾಟ ಮಾಡಲಿಲ್ಲ. ಕೇಂದ್ರಸರ್ಕಾರ ಹೇಳಿದಂತೆ ಸರಿಯಾದ ರೀತಿಯಲ್ಲಿ ಅದನ್ನು ಜಾರಿ ತರಬೇಕು ಎನ್ನುವ ಪ್ರಯತ್ನ ಮಾಡಿದೆ. ಇಲ್ಲಿ ಚರ್ಚೆಯಾಯಿತು. ಇವತ್ತು ನನ್ನ ಬಗ್ಗೆ ಹಗುರವಾಗಿ ಮಾತನಾಡಬಹುದು, ಏಕೆಂದರೆ ಯಡಿಯೂರಪ್ಪನವರು ಎದ್ದು ನಿಂತರೆ, ಬಿಜೆಪಿಯವರು ಎದ್ದು ನಿಂತರೆ ಹಗುರವಾಗಿ ಮಾತನಾಡುವಂಥಾದ್ದು ಸ್ವಾಭಾವಿಕ. ಇದನ್ನು ನಾವು ಸಹಿಸಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಯಾರೂ ಮಾತನಾಡದೇ ನಿಮಗೆ ನೀವೇ ಹೇಳಿಕೊಳ್ಳುತ್ತಿದ್ದೀರಿ. ನಾವು ಸುಮ್ಮನೆ ಗಾಂಭೀರ್ಯವಾಗಿ ಕುಳಿತು ಏನೋ ಸಲಹೆ ಕೊಡುತ್ತಿದ್ದಾರೆ ಎಂದು ಕೇಳುತ್ತಿದ್ದೇವೆ. ನೀವು ಮೂರು ರಾಜ್ಯದಲ್ಲಿ ಯಾವ ರೀತಿಯಾಗಿ ಇಂಪ್ಲಿಮೆಂಟ್ ಮಾಡಿರುವುದು ಎಂದು ನಾವು ಕೇಳಿಕೊಂಡು ಕುಳಿತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಒಂದು ಮಾತನ್ನು ಇವತ್ತು ಹೇಳುತ್ತೇನೆ. ಮಧ್ಯಪ್ರದೇಶದಲ್ಲಿ ನಮ್ಮ ಸರ್ಕಾರ ಅಂದು ಇದ್ದಂತಹ ಕಾಲದಲ್ಲಿ ಗತ ವೈಭವದಿಂದ ನಡೆಯಿತು. ಈಗ ಅದು ಅಲ್ಲ, ಕಿತ್ತುಕೊಂಡಿದ್ದೀರಿ. ಆದರೆ ಅಂದು ನೀವು ಸಾಲ ಮನ್ನಾ ಮಾಡಿರುವಂತಹ ಯೋಜನೆಯನ್ನು ತನ್ನಿ ಯಡಿಯೂರಪ್ಪನವರೇ, ಕನ್‌ವಿನ್ಸ್ ಮಾಡಿ ಎಂದು ಹೇಳಿದಾಗ ಆ ಸರ್ಕಾರಿ ಆಜ್ಞೆಯನ್ನು ತಂದು ಸುಮಾರು 700 ಕೋಟಿ ರೂಪಾಯಿ ರೈತನಿಗೆ ಆ ರಾಜ್ಯದಲ್ಲಿ ರಿಲೀಫ್ ಕೊಟ್ಟಿದ್ದಾರೆ, ಸರ್ಕಾರಿ ಆಜ್ಞೆಯನ್ನು ತಂದುಕೊಟ್ಟಿದ್ದೇನೆ. ಇದು ಸುಳ್ಳಾದರೆ ತಾವು ಹೇಳುವಂತಹ ಶಿಕ್ಷೆಗೆ ನಾನು ಸಿದ್ಧನಿದ್ದೇನೆ. ಅವರು ಮಾಡಿದರು. ನೀವು ಮಾಡಿ ಎನ್ನುವ ವಿಷಯಕ್ಕೆ ನಾನು ಹೋಗುವುದಿಲ್ಲ, ಒತ್ತಾಯ ತರುವುದಿಲ್ಲ.

ಆದರೆ ಈಗ ಪ್ರಶ್ನೆ ಇರುವಂಥಾದ್ದು ದಯಮಾಡಿ ಪಕ್ಷ ಪಂಗಡಗಳನ್ನು ಮರೆತು ದಯನೀಯ ಸ್ಥಿತಿಯಲ್ಲಿ ಇರುವಂತಹ ರೈತನ ಬಗ್ಗೆ ಯೋಚನೆ ಮಾಡುವಂಥಹ ಕಾಲ ಬಂದಿದೆ. ಇದರ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು ಎನ್ನುವಂತಹ ಒತ್ತಾಯವನ್ನು ಮಾತ್ರ ತರುತ್ತಿದ್ದೇನೆ. ನಾನು ಮಾತನಾಡುವುದರಿಂದ ರೈತರಿಗೆ ತೊಂದರೆ ಆಗುತ್ತಿದ್ದರೆ ಮಾತನ್ನು ಕಡಿಮೆ ಮಾಡಬೇಕು ಎಂದು ನಾನು ನಮ್ಮ ವಿರೋಧ ಪಕ್ಷದ ನಾಯಕರನ್ನು ನೀವು ಏನಾದರೂ ಮಾಡಿ, ರೈತನಿಗೆ ರಿಲೀಫ್ ಸಿಗದೇ ಅವರು ಕಂಗಾಲಾಗಿದ್ದಾರೆ ಎಂದು ವಿನಂತಿ ಮಾಡಿಕೊಂಡಿದ್ದೆ. ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ರೈತ ಇಲ್ಲದೆ ಅವರ ಬೆವರಿನ ಪ್ರತಿಫಲ ಸಿಗದೇ ಯಾರೂ ಇವತ್ತು ಬದುಕುವುದಕ್ಕೆ ಸಾಧ್ಯವಿಲ್ಲ, ಒಂದಲ್ಲ ಒಂದು ರೀತಿಯಲ್ಲಿ ನಾವು ರೈತನ ಋಣದಲ್ಲಿ ಬದುಕುತ್ತಿದ್ದೇವೆ. ಆದರೆ ನಮ್ಮನ್ನು ಸಾಕಿದವನು, ನಮಗೆ ಅನ್ನ ಹಾಕಿದವನು ಸಾಲದ ಕೂಪದಲ್ಲಿ ಇವತ್ತು ತೊಳಲಾಡುತ್ತಿದ್ದಾನೆ. ಕೇವಲ ಅವನ ಬಡ್ಡಿ ಚಕ್ರಬಡ್ಡಿ ಮನ್ನಾ ಮಾಡುವುದು ಮುಖ್ಯವಲ್ಲ.

ಅವನನ್ನು ಮೇಲೆ ಎಬ್ಬಿಸಬೇಕಾಗಿದೆ. ಶೇಕಡ 68ರಷ್ಟು ಹೆಚ್ಚು ಜನ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕಾರ್ಮಿಕರು ಇದ್ದಾರೆ. ಒಂದು ಪ್ರಶ್ನೆ ಬಂದಿತು, ಎಷ್ಟು ಜನಕ್ಕೆ, ಎಷ್ಟು ಕುಟುಂಬಕ್ಕೆ ಅನುಕೂಲವಾಗುತ್ತದೆ. ಸ್ವಾಮಿ ಒಬ್ಬನ ರೈತನ ಕುಟುಂಬ ಹೊಲದಲ್ಲಿ ಕೆಲಸ ಮಾಡುತ್ತದೆ ಮತ್ತು ಅಲ್ಲಿ ವರ್ಷ ಪೂರ್ತಿ ನೂರಾರು ಜನ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುತ್ತಾನೆ. ನಿಮ್ಮ ಒಂದು ಕಾರ್ಖಾನೆಯಲ್ಲಿ ಯಾವ ರೀತಿ ಇರುತ್ತದೆ ಅದೇ ರೀತಿ ಅವನು ನೂರಾರು ಜನರನ್ನು ಸಾಕುತ್ತಾನೆ ಎನ್ನುವುದನ್ನು ಮರೆಯಬೇಡಿ. ಇವತ್ತು ರೈತ ಇಲ್ಲದಿದ್ದರೆ ಅವನು ಜಾನುವಾರು ಸಾಕದಿದ್ದರೆ, ನಾವು ನೀವು ಇವತ್ತು ಬೆಂಗಳೂರಿನಲ್ಲಿ ಕುಳಿತು ಎಲ್ಲಿ ಹಾಲು ಕುಡಿಯುತ್ತಿದ್ದೆವು. ನಿಮ್ಮ ಹಾಲಿನ ನಿಗಮ ಎಲ್ಲಿ ಇರುತ್ತಿತ್ತು. ಸ್ವಾಮಿ ರೈತ ಕಬ್ಬನ್ನು ಬೆಳೆಯದಿದ್ದರೆ, ಬೆವರು ಸುರಿಸದಿದ್ದರೆ ನಿಮ್ಮ ಸಕ್ಕರೆ ನಿಗಮ ಎಲ್ಲಿ ಇರುತ್ತಿತ್ತು. ಹತ್ತಿ, ತೆಂಗು ಬೆಳೆಯದಿದ್ದರೆ ಹತ್ತಿ ತೆಂಗಿನ ನಿಗಮಗಳು ಎಲ್ಲಿ ಇರುತ್ತಿದ್ದವು. ಆದರೆ ಋಣ ಎನ್ನುವಂತಹ ಮಾತನ್ನು ಏಕೆ ಮಾನ್ಯ ನಂಜುಂಡಸ್ವಾಮಿಯವರು ಹೇಳುತ್ತಾರೆ. ದಯಮಾಡಿ ಇದನ್ನು ಮುಂದುವರೆದಂತಹ ಜನ, ಬುದ್ಧಿವಂತ ಜನ, ನಗರದಲ್ಲಿ ವಾಸ ಮಾಡುವ ಜನ ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಸದನದ ಮೂಲಕ ಅವರಿಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ದಯಮಾಡಿ ರೈತನ ದಯನೀಯ ಪರಿಸ್ಥಿತಿಯನ್ನು ನೀವು ಅರ್ಥ ಮಾಡಿಕೊಳ್ಳದಿದ್ದರೆ ಅವನು ಸಿಡಿದೆದ್ದರೆ ಬಹುಶಃ ಯಾರೂ ಉಳಿಯುವುದಿಲ್ಲ. ಇವತ್ತು ತಮಗೆ ಗೊತ್ತಿದೆ. ಅವನು ಕಬ್ಬನ್ನು ಬೆಳೆಯುತ್ತಾನೆ, ಸನ್ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡಿದರು, ಇವತ್ತು ನಾವೇನು ಲೆವಿ ರೂಪದಲ್ಲಿ ಸಕ್ಕರೆಯನ್ನು ನಮ್ಮ ಪಡಿತರ ವ್ಯವಸ್ಥೆಯಲ್ಲಿ ಕೊಡುತ್ತೇವಲ್ಲಾ ಸ್ವಾಮಿ, ಆ ಕಡಿಮೆ ಬೆಲೆಯಲ್ಲಿ ಕಬ್ಬನ್ನು ಕೊಂಡುಕೊಂಡು ಆ ಸಕ್ಕರೆ ಕಾರ್ಖಾನೆ ಮಾಲೀಕನಿಂದ ಕೇಂದ್ರಸರ್ಕಾರ ಲೆವಿ ರೂಪದಲ್ಲಿ ಸಕ್ಕರೆಯನ್ನು ತೆಗೆದುಕೊಳ್ಳದಿದ್ದರೆ ಇವತ್ತು ನಗರದಲ್ಲಿರುವಂಥ ನಮಗೂ ನಿಮಗೂ ಸಕ್ಕರೆ ಕೊಡುತ್ತಿದ್ದರೋ ಕಾರ್ಡಿನಲ್ಲಿ, ಮಿಲ್ ಪಾಯಿಂಟ್‌ನಲ್ಲಿ ಇರಬಹುದು, ಮತ್ತೊಂದು ಕಡೆ ಇರಬಹುದು. ಸುಗ್ಗಿಯಲ್ಲಿ 300 ರೂಪಾಯಿಗೆ ಭತ್ತ ಕೊಂಡುಕೊಂಡು ಕೇಂದ್ರ ಸರ್ಕಾರ ತೆಗೆದುಕೊಂಡು ಹೋಗಿ ಫುಡ್ ಕಾರ್ಪೊರೇಷನ್ ಮೂಲಕ ಅಕ್ಕಿ ಮಾಡಿಕೊಡದಿದ್ದರೆ ಈ ಪಡಿತರ ವ್ಯವಸ್ಥೆಯಲ್ಲಿ ಅಕ್ಕಿ ಸಿಗುತ್ತಿತ್ತೇ? ಈ ಅಕ್ಕಿ ಸಕ್ಕರೆ, ನ್ಯಾಯಬೆಲೆ ಅಂಗಡಿ ಪಡಿತರ ವ್ಯವಸ್ಥೆ ಉಳಿದಿರುವಂಥದ್ದು ಅವನ ತಲೆಬೋಳಿಸಿ ನಾವು ಊಟ ಮಾಡುತ್ತಿದ್ದೇವೆ ಸ್ವಾಮಿ. ಅದಕ್ಕಾಗಿ ಇವತ್ತು ಅವನನ್ನು ಉಳಿಸುವಂಥ ಪ್ರಯತ್ನ ಮಾಡಿ ಎನ್ನುವ ವಿನಂತಿಯನ್ನು ಮಾಡುತ್ತೇನೆ. ನಾನು ಕೊನೆಯದಾಗಿ ಪ್ರಾರ್ಥನೆ ಮಾಡುವಂಥದ್ದು ಸಣ್ಣ ರೈತರು ದೊಡ್ಡ ರೈತರು ಎಂದು ಭೇದಭಾವನೆ ಮಾಡಬೇಡಿ. ಕೋ-ಆಪರೇಟಿವ್ ಬ್ಯಾಂಕ್ಸ್‌ಗಳಲ್ಲಿ ಅವನು ಏನು ಪಿ.ಎಲ್.ಡಿ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಂಡಿದ್ದಾನೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅವನು ತೆಗೆದುಕೊಂಡಿದ್ದಾನೆ. ಷಾರ್ಟ್‌ಟರ್ಮ್ ಇರಬಹುದು, ಮೀಡಿಯಂ ಟರ್ಮ್ ಇರಬಹುದು. ಲಾಂಗ್ ಟರ್ಮ್ ಇರಬಹುದು, ರೀಜನಲ್ ಬ್ಯಾಂಕ್ಸ್ ಕೆಲವು ಇತ್ತೀಚೆಗೆ ಅಲ್ಲಿಂದ ತೆಗೆದುಕೊಂಡಿರುವಂಥದ್ದು ಇದೆಲ್ಲಾ ಸಂಪೂರ್ಣ ಈ ಭಾರವನ್ನು ಸರ್ಕಾರ ಹೊತ್ತುಕೊಳ್ಳಬೇಕು. ಅವರ ಮೇಲೆ ಇವತ್ತು ಕೇಸನ್ನು ಹಾಕುತ್ತಿದ್ದಾರೆ. ಇದರ ಪರಿಣಾಮ ನೂರಕ್ಕೆ ತೊಂಭತ್ತರಷ್ಟು ಬೇರೆ ಬೇರೆ ಅವನ ಮೇಲೆ ಎಕ್ಸ್‌ಟ್ರಾ ಚಾರ್ಜಸ್ ಬೀಳುತ್ತವೆ. ಆಮೇಲೆ ಸರಳ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿ, ಕೇಸ್ ಹಾಕಿದ ದುಡ್ಡನ್ನು ಕೊಡಿ ಎಂದು ಕೇಳಿದರೆ ಮತ್ತೆ ರೈತ ಉಳಿಯುವುದಿಲ್ಲ. ಎಲ್ಲಾ ರೀತಿಯ ಚಕ್ರಬಡ್ಡಿ ಸುಸ್ತಿ ಬಡ್ಡಿ ಮನ್ನಾ ಮಾಡಿದರೆ ಯಾವುದೇ ಷರತ್ತನ್ನು ಹಾಕದೆ ಒಂದು ಸಾರಿ ರೈತನನ್ನು ಉಳಿಸುವ ದೃಷ್ಟಿಯಿಂದ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಒಂದು ವರ್ಷ ಮುಂದಿನ ಡಿಸೆಂಬರ್‌ವರೆಗೂ ಜನವರಿವರೆಗೂ ನಿಗದಿಯನ್ನು ಮಾಡಿ. ಅವನು ರಿಪೇಮೆಂಟ್ ಮಾಡಬೇಕು ಅಸಲನ್ನು ಕಟ್ಟಬೇಕು. ಸಣ್ಣವನು ಇರಬಹುದು, ದೊಡ್ಡವನು ಇರಬಹುದು. ಇಮ್ಮೀಡಿಯೇಟ್ ಆಗಿ ಕಟ್ಟಿದರೆ ತಕ್ಷಣ ಅವನಿಗೆ ಇನ್‌ಸೆಂಟೀವ್ ತರಹ ಏನಾದರೂ ರಿಲೀಫ್ ಇಮ್ಮೀಡಿಯೇಟ್ ಕೊಟ್ಟು

ಹೊಸದಾಗಿ ಬೇಸಿಗೆ ಬೆಳೆಗೆ ಮತ್ತೊಂದಕ್ಕೆ ಸಾಲ ಕೊಡುವಂಥ ವ್ಯವಸ್ಥೆ ಮಾಡಿ, ಆಗ ಅವನು ಬೇಗ ಕಟ್ಟುವಂಥ ಒಂದು ಪ್ರಯತ್ನವನ್ನು ಮಾಡುತ್ತಾನೆ. ನಾನು ಈ ಸದನದಲ್ಲಿ ಒಂದು ಭರವಸೆಯನ್ನು ಕೊಡುತ್ತೇನೆ, ಬಹುಶಃ ಯಾವುದೇ ಸರ್ಕಾರ ಇರಲಿ ಅದು ನಡೆಯಬೇಕಾಗಿದ್ದರೆ ಈ ರೀತಿ ಏನೋ ಒಂದು ಆಶ್ವಾಸನೆ ಕೊಟ್ಟು ಅದನ್ನು ಈಡೇರಿಸುವುದಕ್ಕೆ ಆಗದೆ ಇರುವಂಥ ಯಾವುದೇ ಒಂದು ಘೋಷಣೆ ಸರ್ಕಾರ ಮಾಡಿದರೂ ಸರಿಹೋಗುವುದಿಲ್ಲ. ಇವತ್ತು ರೈತನನ್ನು ಉಳಿಸುವಂಥ ದೃಷ್ಟಿಯಿಂದ ಒಂದು ನಿರ್ಣಯವನ್ನು ಈ ಸರ್ಕಾರ ಮಾಡಬೇಕು. ಮತ್ತೆ ಏಳು ಪರ್ಸೆಂಟ್ ಬಡ್ಡಿ ಎಂದು ರಿಯಾಯಿತಿ ಎಂದು ಸಹಕಾರಿ ಸಂಘಗಳು ಸಾಲವನ್ನು ಕೊಡುತ್ತಿತ್ತೋ ಅದನ್ನು ಮುಂದುವರಿಸುವಂಥ ಪ್ರಯತ್ನ ಮಾಡಿ. ವೈಜ್ಞಾನಿಕವಾಗಿ ಸರಿಯಾದ ಬೆಲೆಯನ್ನು ಕೊಡಿ. ಉತ್ತಮವಾದ ಬಿತ್ತನೆ ಬೀಜ, ಕ್ರಿಮಿನಾಶಕಗಳು ಸಿಗಬೇಕು. ಕಳಪೆ ಪ್ರಮಾಣದ್ದು ಗುಲ್ಬರ್ಗದಲ್ಲಿ ಏನಾಯಿತು ಎನ್ನುವುದು ತಮಗೆ ಗೊತ್ತಿದೆ. ಇದರಿಂದ ಸಂಪೂರ್ಣ ತೊಗರಿ ಬೆಳೆ ನಾಶವಾಯಿತು. ಯಾವ ರೀತಿ ಉದ್ಧಾರ ಮಾಡುತ್ತೀರಿ ? ಈ ಪ್ರಕೃತಿ ತಿರುಗಿ ಬಿದ್ದಾಗ ರೈತನ ನೆರವಿಗೆ ನೀವು ಬರಬೇಕಲ್ಲ. ಆ ಒಂದು ಧಾರಾಳತನ ಸರ್ಕಾರಕ್ಕೆ ಬರಬೇಕು. ಅದಕ್ಕಾಗಿ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿದೆ. ಯಾರು ಇಲ್ಲಿ ದೊಡ್ಡವರಾಗಬೇಕು, ರಾಜಕಾರಣ ಬೆರೆಸಬೇಕು ಎನ್ನುವ ಪ್ರಶ್ನೆ ಇಲ್ಲ. ನಾವು ಮಾತನಾಡುವುದಕ್ಕೂ ಬೇಕಾದರೆ ಸಿದ್ಧರಿಲ್ಲ. ದಯಮಾಡಿ ಕುಳಿತುಕೊಂಡು ಈ ಒಂದು ತೀರ್ಮಾನವನ್ನು ತೆಗೆದುಕೊಳ್ಳುವಂಥ ಘೋಷಣೆ ಮಾಡಿ. ಈವತ್ತು ಆ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು. ರೈತನನ್ನು ಉಳಿಸುವಂಥ ಒಂದು ಪ್ರಮಾಣಿಕ ಪ್ರಯತ್ನ ಮಾಡಬೇಕು ಎನ್ನುವಂಥ ಒತ್ತಾಯವನ್ನು ಮಾತ್ರ ಈ ಸಂದರ್ಭದಲ್ಲಿ ಮಾಡುತ್ತೇನೆ. ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದರಿಂದ ಖಂಡಿತಾ ನನಗೆ ಸಮಾಧಾನ ಇಲ್ಲ. ನನಗೆ ಸಮಾಧಾನ ಯಾವಾಗ ಎಂದರೆ ನೀವು ಕೊಟ್ಟಂಥ ಭರವಸೆಯಂತೆ ಹತ್ತು ಸಾವಿರ ರೂಪಾಯಿ ಸಾಲವನ್ನು ಮನ್ನಾ ಮಾಡಿದಾಗ. ಈ ಸದನದಲ್ಲಿ ಭರವಸೆಯನ್ನು ಕೊಡುತ್ತೇನೆ, ಯಾವ ಕಾರಣಕ್ಕೂ ಸಹಾ ನಾವು ರಾಜಕೀಯಕ್ಕೆ ಬೆರೆಸಿಕೊಳ್ಳದೆ ರೈತನನ್ನು ಉಳಿಸುವಂಥ ಪ್ರಾಮಾಣಿಕ ಪ್ರಯತ್ನ ಎರಡು ಕಡೆಯಿಂದಲೂ ಆಗಬೇಕೆಂದು ಹೇಳುತ್ತೇನೆ. ಅದನ್ನು ಕಾರ್ಯರೂಪಕ್ಕೆ ತರುವಂಥ ನಿಶ್ಚಯ ಇವತ್ತೇ ಮುಖ್ಯಮಂತ್ರಿಗಳು ಮಾಡಬೇಕು, ಆ ಘೋಷಣೆ ಮಾಡಬೇಕು. ರೈತನ ಎಲ್ಲಾ ರೀತಿಯ ಸಾಲಗಳ ಮೇಲೆ ಇರುವ ಬಡ್ಡಿ ಸುಸ್ತಿ ಬಡ್ಡಿ ಮನ್ನಾ ಮಾಡಿ ಹೊಸದಾಗಿ ತೆಗೆದುಕೊಳ್ಳುವಂಥ ಸಾಲಕ್ಕೆ ಏಳು ಪರ್ಸೆಂಟ್ ರಿಯಾಯಿತಿ ಬಡ್ಡಿ ಸಿಗುವಂತೆ ಮಾಡಿ ಅವನನ್ನು ಉಳಿಸುವಂಥ ಪ್ರಯತ್ನ ಮಾಡಬೇಕು ಎನ್ನುವ ಒತ್ತಾಯವನ್ನು ಮಾಡಿ ತಾವು ಸಮಯವನ್ನು ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ಅಧ್ಯಕ್ಷರೇ, ನಾವು ಏನು ಚರ್ಚೆಯನ್ನು ಮಾಡುತ್ತಿರತಕ್ಕಂಥ ವಿಷಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನಾನು ಎರಡು -- ಮೂರು ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯದಲ್ಲಿ ನಾವೆಲ್ಲ ಸೇರಿಕೊಂಡು ರೈತರನ್ನು ಹಾಳು ಮಾಡಿಬಿಟ್ಟಿದ್ದೇವೆ. ಒಂದು ಕಡೆ ಸಾಲಮನ್ನಾದ ಘೋಷಣೆ ಮತ್ತೊಂದು ಕಡೆ ಪೂಜಾರಿ ಸಾಲ ಅದೊಂದು ಸಾಲದ ಕಾರ್ಯಕ್ರಮ ದೇಶದಲ್ಲಿ ನಡೆಯಿತು ಸಾಲ ಮೇಳ ಎಂದು ಹೇಳಿ. ಇದನ್ನು ಮಾಡಿ ಇಡೀ ಗ್ರಾಮೀಣ ಪ್ರದೇಶಗಳ ಬಗ್ಗೆ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಈ ಸದನದಲ್ಲಿ, ಸಾಲ ತೆಗೆದುಕೊಂಡವರು ವಾಪಸ್ ಕೊಡುವ ಹಾಗೆ ಇಲ್ಲ ಎನ್ನತಕ್ಕಂಥ ಒಂದು ಭಾವನೆ ಬಂದರೆ ಇನ್ನೊಂದು ದುರುಪಯೋಗವಾಗುವುದು ಮತ್ತೊಂದು ಆದರೆ ಸಾಕಷ್ಟು ಜನ ನಿರುದ್ಯೋಗಿಗಳು ಉದ್ಯೋಗ ಮಾಡತಕ್ಕಂಥವರು ಸಹಿತ ಇದೇ ಒಂದು ಉದ್ಯೋಗ ಮಾಡಿಕೊಂಡಿರತಕ್ಕಂಥದ್ದು ಸಹಿತ ನಾವು ನೋಡಿದ್ದೇವೆ. ಇದೊಂದು ದುಃಖದ ವಿಚಾರ.

ನಿನ್ನೆ ರಾತ್ರಿ 10.30ಕ್ಕೆ ನಮ್ಮ ಆರ್ಥಿಕ ಮಂತ್ರಿಗಳ ಜೊತೆಯಲ್ಲಿ ಟೆಲಿವಿಷನ್ ಕಾರ್ಯಕ್ರಮದಲ್ಲಿ ಶ್ರೀ ಪ್ರೀತೀಷ್ ನಂದಿ ಅವರ ಜೊತೆ ಒಂದು ಇಂಟರ್‌ವ್ಯೂ ಇತ್ತು. ತಾವು ಅದನ್ನು ವೀಕ್ಷಿಸಿದಿರೋ ಇಲ್ಲವೋ ಗೊತ್ತಿಲ್ಲ. ಬಹಳ ಒಳ್ಳೆಯ ಇಂಟರ್‌ವ್ಯೂ..ನಮ್ಮ ಮನಮೋಹನ ಸಿಂಗ್ ಅವರ ಜೊತೆಯಲ್ಲಿ ಈ ದೇಶದ ಮುಂದಿನ ಆರ್ಥಿಕ ವಿಚಾರದ ಬಗ್ಗೆ. ಮನಮೋಹನ್ ಸಿಂಗ್ ಅವರು ಬಹಳ ದೊಡ್ಡ ಸ್ಥಾನದಲ್ಲಿರತಕ್ಕಂತಹವರು. ಅವರು ಕಳೆದ 15–20 ವರ್ಷಗಳಿಂದ ನಮ್ಮ ರಾಷ್ಟ್ರದ ಅನೇಕ ಜವಾಬ್ದಾರಿ ಸ್ಥಾನದಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇಂದಿರಾಗಾಂಧಿ ಅವರು ಇದ್ದಂತಹ ಕಾಲದಲ್ಲಿ ಅವರ ಆರ್ಥಿಕ ಸಲಹೆಗಾರರಾಗಿ ಕೆಲಸ ಮಾಡಿದವರು. ಅದು ಆದ ನಂತರ ಪ್ಲಾನಿಂಗ್ ಕಮಿಷನ್‌ನ ಡೆಪ್ಯೂಟಿ ಛೇರ್‌ಮನ್ ಆಗಿದ್ದರು. ಅದು ಆದ ನಂತರ ಶ್ರೀ ಚಂದ್ರಶೇಖರ್ ಅವರ ಕ್ಯಾಬಿನೆಟ್‌ನಲ್ಲಿ ಅವರು ಆರ್ಥಿಕ ಸಲಹೆಗಾರರಾಗಿ ನೇಮಕ ಆಗಿದ್ದರು. ಈಗ ಫೈನಾನ್ಸ್ ಮಿನಿಸ್ಟರ್ ಆಗಿದ್ದಾರೆ. ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿದ್ದರೋ ಏನೋ? ಅವರಿಗೆ ಇಂಟರ್‌ವ್ಯೂ ಮಾಡತಕ್ಕಂಥವರು ಒಂದು ಪ್ರಶ್ನೆ ಹಾಕುತ್ತಾರೆ. ನೀವು ಹೇಳುತ್ತಿದ್ದೀರಿ ಮನಮೋಹನ್ ಸಿಂಗ್‌ರವರೇ, ಈ ಒಂದು ಆರ್ಥಿಕ ನೀತಿ ನೀವು ಅನುಸರಿಸಿಕೊಂಡು ಹೋಗುತ್ತಾ ಇರತಕ್ಕದ್ದು ಏನು ಇದೆ ಇದು ಸರಿಯಿಲ್ಲ ಎಂದು ಅನೇಕ ವಿರೋಧ ಪಕ್ಷದವರು ಹೇಳುತ್ತಾರೆ ಎಂದು. ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಕೇಳಿದಾಗ ಅವರು ಏನು ಹೇಳಿದ್ದಾರೆ? ಅಂದರೆ ನೀವು ಚಂದ್ರಶೇಖರ್ ಅವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರ ಆರ್ಥಿಕ ಸಲಹೆಗಾರರಾಗಿ ಕೆಲಸ ಮಾಡಿದ್ದೀರಿ. ಆಗ ನಿಮ್ಮ ಮಾತು ಏನೂ ನಡೆಯುತ್ತಾ ಇರಲಿಲ್ಲವೇ? ಇಲ್ಲ ಇಲ್ಲ ನನ್ನ ಮಾತೆಲ್ಲಾ ನಡೆಯುತ್ತಾ ಇತ್ತು. ಈಗ ಹೇಗೆ ಅದನ್ನು ಅವರು ಟೀಕೆ ಮಾಡುತ್ತಿದ್ದಾರೆ ಎಂದಾಗ ಅವರು, ಮಾನ್ಯ ಮನಮೋಹನ್ ಸಿಂಗ್ ಅವರು ಏನು ಹೇಳಿದ್ದಾರೆ? ಎಂದರೆ ರಾಜಕಾರಣಿಗಳು ಹೇಳುವುದು ಒಂದು, ಮಾಡುವುದು ಒಂದು ಎಂದು ಹೇಳಿದ್ದಾರೆ. ಹಾಗಾದರೆ ಇವರು ಯಾರು? ಮನಮೋಹನ ಸಿಂಗ್ ಅವರು ರಾಜಕಾರಣಿಗಳು ಅಲ್ಲವೇ? ನಾನು ಏಕೆ ಇದನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆಂದು ಹೇಳಿದರೆ 20 ವರ್ಷಗಳಿಂದ ಅವರು ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿದ್ದರು, ಶ್ರೀಮತಿ ಇಂದಿರಾಗಾಂಧಿ ಅವರ ಕ್ಯಾಬಿನೆಟ್‌ನಲ್ಲಿ ಚಂದ್ರಶೇಖರ್ ಅವರ ಕ್ಯಾಬಿನೆಟ್‌ನಲ್ಲಿ, ಕ್ಯಾಬಿನೆಟ್ ಸ್ಟೇಟಸ್ ಅನ್ನು ಅನುಭವಿಸಿ ಎಲ್ಲರಿಗೂ ಸಲಹೆಗಾರರಾಗಿದ್ದವರು. ಇವತ್ತು ಅವರು ಹೇಳುತ್ತಿದ್ದಾರೆ. ಅವರು ಅಧಿಕಾರ ಸ್ಥಾನಕ್ಕೆ ಹೋದ ಮೇಲೆ ಈ ರೀತಿ. ಯಾರ ಕೈಕೆಳಗಡೆ ಇವರು ಕೆಲಸ ಮಾಡಿದರೋ ಅವರೇ ಆಷಾಢಭೂತಿಗಳು ಎನ್ನತಕ್ಕ ಮಾತನ್ನು ಹೇಳಿದಾಗ ನನ್ನ ಮನಸ್ಸಿಗೆ ಬಹಳ ನೋವಾಯಿತು. ದುರ್ದೈವದಿಂದ ಏನಾಗಿದೆ ಎಂದರೆ ಕೇಂದ್ರ ಸರ್ಕಾರದ ಆರ್ಥಿಕ ನೀತಿ ಏನು ಇದೆ ಅದರಿಂದ ಖಂಡಿತವಾಗಿ ರೈತರಿಗೆ ಏನೂ ಉಪಯೋಗ ಆಗುವುದಿಲ್ಲ. ಇದು ಬಹಳ ದುರ್ದೈವದ ಒಂದು ವಾತಾವರಣ; 1971ನೇ ಇಸವಿಯಲ್ಲಿ ಯಾವ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿ ರಾಜಧನವನ್ನು ರದ್ದು ಮಾಡುವಂತಹ ಕಾರ್ಯಕ್ರಮವನ್ನು ಶ್ರೀಮತಿ ಇಂದಿರಾಗಾಂಧಿ ಅವರು ಮಾಡಿದರು ಸಂಪೂರ್ಣವಾಗಿ ಅದರ ವಿರೋಧಿ ಕೆಲಸವನ್ನು ಇವತ್ತು ಮಾನ್ಯ ಮನಮೋಹನ ಸಿಂಗ್ ಅವರು ಮಾಡುತ್ತಿದ್ದಾರೆ. ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿದ್ದುದು ತಪ್ಪು ಎನ್ನತಕ್ಕದ್ದನ್ನು ಮಾನ್ಯ ಮನಮೋಹನ್ ಸಿಂಗ್ ಅವರು ಹೇಳಿದರು ನಿನ್ನೆ ದಿವಸ. ಇವತ್ತು ಇವರು ಕೆಲವು ಕನ್ಸೆಷನ್ಸ್ ಕೊಟ್ಟಿದ್ದಾರೆ. ನಾನು ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಎಂದು ಹೇಳಿದರೆ ಕೆಲವು ಕನ್ಸೇಷನ್ ಕೊಟ್ಟಿದ್ದಾರೆ. ನಿನ್ನೆಯಿಂದ ಅಡ್ವರ್ಟೈಸ್‌ಮೆಂಟ್ ಬರುವುದಕ್ಕೆ ಶುರು ಆಗಿದೆ. ಪಾಂಡ್ಸ್ ಸ್ನೋ, ಪಾಂಡ್ಸ್ ಪೌಡರ್, ಆಮೇಲೆ ಪಾಂಡ್ಸ್ ಕ್ರೀಮ್‌ಗಳು, ಇವೆಲ್ಲಾ ಮೂರು ರೂಪಾಯಿ, ನಾಲ್ಕು ರೂಪಾಯಿ, ಐದು ರೂಪಾಯಿ ಕಡಿಮೆ ಆಗುತ್ತಾ ಇದೆ; ಒಂದೊಂದು ಬಾಟಲ್‌ಗೆ ಎಂದು ಹೇಳುತ್ತಿದ್ದಾರೆ. ಇನ್ನೊಂದು ಕಡೆ ಏರ್ ಕಂಡೀಷನರ್ ರೇಟ್‌ಗಳು ಕಡಿಮೆ ಆಯಿತು ಎಂದು ಹೇಳುತ್ತಾರೆ. ಇನ್ನೊಂದು ಕಡೆ ಮೂರು ಸಾವಿರ ನಾಲ್ಕು ಸಾವಿರ ವಾಷಿಂಗ್

ಮೆಷಿನ್‌ನವರು ರೇಟ್ ಕಡಿಮೆ ಎಂದು ಅಡ್ವರ್ಟೈಸ್ ಮಾಡುತ್ತಿದ್ದಾರೆ. ಎಂದು ನಮ್ಮ ಮನೆಗಳಲ್ಲಿ ಬಹಳ ಹಿಂಸೆಯಾಗಿ ಹೋಗಿಬಿಟ್ಟಿದೆ. ಅದು ಕೊಡಿಸಿ ಇದು ಕೊಡಿಸಿ ಎಂದು. ನಾನು ಹೇಳುತ್ತಿದ್ದೇನೆ ಇದು ಇನ್ನೂ ಕಡಿಮೆ ಆಗುತ್ತದೆ ಸ್ವಲ್ಪ ತಾಳಿ ಎಂದು ಹೇಳುತ್ತಿದ್ದೇನೆ. ಟೆಲಿವಿಷನ್ ಕಡಿಮೆ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಎಷ್ಟೊಂದು ಚೀಟ್ ಮಾಡುತ್ತಿದ್ದಾರೆ ಇವರು. ಕಂಪ್ಯೂಟರ್ ಬೆಲೆ ಬಹಳ ಕಡಿಮೆ ಆಗುತ್ತದೆ ಎಂದು ಹೇಳುತ್ತಿದ್ದಾರೆ. ಆಮೇಲೆ ಮಾರುತಿ ಕಾರ್‌ದು ಒಂದೇ ಸಾರಿಗೆ ಧುಡುಂ ಎಂದು, 20 ಸಾವಿರ ಬಿದ್ದು ಹೋಯಿತು, 25 ಸಾವಿರ ಬೆಲೆಗೆ ಬಿದ್ದು ಹೋಯಿತು.

ಶ್ರೀ ಸಿ. ಬೈರೇಗೌಡ:– ಒಂದು ಮಾಡಲ್‌ಗೆ 37 ಸಾವಿರ ರೂಪಾಯಿ ಕಡಿಮೆ ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಕಾಂಟೆಸ್ಸಾ ಕಾರ್‌ದು ಕಡಿಮೆ ಆಗುತ್ತಿದೆ ಹೊರತು ಮತ್ತು ಇವರ ಜೊತೆಗೆ ರೈತರು ಉಪಯೋಗಿಸತಕ್ಕ ಗೊಬ್ಬರದ ಬೆಲೆ ಏನಾದರೂ ಕಡಿಮೆ ಆಗಿದಿದ್ದರೆ ನಾನು ಭಲೇ ಮನಮೋಹನ ಸಿಂಗ್ ಎಂದು ಹೇಳುತ್ತಿದ್ದೆ. ಇವರ ಆರ್ಥಿಕ ನೀತಿ ಏನು ? ಯಾರಿಗೆ ಇವರು ಫೂಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ? ತಾವು 20 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಇದ್ದವರು. ತಾವು ದಯಮಾಡಿ ವಿಚಾರ ಮಾಡಿ. ಇವರು ಯಾರಿಗೆ ಮೋಸ ಮಾಡುವುದಕ್ಕೆ ಹೊರಟಿದ್ದಾರೆ ಎಂದು. ನಾನು ಆ ದೃಷ್ಟಿಯಿಂದ ಮಾತನಾಡುತ್ತಾ ಇಲ್ಲ. ನಾನು ಹೇಳುತ್ತಾ ಇರತಕ್ಕದ್ದು ತಾವು ಇವತ್ತು ವಿಚಾರ ಮಾಡಬೇಕು. ಬಹಳ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿ ಇವರು ಇರತಕ್ಕವರು. ಕೇಂದ್ರದಲ್ಲಿ ತಾವು ಅಧಿಕಾರದಲ್ಲಿ ಇದ್ದೀರಿ, ಇಲ್ಲಿ ಅಧಿಕಾರದಲ್ಲಿ ಇದ್ದೀರಿ. ಮಾನ್ಯ ಕಾಗೋಡು ತಿಮ್ಮಪ್ಪನವರೇ ನಾನು ಹೇಳುತ್ತೇನೆ. ಜನಾರ್ದನ ಪೂಜಾರಿ ಅವರ ಸಾಲ ಮನ್ನಾದ ಬಗ್ಗೆ ನಾವು ಎಷ್ಟೊಂದು ರಾಜಕೀಯ ಮಾಡಿದೆವು. ನಾನು ನಿಷ್ಪಕ್ಷಪಾತವಾಗಿ ಮಾತನಾಡುತ್ತಿದ್ದೇನೆ. ನಾನು ಇದರಲ್ಲಿ ರಾಜಕೀಯ ಬೆರೆಸಬೇಕು ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿಲ್ಲ. ಬಡವಗ೯ದವರ ಬಗ್ಗೆ, ಹಿಂದುಳಿದ ವರ್ಗದವರ ಬಗ್ಗೆ, ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರ ಬಗ್ಗೆ ಅವರ ಸಾಮಾಜಿಕ ಕಲ್ಯಾಣದ ಬಗ್ಗೆ, ಅವರ ಅಭಿವೃದ್ಧಿ ವಿಚಾರದಲ್ಲಿ ಹಣ ಕೊಡಬೇಕು ಎಂದು ನಾವು ನೀವು ಎಲ್ಲಾ ಒಕ್ಕೊರಲಿನಿಂದ ಹೇಳುತ್ತೇವೆ. ಆದರೆ ಪ್ರಶ್ನೆ ಇರತಕ್ಕದ್ದು ಇವತ್ತು ಗ್ರಾಮೀಣ ಪ್ರದೇಶದಲ್ಲಿರತಕ್ಕ ಈ ರೈತರ ದುಸ್ಥಿತಿ ನಮ್ಮೆಲ್ಲರಿಗೂ ಗೊತ್ತಿದೆ. ಇವತ್ತು ಅಲ್ಲಿ ಏನು ಪರಿಸ್ಥಿತಿ ಇದೆ ಎಂದು ನಮ್ಮೆಲ್ಲರಿಗೂ ಗೊತ್ತಿರತಕ್ಕ ವಿಚಾರವಾಗಿದೆ. ಕೇಂದ್ರ ಸರ್ಕಾರದಿಂದ ಏನೂ ಸಹ, ಒಂದು ಪೈಸೆಯಷ್ಟೂ ಸಹ ಸಹಾಯ ಸಿಗುವುದಿಲ್ಲ, ಅವರು ಸಹಾಯ ಮಾಡುವುದಿಲ್ಲ. ಅದರಲ್ಲಿ ಏನೂ ಸಂಶಯ ಇಲ್ಲ.

ಶ್ರೀ ಸಿ. ಬೈರೇಗೌಡ:– ಒಂದು ನಿಮಿಷ. ಅಂಬಾನೀಸ್ ಕಂಪನಿ ಎಂದು ನಮ್ಮ ದೇಶದಲ್ಲಿ ಬಹಳ ದೊಡ್ಡ ಕಂಪನಿ ಇದೆ. ಅವರು ಸಿಂಥೆಟಿಕ್ ಯಾರ್ನ್ ತಯಾರು ಮಾಡತಕ್ಕವರು. ಅವರಿಗೆ ಇವತ್ತಿನ ಬಜೆಟ್‌ನಲ್ಲಿ ಎಷ್ಟು ಪ್ರತಿಫಲ ಸಿಕ್ಕಿದೆ ಎಂದರೆ 150 ಕೋಟಿ ರೂಪಾಯಿ. ಕೇವಲ ಒಂದು ಕಂಪನಿಗೆ 150 ಕೋಟಿ ರೂಪಾಯಿಗಳ ಸವಲತ್ತು ಸಿಕ್ಕಿದೆ. ನಮಗೆ 1.50 ಪೈಸೆಯಾದರೂ ಬೇಡವೆ ?

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಿನ್ನೆಯ ದಿವಸ ಮಾನ್ಯ ಮಂತ್ರಿಗಳಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಒಂದು ಸಭೆ ಕರೆದಿದ್ದರು. ಆ [illegible] ನಾವು, ಪ್ರೊ: ನಂಜುಂಡಸ್ವಾಮಿಯವರು, ಶಿವಕುಮಾರ್‌ರವರು ಭಾಗವಹಿಸಿದ್ದೆವು. ಡಂಕೆಲ್ ಪ್ರಸ್ತಾವನೆ ಬಗ್ಗೆ ವಿವರವಾಗಿ ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೆವು. ಆ ಸಭೆಗೆ ಎಲ್ಲಾ ಅಧಿಕಾರಿಗಳು ಬಂದಿದ್ದರು. ಆ ಡಂಕೆಲ್ ಪ್ರಸ್ತಾವನೆಯನ್ನು ರಾಜ್ಯಸರ್ಕಾರದ [illegible] ಅಧಿಕಾರಿಗಳು ಓದಿದ್ದಾರೆಯೋ ಗೊತ್ತಿಲ್ಲ. ಏಕೆಂದರೆ, ನಮ್ಮಲ್ಲಿ ಕೆಲವು ಅಧಿಕಾರಿಗಳ [illegible] ಅವರ ಬಗ್ಗೆ ನಮಗೆಲ್ಲಾ ಗೌರವವಿದೆ. ಅವರು ಅಧಿಕಾರದಲ್ಲಿದ್ದು ಬಹಳ ಪ್ರಾಮಾಣಿಕತೆಯಿಂದ ಜನಪರ ಕೆಲಸ ಮಾಡಿರತಕ್ಕಂಥವರು, ಅವರು ನಮ್ಮ ಮಧ್ಯೆ ಇರತಕ್ಕಂಥವರು, ಅವರ ಬಗ್ಗೆ ನಮ್ಮದೇನೂ ತಕರಾರಿಲ್ಲ.

ಆದರೆ ಅಧಿಕಾರಿಗಳಿಂದ ತಕ್ಷಣ ಅವರು ಸರ್ವಜ್ಞರಲ್ಲ. ಎಲ್ಲಾ ವಿಚಾರಗಳನ್ನು ಅವರು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಅವರುಗಳು ಇವೊತ್ತು ಸಹಕಾರ ಇಲಾಖೆಯ ಕಾರ್ಯದರ್ಶಿಯಾಗಿರುತ್ತಾರೆ. ನಾಳೆ ಎನ್.ಜಿ.ಇ.ಎಫ್.ನ ಅಧ್ಯಕ್ಷರಾಗುತ್ತಾರೆ. ನಾಳಿದ್ದು ಅವರನ್ನು ಕಾಡಾ ಅಧ್ಯಕ್ಷರನ್ನಾಗಿ ಮಾಡುತ್ತಾರೆ. ಅದು ಮುಖ್ಯಮಂತ್ರಿಗಳ whims and fancles ಪ್ರಕಾರ ನಡೆಯುತ್ತದೆ. ಅಧಿಕಾರಿಗಳಿಂದ ತಕ್ಷಣ ಇವರಿಗೆಲ್ಲಾ ಗೊತ್ತಿರುತ್ತದೆಯೆ ? ಡಂಕೆಲ್ ಪ್ರಸ್ತಾವನೆ ಬಂದರೆ ಕೇವಲ ರೈತರಿಗಷ್ಟೇ ಅಲ್ಲ, ನಮ್ಮ ದೇಶದಲ್ಲಿರತಕ್ಕಂಥ ಪ್ರತಿಯೊಂದು ಕ್ಷೇತ್ರಗಳಿಗೆ, ಅದು ಕೈಗಾರಿಕಾ ರಂಗ ಇರಬಹುದು, ಶಿಕ್ಷಣ ಕ್ಷೇತ್ರವಿರಬಹುದು. ಎಲ್ಲಾ ಕ್ಷೇತ್ರಗಳಲ್ಲೂ ಸಹ ಒಂದು ರೀತಿಯ ಬೃಹದಾಕಾರವಾಗಿ ನಮ್ಮ ಎಲ್ಲ ಬಡ ರಾಷ್ಟ್ರಗಳನ್ನು ಹಾಳು ಮಾಡತಕ್ಕಂಥ ಕಾನೂನು ಇದಾಗಿದೆ. ಇದೊಂದು ಕರ್ಮವಾಗಿದೆ. ಈ ಹಿನ್ನೆಲೆಯಲ್ಲಿ, ಇಡೀ ದೇಶದಲ್ಲಿ, ನಾವುಗಳೆಲ್ಲರೂ ದೇಶಪ್ರೇಮಿಗಳಾಗಿರತಕ್ಕಂಥವರು ವಿಚಾರ ಮಾಡತಕ್ಕಂಥ ಒಂದು ಕಾಲ ಬಂದಿದೆ. ಯಾವ ರೀತಿಯಲ್ಲಿ ಆರ್ಥಿಕವಾಗಿ ನಾವು ಮುಂದೆ ಹೋಗಬೇಕು ? ಇದರಲ್ಲಿ ರಾಜಕೀಯ ಬೆರೆಸುವುದನ್ನು ನಾವೂ ನಿಲ್ಲಿಸಬೇಕಾಗುತ್ತದೆ, ನೀವೂ ಸಹ ನಿಲ್ಲಿಸಬೇಕಾತ್ತದೆ. ನಾವು ರೈತರ ಪರವಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಎಂದು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದರು ತುಂಬಾ ಸಂತೋಷ. ಹೋರಾಟ ಮಾಡಿಕೊಂಡು ಬಂದಿದ್ದರ ಬಗ್ಗೆ ಯಾರೂ ಸಹ ಇಲ್ಲವೆಂದು ಹೇಳುವುದಿಲ್ಲ. ಆದರೆ, ಅವರ ಪಕ್ಷದ ನೀತಿಯ ಪ್ರಶ್ನೆ ಬಂದಾಗ ಇವರು ಯಾವ ದಿಕ್ಕಿನಲ್ಲಿ ಹೋಗುತ್ತಾರೆಂಬುದರ ಬಗ್ಗೆ ನಾವು ಯೋಚನೆ ಮಾಡುತ್ತೇವೆಯೇ ವಿನಹ ಯಡಿಯೂರಪ್ಪನವರ ಬಗ್ಗೆ ನಮಗೆ ಯಾವುದೇ ವೈಯಕ್ತಿಕವಾಗಿ ದ್ವೇಷ, ಅಸೂಯೆ ಇಲ್ಲ. ಅವರ ಬಗ್ಗೆ ನಮಗೆ ಅಭಿಮಾನವಿದೆ. ಆದರೆ, ಅವರ ಪಕ್ಷದ ನೀತಿಗಳು ಈ ವರ್ಗದ ಜನರ ಬಗ್ಗೆ ಏನಿದೆ ಎನ್ನತಕ್ಕಂಥಾದ್ದರ ಬಗ್ಗೆ ನಾವು ಟೀಕೆ ಮಾಡುತ್ತೇವೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ. ಹಿಂದೆ ಮಾನ್ಯ ಜಾಲಪ್ಪನವರು ಸಹಕಾರ ಮಂತ್ರಿಗಳಾಗಿದ್ದರು. ಬಹುಶಃ ನನಗನ್ನಿಸುತ್ತದೆ. ಸಹಕಾರಿ ರಂಗದಲ್ಲಿ ಅವರು ಮಾಡಿರತಕ್ಕಂಥ ಕೆಲಸ ಬಹಳ ಅದ್ವಿತೀಯವಾದದ್ದು. ನಮಗೆ ಮಾತನಾಡುವುದಕ್ಕೆ ನೈತಿಕವಾಗಿ ಸ್ವಲ್ಪ ಹಕ್ಕು ಇದೆ. ಏಕೆಂದರೆ ಆ ಕಾಲದಲ್ಲಿ ನಮ್ಮ ಸರ್ಕಾರವಿದ್ದಾಗ ರೈತರ ಸಾಲವನ್ನು ಸಂಪೂರ್ಣ ರದ್ದು ಮಾಡುವುದಕ್ಕಾಗದಿದ್ದರೂ ಒಂದಿಷ್ಟು ಬಡ್ಡಿಯನ್ನು ರದ್ದು ಮಾಡಿದೆವು. 7 ಪರ್ಸೆಂಟ್‌ಗೆ ನಾವು ಸಾಲ ಕೊಡುತ್ತಿದ್ದೆವು. ವಿಫಲವಾದ ಬಾವಿಗಳಿಗೆ ಕೊಟ್ಟಿರುವಂಥ ಹಣವನ್ನು ಸಂಪೂರ್ಣ ರದ್ದು ಮಾಡತಕ್ಕಂಥ ಕೆಲಸ ಮಾಡಿದೆವು. ರೈತರ ಸಂಘ ಅವೊತ್ತು ಹೋರಾಟ ಮಾಡಿದ ಪರಿಣಾಮವಾಗಿ ಅವರೆಲ್ಲರ ಸಹಕಾರದಿಂದ ನಾವು ಅಧಿಕಾರಕ್ಕೆ ಬಂದೆವು. ಆಗ ಒಂದು ವಾತಾವರಣವಿತ್ತು. ಆ ಕೆಲಸ ಮಾಡಿದೆವು. ಆದರೆ, ಎಲ್ಲಾ ಮಾಡಿದ್ದೇವೆಂದು ನಾನೇನೂ ಹೇಳುವುದಿಲ್ಲ. ಆದರೆ, ಇವೊತ್ತು ರೈತರ ಪರಿಸ್ಥಿತಿ ಏನಾಗಿದೆಯೆಂಬುದು ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಇವೊತ್ತು ಗೊಬ್ಬರದ ಬೆಲೆ ಜಾಸ್ತಿಯಾಗಿದೆ, ವಿದ್ಯುತ್ ಸರಬರಾಜು ಮಾಡುವುದಕ್ಕಾಗುತ್ತಿಲ್ಲ. ಎರಡು – ಮೂರು ಎಕರೆ ಜಮೀನು ಹೊಂದಿರುವಂಥ ರೈತರ ಕಷ್ಟವಂತೂ ಹೇಳತೀರದಾಗಿದೆ. ರೈತ 5–10 ಗುಂಟೆ ಜಮೀನಿನಲ್ಲಿ ಬಾಳೆಹಣ್ಣು ಬೆಳೆದರೆ ಅದನ್ನು 20–25 ಪೈಸೆಗೂ ತೆಗೆದುಕೊಂಡು ಹೋಗುವವರಿಲ್ಲ. ನಮ್ಮ ಜಿಲ್ಲೆಯಲ್ಲಿ ಟೊಮ್ಯಾಟೊ ಬೆಳೆದು ಅದನ್ನು ಬೀದಿಗೆಸೆಯುತ್ತಿದ್ದಾರೆ. ತಮಗೆ ಹೇಳಬೇಕೆಂದರೆ , ಡೀಸೆಲ್ ಬೆಲೆ, ಬಸ್ಸಿನ ದರ ಇಷ್ಟೊಂದು ಜಾಸ್ತಿಯಾಗಿರುವಾಗ ನಾವ್ಯಾಕೆ ಬೆಂಗಳೂರಿಗೆ ತೆಗೆದುಕೊಂಡು ಹೋಗಬೇಕು ? ಎನ್ನತಕ್ಕಂಥ ಪರಿಸ್ಥಿತಿ ರೈತರಿಗೆ ಬಂದಿದೆ. ಇದು ತಮಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಆ ಕಾರಣಕ್ಕಾಗಿ ಇವೊತ್ತು ಸರ್ಕಾರ ಬಹಳ ಮುಖ್ಯವಾಗಿ ರೈತರ ನೆರವಿಗೆ ಬರಬೇಕು, ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತದೆ. ರೇಷ್ಮೆಗೂಡಿನ ವಿಚಾರದಲ್ಲಿ ಇವೊತ್ತಿನ ದಿವಸ ಸರ್ಕಾರ ಬಹಳ ಒಳ್ಳೆಯ ತೀರ್ಮಾನ ತೆಗೆದುಕೊಂಡಿದೆ.

ಆದರೆ, ನಮ್ಮ ಸರ್ಕಾರದ ಬೆಲೆಗೆ ಕೇಂದ್ರ ಸರ್ಕಾರದಿಂದ ಮೂರು ಕಾಸಿನ ಬೆಲೆಯೂ ಸಹ ಇಲ್ಲ. ಕೇಂದ್ರ ಸರ್ಕಾರದವರಿಗೆ ಜಯಲಲಿತಾರಂಥ ಮುಖ್ಯಮಂತ್ರಿಗಳು ಬೆದರಿಕೆ ಹಾಕಿದರೇ ಅವರು ಬಗ್ಗುವುದು, ಮದ್ರಾಸಿಗೆ ಬರುವಂಥಾದ್ದು. 'ಸಾಲಮನ್ನಾ ಮಾಡಿ' ಎಂದು ನಾವುಗಳೆಲ್ಲರೂ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಿದ್ದಾಗ ಮೂರು ಕಾಸಿನ ಮರ್ಯಾದೆ ಸಿಗಲಿಲ್ಲ. ನಮ್ಮ ಹಾರ ಖರ್ಚಾಯಿತು, ಹಣ ಖರ್ಚಾಯಿತು, ಟಿಕೇಟಿನ ಬೆಲೆ ಒಂದೂವರೆ ಲಕ್ಷ ರೂಪಾಯಿಗಳು ಹಾಗೂ ನಮ್ಮ ಶಾಸಕರಿಗೆ ಟಿ.ಎ. ಡಿ.ಎ. ಖರ್ಚಾಯಿತು. ಗೊಬ್ಬರದ ಬೆಲೆ ಬಗ್ಗೆ ನಾವು ನಿಯೋಗ ಹೋದೆವು, ಮೂರು ಕಾಸಿನ ಉಪಯೋಗವಾಗಿಲ್ಲ. ಆದುದರಿಂದ, ಕೇಂದ್ರ ಸರ್ಕಾರದಿಂದ ನಮಗೇನಾದರೂ ಸಹಾಯವಾಗುತ್ತದೆಂದು ನಾನಂತೂ ನಂಬುವುದಿಲ್ಲ. ಅಲ್ಲದೆ, ಕೇಂದ್ರ ಸರ್ಕಾರದವರು ಕರ್ನಾಟಕ ರಾಜ್ಯಕ್ಕೆ ಮಾಡಿರತಕ್ಕಂಥ ಅನ್ಯಾಯಗಳ ವಿರುದ್ಧ ನಾವುಗಳೆಲ್ಲರೂ ಸೇರಿ ಪ್ರತಿಭಟನೆ ಮಾಡಬೇಕಾಗುತ್ತದೆಂದು ಅವೊತ್ತೆ ನೇರವಾಗಿ ಹೇಳಿದ್ದೆ. ಈಗ ಅಧಿಕಾರದಲ್ಲಿರತಕ್ಕಂಥ ನಮ್ಮ ಸ್ನೇಹಿತರುಗಳು ರೈತರ ನೆರವಿಗೆ ಬರಬೇಕು. ರಿಸೌರ್ಸ್ ಮೊಬಿಲೈಜೇಷನ್ ದೃಷ್ಟಿಯಿಂದ ನೀವು ತೆಗೆದುಕೊಂಡಿರತಕ್ಕ ಕೆಲವು ಕ್ರಮಗಳನ್ನು ವಿರೋಧ ಪಕ್ಷದಲ್ಲಿರುವ ನಾವು ಸ್ವಾಗತಿಸಿದ್ದೇವೆ. ನಾವುಗಳೆಲ್ಲರೂ ಇದ್ದಾಗ ಬಹಳ ಚೆನ್ನಾಗಿದೆಯೆಂದು ನಾನೇನು ಹೇಳತಕ್ಕಂಥವನಲ್ಲ. ತಪ್ಪುಗಳಿವೆ. ಆ ಕಾರಣದಿಂದ ಹೇಳುತ್ತಿದ್ದೇನೆ. ನೀವು ಸ್ವಲ್ಪ ಸಹಾಯ ಮಾಡಬಹುದು. 150ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡುವುದು, ಬಡ್ಡಿಯನ್ನು ಸಂಪೂರ್ಣ ರದ್ದು ಮಾಡತಕ್ಕಂಥಾದ್ದು ನಿಮಗೇನೂ ಕಷ್ಟವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲದೆ, ಬಹಳ ಮುಖ್ಯವಾದ ಇದಕ್ಕೆ ಸಂಬಂಧಪಟ್ಟಂತೆ ಒಂದು ಅಂಶವನ್ನು ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದರು. ಒಂದು ಕಾಲದಲ್ಲಿ ಯಾವ ತರಹದ ಓಪನ್ ವೆಲ್ಸ್ ಫೇಲ್ ಆಗುತ್ತಿದ್ದವೋ ಅದೇ ರೀತಿ ಟ್ಯೂಬ್ ವೆಲ್ಸ್ ಸಹ ಫೇಲ್ ಆಗುತ್ತಿದೆ.

12.45 ಪಿ.ಎಂ.

(ಶ್ರೀ ಶಿವನಂಜಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ರೈತ 15–50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಬರೀ ಬೋರ್‌ವೆಲ್ ಹಾಕಿಸುತ್ತಾನೆ, ಆದರೆ ಅದು 6 ತಿಂಗಳಲ್ಲಿ ಇಲ್ಲವೆ ಒಂದು ವರ್ಷದಲ್ಲಿ ಫೇಲ್ಯೂರ್ ಆಗುತ್ತದೆ. ಹೀಗಾಗಿ ಅವನು ಜಮೀನನ್ನು ಮಾರಿ ಊರನ್ನು ಬಿಟ್ಟು ಹೋಗತಕ್ಕ ಪರಿಸ್ಥಿತಿಗೆ ಬಂದಿದ್ದಾನೆ, ಅವನು ಹಣವನ್ನು ವಾಪಸ್ ಕೊಡಲು ಆಗುತ್ತದೆಯೇ ?

ಆದ್ದರಿಂದ ರೈತನ ನೆರವಿಗೆ ರಾಜ್ಯ ಸರ್ಕಾರ ಬರಬೇಕಾಗುತ್ತದೆ. ಅದೇ ಉದ್ದೇಶದಿಂದ ಇಲ್ಲಿ ಚರ್ಚೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇಷ್ಟನ್ನು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ಕಾಗೋಡು ತಿಮ್ಮಪ್ಪನವರೆ, ನಿಲುವಳಿ ಸೂಚನೆಗೆ ಅವರ ಕಡೆಯಿಂದ 18 ಸದಸ್ಯರು ಸಹಿ ಮಾಡಿದ್ದಾರೆ. ತಮ್ಮ ಕಡೆಯಿಂದ ಯಾರೂ ಮಾಡಿಲ್ಲ, ಅವರಿಗೆ ಮಾತನಾಡಲು ಅವಕಾಶ ಕೊಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:– ಅಧ್ಯಕ್ಷರೇ ಇಂಥ ಸೂಚನೆಗಳು ಅರ್ಧಂಬರ್ಧ ಚರ್ಚೆ ಮಾಡುವುದಕ್ಕಿಂತ ಅದನ್ನು ಈ ಸದನದ ವಿಷಯವನ್ನಾಗಿ ಪರಿವರ್ತಿಸಿಕೊಂಡರೆ ನಾವೆಲ್ಲರೂ ಆ ಚರ್ಚೆಯಲ್ಲಿ ಭಾಗವಹಿಸತಕ್ಕ ವ್ಯವಸ್ಥೆಯಾಗುತ್ತದೆ ಮತ್ತು ಇದರ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಲು

ಅನುಕೂಲವಾಗುತ್ತದೆ.

ಅಧ್ಯಕ್ಷರು:– ತಮಗೆಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡುವುದಕ್ಕಾಗಿ ಎಲ್ಲರೂ ಬೇಗ ಬೇಗ ಮಾತನಾಡಿ ಮುಗಿಸಬೇಕೆಂದು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಸನ್ಮಾನ್ಯ ಅಧ್ಯಕ್ಷರೆ, ರೈತರ ಸಾಲದ ಬಗ್ಗೆ ನಿರಂತರವಾಗಿ ಅನೇಕ ಬಾರಿ ಈ ಸದನದಲ್ಲಿ ಚರ್ಚೆಯಾಗುತ್ತಿದೆ. ಅಂತಿಮವಾಗಿ ನಾವೆಲ್ಲರೂ ಸೇರಿ ಸಾಲ ಮನ್ನಾ ಎನ್ನತಕ್ಕದನ್ನು ಸ್ವಲ್ಪ ಬದಲಾವಣೆ ಮಾಡಿ ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನು ಮನ್ನ ಮಾಡತಕ್ಕ ತೀರ್ಮಾನಕ್ಕೆ ಬಂದಿದ್ದೇವೆ. ಈಗಾಗಲೇ ಮುಖ್ಯಮಂತ್ರಿಗಳ ಮನಸ್ಸನ್ನು, ಅವರು ಮಾತನಾಡುವ ಧಾಟಿಯನ್ನು ನೋಡಿದರೆ ನಾಳೆ ಏನಾದರೂ ಇದಕ್ಕೆ ಅನುಕೂಲವನ್ನು ಮಾಡಿಕೊಡಬಹುದು ಎನ್ನತಕ್ಕ ಭವಿಷ್ಯ ಕಾಣುತ್ತದೆ. ಅವರು ಇದರ ಬಗ್ಗೆ ತಮ್ಮ ಸರ್ಕಾರದೊಂದಿಗೆ ಮಾತುಕತೆಯಾಡಿ ಅನಂತರ ಇದರ ಬಗ್ಗೆ ತೀರ್ಮಾನಕ್ಕೆ ಬರುತ್ತೇನೆಂದು ಆಗಲೇ ಹೇಳಿದ್ದಾರೆ. ಹಾಗಾದರೆ, ನಿಜವಾಗಿಯೂ ಸ್ವಲ್ಪವಾದರೂ ತೀವ್ರವಾಗಿ ಬರಗಾಲ ಬಂದಂಥ ಭಾಗಕ್ಕೆ ತಕ್ಷಣ ಮಳೆ ಬಂದರೆ ಹೇಗಾಗುತ್ತದೆಯೋ ಆ ರೀತಿಯಾಗುತ್ತದೆ. ಆದುದರಿಂದ ಅದನ್ನು ಮಾಡಿದರೆ ಸಂತೋಷವಾಗುತ್ತದೆ. ಇವತ್ತು ಈ ವಿಷಯದ ಬಗ್ಗೆ ಅನೇಕ ಸ್ನೇಹಿತರುಗಳು ಚಿಂತನೆ ಮಾಡಿದ್ದಾರೆ,ರೈತರ ಸಮಗ್ರ ಚಿಂತನೆಯ ಬಗ್ಗೆ ಅವರುಗಳು ಮಾತನಾಡಿದ್ದಾರೆ. ಶ್ರೀ ಜನಾರ್ದನ ಪೂಜಾರಿಯವರ ಸಾಲಮೇಳದ ಬಗ್ಗೆ ನನಗನ್ನಿಸಿದಂತೆ ನಾವೆಲ್ಲರೂ ಸಹ ಬಹಳವಾಗಿ ಮೆಚ್ಚಿದೆವು. ಪೂಜಾರಿಯವರೇ ಸಾಲಮೇಳವನ್ನು ಮಾಡುವಾಗ ನಾವು ಜನರಿಗೆ 2–3 ಸಾವಿರ ಸಾಲವನ್ನು ಕೊಡುತ್ತಿದ್ದೇವೆ. ಇದರಿಂದ ಲಕ್ಷಾಂತರ ಜನರಿಗೆ ಅನುಕೂಲವಾಗುತ್ತದೆ. ರಾಜ್ಯದಲ್ಲಿ ಏನು ಲಕ್ಷಾಂತರ ದೊಡ್ಡ ದೊಡ್ಡ ಕಾರ್ಖಾನೆಯವರು ಮತ್ತು ಬ್ಯಾಂಕುಗಳಲ್ಲಿ ನಡೆಯತಕ್ಕ ಭ್ರಷ್ಟಾಚಾರವನ್ನು ಇದಕ್ಕೆ ಹೋಲಿಸಿದರೆ ಈ ಸಾಲಮೇಳದಿಂದ ನಮಗೆ ನಷ್ಟವಿಲ್ಲವೆಂದು ಹೇಳಿದರು. ಬಡವರಿಗೆ ಸಾಲವನ್ನು ಕೊಡತಕ್ಕದ್ದರಿಂದ ನಿಜವಾಗಿಯೂ ನಮಗೆ ನಷ್ಟವಾಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ಅವರ ಅಧಿಕಾರ ಕಳೆದ ಮೇಲೆ ಈ ಸಾಲಮೇಳವು ಅಷ್ಟೊಂದು ಜನಪ್ರಿಯವಾಗಲಿಲ್ಲ. ಅವರ ನಂತರ ಬಂದಂಥ ಯಾವುದೇ ಮಂತ್ರಿಯಾಗಲಿ ಇದರ ಬಗ್ಗೆ ಅಷ್ಟೊಂದು ಚಿಂತನೆ, ಧೈರ್ಯವನ್ನು ಮಾಡಲಿಲ್ಲ. ನಾನು ನಿಜವಾಗಿಯೂ ಪೂಜಾರಿಯವರನ್ನು ಮೆಚ್ಚುತ್ತೇನೆ. ತಮಗೆ ಗೊತ್ತಿರುವ ಹಾಗೆ ಸಾಮಾನ್ಯ ಜನರು ಬ್ಯಾಂಕಿನ ಬಾಗಿಲನ್ನು ಮುಟ್ಟತಕ್ಕ ಶಕ್ತಿಯನ್ನು ತಂದು ಕೊಟ್ಟವರು ಈ ಪೂಜಾರಿಯವರು.

ಅವರು ಯಾವುದೇ ಪಕ್ಷದವರು ಆಗಿರಲಿ, ರೇಷನ್ ಕಾರ್ಡ್‌ನ್ನು ತೋರಿಸಿ ಹಣವನ್ನು ತೆಗೆದುಕೊಳ್ಳಬಹುದೆಂದು ಮಾಡಿದರು. ಇದು ಕೇವಲ ಶ್ರೀಮಂತರಿಗೆ ಮತ್ತು ದೊಡ್ಡ ದೊಡ್ಡ ಕಾರ್ಖಾನೆಯ ಮಾಲೀಕರುಗಳು ಮಾತ್ರ ಎನ್ನತಕ್ಕ ನೀತಿ ಏನಿತ್ತು. ಅದನ್ನು ಇವರು ಅರ್ಥಸಚಿವರಾದ ನಂತರ ಕ್ರಾಂತಿಕಾರಿ ಬದಲಾವಣೆ ಮಾಡಿದರು. ಅದರ ನಂತರ ನನಗೆ ತಿಳಿದಂತೆ ಅಂಥ ಸಾಲಮೇಳಗಳು ನಡೆಯಲಿಲ್ಲ. ಪೂಜಾರಿಯವರು ಏನು ಹೇಳಿದರೆಂದರೆ, ಬಡವರು 2–3 ಸಾವಿರ ರೂ.ಗಳ ಸಾಲವನ್ನು ಕಟ್ಟದಿದ್ದರೂ ಕೂಡ ದೊಡ್ಡ ದೊಡ್ಡ ಶ್ರೀಮಂತರಿಂದ, ಕಾರ್ಖಾನೆಯವರಿಂದ ನಡೆಯುತ್ತಿರುವ ಲೂಟಿಗೆ ಇದನ್ನು ಹೋಲಿಕೆ ಮಾಡಿದರೆ ಇದೇನೂ ದೊಡ್ಡ ಲೂಟಿಯಲ್ಲ ಎನ್ನತಕ್ಕ ಮಾತನ್ನು ಹೇಳಿದರು. ಇದು ಸ್ವಾಗತ ಮಾಡತಕ್ಕ ವಿಚಾರ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಒಂದು ತೀರ್ಮಾನಕ್ಕೆ ಬರಬೇಕು. ನಾನು ಮೊನ್ನೆ ಕೆಲವು ಮಾನ್ಯಮಂತ್ರಿಗಳ ಜೊತೆ ಮಾತನಾಡುವಾಗ ಅವರು ಏನು ಹೇಳಿದರೆಂದು ಹೇಳುತ್ತೇನೆ. ನಾಳೆ ಅವರು ಏನು ಹೇಳುತ್ತಾರೋ ನೋಡಿಕೊಂಡು ಅನಂತರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸೋಣ. ಈಗ ಅವರ ಹೆಸರನ್ನು ಹೇಳುವುದು ಬೇಡ. ಅವರು ಹೇಳಿದರು ಕೇವಲ 180 ಕೋಟಿಯಷ್ಟು ಸಾಲವನ್ನು ಮನ್ನಾ ಮಾಡುವುದಕ್ಕೆ ಯಾವುದಾದರೊಂದು

ವಿಧಾನವನ್ನು ನಾವು ಹುಡುಕಬಹುದೆಂಬ ಭರವಸೆಯನ್ನು ಕೆಲವು ಮಂತ್ರಿಗಳು ಹೇಳಿದರು. ಅವರಲ್ಲೂ ಕೂಡ ಈ ಬಗ್ಗೆ ಬಹಳ ಉತ್ಸುಕತೆ ಇದೆ. ಇಷ್ಟು ಹಣಕ್ಕೆ ನಾವು ಬೇರೆ ಯಾವುದಾದರೊಂದು ವಿಧಾನವನ್ನು ಕಂಡುಹಿಡಿಯಬೇಕೆಂದು ಒಂದು ಸೂತ್ರವನ್ನು ಕಂಡುಹಿಡಿಯುತ್ತಿದ್ದಾರೆ. ಇದು ಬಹಳ ಸಂತೋಷ. ವಿದ್ಯುಚ್ಛಕ್ತಿ ಮಂಡಳಿಗೆ ಎಷ್ಟು ವರ್ಷದಿಂದ ಹಣ ನಿಂತಿದೆ? ಎಷ್ಟು ಬಾಕಿ ನಿಂತಿದೆ, ಈ ಹಣವನ್ನು ವಸೂಲ್ಮಾಡಲು ಏನಾದರೂ ವ್ಯವಸ್ಥೆ ನಡೆದಿದೆಯೇ ಎಂದರೆ ಯಾವುದೇ ವ್ಯವಸ್ಥೆಯೂ ನಡೆದಿಲ್ಲ. ಇದನ್ನು ಕೊಡಬೇಕಾದವರು ಬಡ ರೈತರಲ್ಲ, ಸಾಮಾನ್ಯ ಜನರಲ್ಲ, ಭಾರಿ ಭಾರಿ ಧನಿಕರು, ಶ್ರೀಮಂತರು, ದೊಡ್ಡ ದೊಡ್ಡ ಕಾರ್ಖಾನೆ, ಗಿರಣಿಗಳ ಮಾಲೀಕರು. ಅವರಿಂದ ವಸೂಲ್ಮಾಡುವುದಕ್ಕೆ ಸರ್ಕಾರದಲ್ಲಿ ಸರಿಯಾದ ಒಂದು ವಿಧಾನ ಇಲ್ಲ. ಇವತ್ತು ರೈತರು ಯಾರಾದರೂ ತಮ್ಮ ಸಾಲವನ್ನು ಕಟ್ಟದಿದ್ದರೆ, ಮಾನ್ಯ ನಂಜುಂಡಸ್ವಾಮಿಯವರು ತೋರಿಸಿದಂಥ ಪತ್ರಗಳನ್ನು ತೋರಿಸಿ ನೋಟೀಸ್ ಜಾರಿ ಮಾಡುವುದು, ಹರಾಜು ಹಾಕುವುದು, ಮನೆಗಳಿಗೆ ನುಗ್ಗಿ ಸಾಮಾನುಗಳನ್ನು ಬೀದಿಗೆ ಹಾಕುವುದು ನಡೆಯುತ್ತಿದೆ. ಈ ಪರಿಸ್ಥಿತಿ ಆದರೆ ನಮ್ಮ ಈ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಕೂಡ ರೈತನ ಪಾಲಿಗೆ ಸ್ವಾತಂತ್ರ್ಯವಿಲ್ಲ. ಇವತ್ತು ರೈತ ಪಡುತ್ತಿರುವ ಕಷ್ಟವನ್ನು ನೋಡಿದರೆ ನಿಜವಾಗಿಯೂ ನಮಗೆ ಕಣ್ಣೀರು ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಸ್ವಲ್ಪವಾದರೂ ಪ್ರಾಮಾಣಿಕವಾಗಿ ನಾವು ರೈತರ ಪರವಾಗಿ ರೈತರ ಹೆಸರನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದಿದ್ದೇವೆ ಎಂದು ತಿಳಿದುಕೊಂಡು ಇದರ ಬಗ್ಗೆ ಚಿಂತನೆಯನ್ನು ಮಾಡದೇ ಹೋದರೆ, ನಿಜವಾಗಿಯೂ ಇದು ಒಂದು ಅತ್ಯಂತ ನೋವಿನ ಪ್ರಸಂಗವಾದೀತು. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಇತ್ತೀಚೆಗೆ ನಾವೇ ಬೆಳೆದ ಬೆಳೆಯನ್ನು ಮಾರುವುದಕ್ಕೆ ಹೋದಾಗ, ಅದರಲ್ಲಿ ಸಿಕ್ಕಿದ್ದು ನಾವು ಅದನ್ನು ಬೆಳೆಯುವುದಕ್ಕೆ ಎಷ್ಟು ಖರ್ಚು ಮಾಡಿದ್ದೆವೋ ಅದಕ್ಕಿಂತ ಕಡಿಮೆ. ನಾವು ಖರ್ಚು ಮಾಡಿದಷ್ಟು ಹಣ ಬರಲಿಲ್ಲ. ಅಂದರೆ ಈ ಒಂದು ಪರಿಸ್ಥಿತಿಯನ್ನು ನೋಡಿದರೆ ರೈತನಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಆದರೆ, ಬೇರೆಯವರಿಗೆ ಅವರದೆ ಆದಂಥ ಒಂದು ಬೆಲೆಯನ್ನು ನಿಗದಿ ಮಾಡಿರುತ್ತಾರೆ. ಈ ಪರಿಸ್ಥಿತಿ ಇರುವುದರಿಂದ ರೈತನೇ ಬೇರೆ, ಬೇರೆಯವರೇ ಬೇರೆಯಾಗಿದ್ದಾರೆ. ಈ ರೀತಿ ನಾವು ರೈತನನ್ನು ಕಟ್ಟಕಡೆಯವನನ್ನಾಗಿ ಮಾಡಿದ್ದೇವೆ. ಈ ಪರಿಸ್ಥಿತಿಯಲ್ಲಿ ಸರ್ಕಾರದವರು ಗಮನಹರಿಸಿ ದೊಡ್ಡ ರೈತ, ಸಣ್ಣ ರೈತ ಎನ್ನುವ ಭೇದಭಾವವನ್ನು ತೊರೆದು ರೈತನಿಗೆ ಸ್ವಲ್ಪವಾದರೂ ಉಸಿರಾಡಲು ಅವಕಾಶ ಕೊಟ್ಟು, ಅವನ ಬಿಸಿ ಉಸಿರು ಹೊರಗಡೆ ಬಾರದೇ ಇರುವಂತೆ ನೋಡಿಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡದಿದ್ದರೆ ನಿಜವಾಗಿ ನಾವು ಅವನಿಗೆ ಅತ್ಯಂತ ಪಾಪದ ಕೆಲಸವನ್ನು ಮಾಡಿದಂತಾಗುತ್ತದೆ. ಇದಕ್ಕಾಗಿ ಸಮಗ್ರ ಸಾಲವನ್ನೇ ಮನ್ನಾ ಮಾಡಬೇಕೆಂದು ಹೇಳುವಂಥಾದ್ದು ಪತ್ರಿಕೆಗಳಲ್ಲಿ ಬಂತು. ಮಾನ್ಯ ಬೈರೇಗೌಡರು ಹೇಳಿದಂತೆ ಇನ್ನೇನು ಸಾಲ ಮನ್ನಾ ಆಗುತ್ತದೆ, ಸಾಲ ಮನ್ನಾ ಆಗುತ್ತದೆ ನಾವು ಸಾಲವನ್ನು ಕೊಡಬೇಕಾಗಿಲ್ಲ, ಎಂದು ರೈತರು ಧೈರ್ಯದಿಂದ ಕೂತರು. ನಾವು ನಮ್ಮ ನಮ್ಮ ಕ್ಷೇತ್ರಗಳಿಗೆ ಹೋದಾಗ ರೈತರು ಬಂದು ಸ್ವಾಮಿ, ನಮ್ಮ ಸಾಲ ಮನ್ನಾ ಆಗುತ್ತದಂತೆ ಹೌದೆ ಎಂದು ಕೇಳುತ್ತಿದ್ದಾರೆ, ಅದಕ್ಕೆ ನಾವೂ ಕೂಡ ಸಾಲ ಮನ್ನಾ ಆಗುತ್ತದೆ, ಸಾಲ ಮನ್ನಾ ಆಗುತ್ತದೆ, ಸ್ವಲ್ಪ ಇರಿ, ಇದರ ಬಗ್ಗೆ ನಾವು ಹೋರಾಟ ಮಾಡುತ್ತಿದ್ದೇವೆ ಎಂದು ಹೇಳುವಂಥ ಪರಿಸ್ಥಿತಿ ಬಂದಿದೆ. ಇವತ್ತು ಇದನ್ನೆಲ್ಲಾ ನೋಡಿದರೆ ನಿಜವಾಗಿ ನಾವು ಒಂದು ಕತ್ತಲೆಯಲ್ಲಿದ್ದೇವೆ. ನಮ್ಮ ಕರ್ನಾಟಕದಲ್ಲಿ ನಡೆದಂಥ ಅತಿವೃಷ್ಟಿ ಬಹುಶಃ ಈ ಶತಮಾನದಲ್ಲೇ ನಡೆದಿರಲಿಲ್ಲ. ಮಾನ್ಯಪ್ರಧಾನ ಮಂತ್ರಿಯವರು ರಾತ್ರಿ ಬಂದರು ಹೋದರು. ಅವರಿಂದ ಯಾವುದೇ ರೀತಿಯ ಸಮೀಕ್ಷೆ ನಡೆಯಲಿಲ್ಲ. ಕೇಂದ್ರಸರ್ಕಾರದಿಂದ ನಮಗೆ ಸಹಾಯ ಏನು ಬರಬೇಕಾಗಿತ್ತು ಅದು ಯಾವುದೂ ಸಿಕ್ಕಲಿಲ್ಲ. ನನಗೆ ತಿಳಿದ ಮಟ್ಟಿಗೆ ನಮ್ಮ ಕರ್ನಾಟಕ ಒಂದರಲ್ಲೇ ಸುಮಾರು 307 ಕೋಟಿ ರೂ.ಗಳಷ್ಟು ನಷ್ಟ ಈ ಅತಿವೃಷ್ಟಿಯಿಂದ ಆಗಿದೆ. ಈ ದಿಸೆಯಲ್ಲಿ ಅತಿವೃಷ್ಟಿಯಿಂದ ನಷ್ಟಕ್ಕೊಳಗಾದ ರೈತರಿಗೆ ಸರ್ಕಾರ ಕೊಟ್ಟಿರತಕ್ಕ ನೆರವು ಏನೇನೂ ಸಾಲದು. ಇವತ್ತು

ಮಾನ್ಯ ಕಂದಾಯ ಮಂತ್ರಿಗಳು ಹೇಳುತ್ತಿದ್ದಾರೆ, ನಾವು ಕೇಂದ್ರಸರ್ಕಾರಕ್ಕೆ ಕೈ ಜೋಡಿಸುತ್ತಿದ್ದೇವೆ, ಅವರಿಗೆ ನಮ್ಮ ಯೋಜನೆಯನ್ನು ಕಳುಹಿಸುತ್ತಿದ್ದೇವೆ. ಅಲ್ಲಿಂದ ನಮಗೆ ಹಣ ಬರುತ್ತದೆಂದು ಹೇಳುತ್ತಿದ್ದಾರೆ; ಸ್ವಾಮಿ, ಅವರಿಂದ ಆ ಹಣ ಯಾವಾಗ ಬರುತ್ತದೆ? ಈ ಜನರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕದ್ದು ಯಾವಾಗ? ಅವರಿಗೆ ಪರಿಹಾರ ಧನವನ್ನು ಕೊಡತಕ್ಕದ್ದು ಯಾವಾಗ? ಆ ರಸ್ತೆಗಳ ರಿಪೇರಿ ಯಾವಾಗ ಆಗುತ್ತದೆ? ಇದು ನಿಜವಾಗಿಯೂ ಒಂದು ಶೋಚನೀಯ ಪರಿಸ್ಥಿತಿ. ಈ ಪರಿಸ್ಥಿತಿಯನ್ನು ಸರ್ಕಾರ ಬಹಳ ಗಂಭೀರವಾಗಿ ಅರ್ಥ ಮಾಡಿಕೊಂಡು ರೈತರ ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿಬಡ್ಡಿ ಎರಡನ್ನೂ ಕೂಡ ಮನ್ನಾ ಮಾಡತಕ್ಕ ಒಂದು ಕ್ರಾಂತಿಕಾರಕ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಶ್ರೀ ಕೆ.ಎಸ್. ಈಶ್ವರಪ್ಪ, ಶ್ರೀ ಉಮೇಶ್ ಕಟ್ಟಿ, ಶ್ರೀ ಎಂ.ಕೆ. ಪಟ್ಟಣಶೆಟ್ಟಿ, ಶ್ರೀ ಪಿ.ಸಿ.ಸಿದ್ದನಗೌಡರು, ಶ್ರೀ ಹಂಪನಗೌಡರು, ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ.

(ಮಾನ್ಯ ಸದಸ್ಯರು ಗೈರುಹಾಜರು)

† ಶ್ರೀ ಶಿವಾನಂದ ಎಚ್. ಕೌಜಲಗಿ:- ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರು ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಈ ಸಹಕಾರಿ ಸಂಘಗಳ ಮೇಲೆ ಆಗುತ್ತಿರುವ ಅನಾಹುತ ಹಾಗೂ ರೈತರಿಗೆ ಆಗುತ್ತಿರುವ ತೊಂದರೆ ಅನಾಹುತದ ಬಗ್ಗೆ ಈಗಾಗಲೇ ತಿಳಿಯಪಡಿಸಿದ್ದಾರೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಬಡ್ಡಿ ಹಾಗೂ ಸುಸ್ತಿ ಬಡ್ಡಿಯನ್ನು ಅವರು ಮನ್ನಾ ಮಾಡಿದ್ದರು. ಇದರಿಂದ್ಲ ಆ ಕಾಲಕ್ಕೆ ಅಪೆಕ್ಸ್ ಬ್ಯಾಂಕಿಗೆ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಬಡ್ಡಿ ಸೂಟಿ ಬಿಡುವುದರಿಂದ ಅಸಲು ಕೊಟ್ಟಿದ್ದರು. ಈಗಾಗಲೇ ನಮ್ಮ ನಾಯಕರು ಹೇಳಿದ ಪ್ರಕಾರ ಒಂದು 6 ತಿಂಗಳ ಟೈಮ್ ಅಥವಾ 8 ತಿಂಗಳ ಟೈಮ್ ಕೊಟ್ಟು ಅವರಿಗೆ ನಾವು ಆ ವೇಳೆಯೊಳಗಾಗಿ ಯಾರು ಅಸಲು ತುಂಬುತ್ತಾರೆ. ಅವರಿಗೆ ನಾವು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದರೆ, ಇದರಿಂದ ರೈತರಿಗೂ ಅನುಕೂಲವಾಗುತ್ತದೆ ಅಲ್ಲದೆ ಸರ್ಕಾರಕ್ಕೂ ಸಹಿತ ಸುಮಾರು ಐದುನೂರು ಕೋಟಿ ರೂಪಾಯಿಗಳು ಬರುತ್ತದೆ. ಇದರಿಂದ ನಮ್ಮ ಸರ್ಕಾರಕ್ಕೆ ಆರ್ಥಿಕ ಭಾರ ಸುಮಾರು 120 ಕೋಟಿ ರೂಪಾಯಿಯ ತನಕ ಬೀಳಬಹುದು. ಆ 120 ಕೋಟಿ ಸಾಲ ಮನ್ನ ಮಾಡುವುದರಿಂದ 500 ಕೋಟಿ ರೂಪಾಯಿ ನಮ್ಮ ಸರ್ಕಾರಕ್ಕೆ ಬರುತ್ತದೆ, ಇದಲ್ಲದೆ ಎಲ್ಲಾ ಬ್ಯಾಂಕ್‌ಗಳು ಎಲ್ಲಾ ಸೊಸೈಟಿಗಳು ವಯಬಲ್ ಆಗುತ್ತವೆ. ಇದು ಬಹಳ ಮಹತ್ವದ್ದು. ಇವತ್ತಿನ ದಿವಸ ನಾವು ವಿಚಾರ ಮಾಡಬಹುದು. ಇಂಥ 120 ಕೋಟಿ ರೂಪಾಯಿಗಳನ್ನು ಸರ್ಕಾರದವರು ಇದು ಯಾವ ಪ್ರಕಾರವಾಗಿ ತರಬಹುದು ಎನ್ನುವುದು ಬಹಳ ಮಹತ್ವದ್ದು. ಈ ಕಾಫಿ ಪ್ಲಾಂಟರ್ಸ್ ಏನು ಎನ್‌ಕ್ರೋಚ್‌ಮೆಂಟ್ ಮಾಡಿರುತ್ತಾರೆ. ಆ ಲ್ಯಾಂಡ್‌ನ್ನು ರೆಗ್ಯುಲರೈಸ್ ಮಾಡುವುದರಿಂದ ಸರ್ಕಾರಕ್ಕೆ ಸುಮಾರು ದೀಡ್ ನೂರು ಕೋಟಿ ರೂಪಾಯಿ ಬರುತ್ತದೆ. ಆ ದೀಡ್ ನೂರು ರೂಪಾಯಿ ಮಂಡಿಸಿದಂಥ ಆಯವ್ಯಯದ ಮೇಲೆ ಯಾವುದೇ ಅನಾನುಕೂಲತೆಯಾಗದೆ ಇವತ್ತಿನ ದಿವಸ ಆ ರೊಕ್ಕ ಕೊಡುವುದರಿಂದ;

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮ್ಮಲ್ಲೇ ಒಂದು ಸೆಲೆಕ್ಟ್ ಕಮಿಟಿಯನ್ನು ಮಾಡಿ ಆ ಕಮಿಟಿಯೊಳಗೆ ಇದನ್ನು ರೆಗ್ಯುಲರೈಸ್ ಮಾಡುವುದು ಬೇಡವೆಂದು ನೀವೇ ತೀರ್ಮಾನ ತೆಗೆದುಕೊಂಡಿದ್ದೀರಿ.

ಶ್ರೀ ಶಿವಾನಂದ ಎಚ್. ಕೌಜಲಗಿ:- ಈಗ ಮತ್ತೆ ಚೇಂಜ್ ಆಗಿದೆ. ಆದಕಾರಣ ತಾವು ಸರ್ಕಾರದ ಆರ್ಥಿಕ ಪರಿಸ್ಥಿತಿಯಲ್ಲಿ ಯಾವುದೇ ಒಂದು ಹೊರೆಯಾಗಬಾರದು. ಇಂಥದನ್ನು ನಾವು ವಿಚಾರ ಮಾಡಬೇಕು. ಇವತ್ತಿನ ದಿವಸ ಪಕ್ಷ ಭೇದ ಮರೆತು ಮತ್ತು ಯಾವುದಾದರೂ ಒಂದು

ಕಾರ್ಯಕ್ರಮವನ್ನು ಬಿಡಲಿಕ್ಕೂ ಸಹಿತ ನಾವು ಬಿಡಬಹುದು. ಈಗ ಅಕ್ಷಯಕ್ಕೆ 80 ಕೋಟಿ ರೂಪಾಯಿ ಇದೆ. ಅಂಥ ಒಂದು ಕಾರ್ಯಕ್ರಮವನ್ನು ಒಂದು ವರ್ಷ ಮುಂದಕ್ಕೆ ಹಾಕಿದರೂ ಸಹಿತ ಸರ್ಕಾರಕ್ಕೆ ಯಾವುದೇ ಒಂದು ಲುಕ್ಸಾನು ಆಗುವುದಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ನಾವು ಎಲ್ಲರೂ ವಿರೋಧಪಕ್ಷದ ನಾಯಕರು ತಮ್ಮನ್ನು ಒಳಗೊಂಡಂಥ ಒಂದು ಕಮಿಟಿಯನ್ನು ಮಾಡಿಕೊಂಡು ಚರ್ಚಿಸಿ, ತಮ್ಮ ಚೇಂಬರ್‌ನಲ್ಲಿ ಎಲ್ಲರನ್ನು ಕರೆದು ಯಾವ ಪ್ರಕಾರ ಪಕ್ಷಭೇದವನ್ನು ಮರೆತು ಚರ್ಚಿಸಿ, ರೈತರಿಗೆ ಯಾವ ಪ್ರಕಾರ ಮಾಡಿದರೆ ಅನುಕೂಲವಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಅನಂತರ ಸೊಸೈಟಿಗಳು ಸಹಿತ ಪುನರುಜ್ಜೀವನವಾಗಲು ಯಾವ ಪ್ರಕಾರ ಮಾಡಬೇಕೆನ್ನುವುದು ಬಹಳ ಮಹತ್ವದ್ದು ಇದೆ. ಆದ ಕಾರಣ ಇದರ ಬಗ್ಗೆ ಆದಷ್ಟು ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, ಈ ವರ್ಷ ಬರಗಾಲ ಬಿದ್ದಿರುವುದು ತಮಗೆ ಗೊತ್ತು, ಈಗಾಗಲೇ ಕಾಂಪೌಂಡ್ ಇಂಟರೆಸ್ಟ್ ಹಾಕಲಿಕ್ಕೆ ಹೊರಟಿದ್ದಾರೆ ಮತ್ತು ರೈತರ ಕಡೆಯಿಂದ ಸಾಲ ವಸೂಲಾತಿ ಬಹಳ ಜೋರಾಗಿ ನಡೆಯುತ್ತಿದೆ. ಅದರ ಸಲುವಾಗಿ ತಾವು ಅದನ್ನು ಸ್ಥಗಿತಗೊಳಿಸಬೇಕು. ಎರಡನೆಯದಾಗಿ ತಾವು ಒಂದು ಕಮಿಟಿ ಮಾಡಿ ತಮ್ಮ ಚೇಂಬರ್‌ನಲ್ಲಿ ಕರೆಯಬೇಕು. ಇದರ ಬಗ್ಗೆ ಪಕ್ಷಭೇದ ಮರೆತು ನಾವು ಚರ್ಚಿಸೋಣ. ಯಾರಿಗೆ ಯಾವ ಪ್ರಕಾರವಾಗಿ ಮಾಡಿದರೆ ಅನುಕೂಲವಾಗುತ್ತದೆಂದು ಕೇಳಿಕೊಂಡು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮನಸ್ಸು ಮಾಡಿದರೆ ಅದು ಆಗುತ್ತದೆಂದು ಕೇಳಿಕೊಂಡು ಸರ್ಕಾರದವರು ಇದರ ಬಗ್ಗೆ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೈ.ಕೆ.ರಾಮಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ರೈತರು ಪಡೆದಿರುವಂಥ ಸಾಲವನ್ನು ಮನ್ನಾ ಮಾಡಬೇಕೆಂಬ ಬೇಡಿಕೆಯನ್ನು ವಿರೋಧ ಪಕ್ಷದ ಮಾನ್ಯ ಸ್ನೇಹಿತರು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬಹುಶಃ ಆ ಕಡೆಯ ಸದಸ್ಯರಲ್ಲಿ ಒಬ್ಬಿಬ್ಬರು ಮಾತನಾಡಿದ್ದರೆ ಅವರು ಏನು ಪ್ರಸ್ತಾವನೆಯನ್ನು ವಿರೋಧ ಮಾಡುತ್ತಾರೆಯೇ ಅಥವಾ ಬೆಂಬಲಿಸುತ್ತಾರೆಯೇ ಎಂದು ಕ್ಲೂ ಸಿಕ್ಕಿದ್ದರೆ ಸರ್ಕಾರದ ಅಭಿಪ್ರಾಯ ಗೊತ್ತಾಗುತ್ತಿತ್ತು. ಇಲ್ಲಿ ಒಂದು ವಿಷಯ ಇದೆ. ನಿನ್ನೆ ವೈಪಿನ ಮೇಲೆ ಹಾಕಿದ ತೆರಿಗೆಯನ್ನು ತೆಗೆದುಹಾಕಿ ಎಂದು ಹೇಳಿದ್ದೇವೆ. ರೈತರಿಗೆ ಗೊಬ್ಬರದ ಮೇಲೆ ಹಾಕುವ ತೆರಿಗೆಯನ್ನು ತೆಗೆದುಹಾಕಿ ಎಂದು ಕೇಳುತ್ತೇವೆ. ಇವತ್ತು ಸಾಲ ಮನ್ನಾ ಮಾಡಿ ಎಂದು ಕೇಳುತ್ತೇವೆ. ಎಲ್ಲಾ ಮನ್ನಾ ಮಾಡಿಕೊಂಡು ಹೋದರೆ ಈ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಹಣ ಎಲ್ಲಿಂದ ಬರಬೇಕು ? ಮೊಬಲೈಜೇಷನ್ ರಿಸೋರ್ಸ್‌ಸ್‌ಗೆ, ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲವೆಂಬ ವಾದವನ್ನು ನಾವೇ ಮಾಡುತ್ತಿದ್ದೇವೆಂದು ಅವರು ವಾದ ಮಾಡುತ್ತಾರೆ. ನೀವು ಎಲ್ಲಾ ಹೀಗೆ ಕೇಳುತ್ತಿದ್ದರೆ ಬೊಕ್ಕಸಕ್ಕೆ ಹಣ ಎಲ್ಲಿಂದ ಬರಬೇಕು ? ನಾಳೆ ನಾನು ನೀರಾವರಿ ಮೇಲೆ ಮಾತನಾಡಿದಾಗ ನೀರಾವರಿಗೆ ದುಡ್ಡು ಕೊಟ್ಟಿಲ್ಲವೆಂದು ವಾದ ಮಾಡಿದರೆ, ಹೌದು, ನಿನ್ನೆ ನೀವೇ ಮಾತನಾಡಿದಿರಲ್ಲ, 150 ಕೋಟಿ ರೂಪಾಯಿ ಡಿಡಕ್ಷನ್ ಮಾಡಿಸಿದರಲ್ಲ ಎಂಬ ವಾದವನ್ನು ಅವರು ಮುಂದಿಡಬಹುದು. ಈ ರಾಷ್ಟ್ರದ ರೈತ ಯಾವ ಸರ್ಕಾರದ ಮುಂದೆಯೂ ಭಿಕ್ಷೆ ಬೇಡತಕ್ಕ ಅವಶ್ಯಕತೆ ಇಲ್ಲ. ನನ್ನ ಒಂದು ಚಿಂತನೆ ಅಥವಾ ಆಲೋಚನೆ ಏನಿದೆ ಎಂದರೆ ಈ ರಾಷ್ಟ್ರದ ರೈತನನ್ನು ಸಾಲ ಮಾಡುವಂಥ ಪರಿಸ್ಥಿತಿಗೆ ತಂದಂಥ ಆಡಳಿತ ವ್ಯವಸ್ಥೆಯನ್ನು ಸರಿ ಮಾಡಬೇಕು. ಸಾಲ ಮನ್ನಾ ಮಾಡುತ್ತೀರೋ ಬಿಡುತ್ತೀರೋ ನನಗೆ ಅದು ಪ್ರಾಮುಖ್ಯವಲ್ಲ, ಇವತ್ತು ರೈತನನ್ನು ಸಾಲಗಾರನನ್ನಾಗಿ ಮಾಡಿರುವಂಥ ಪರಿಸ್ಥಿತಿ ಸೃಷ್ಟಿ ಮಾಡಿದ್ದು ಯಾವುದು ? ಒಂದು ದಶಕದಲ್ಲಿ ಈ ರಾಜ್ಯದಲ್ಲಿ ಹೆಚ್ಚಾಗಿರುವಂಥ ನೀರಾವರಿ ಪ್ರತಿಶತ ಅಂಶ 80ನೇ ದಶಕದಲ್ಲಿ ಒಂದೇ ಪರ್ಸೆಂಟ್. ನಮಗೆ ಸಾಲ ಬೇಡಿ, ಮನ್ನಾ ಮಾಡಬೇಡಿ. ನಮ್ಮ ಎಲ್ಲಾ ವಿದ್ಯುತ್ ಪಂಪುಗಳಿಗೆ 12 ಗಂಟೆ ಕರೆಂಟ್ ಕೊಡಿ, ನಮಗೆ ಮನ್ನಾ ಬೇಡಿ. ನಮಗೆ ಗೊಬ್ಬರ ಕೊಡಿ, ಮನ್ನಾ ಬೇಡಿ. ನಮಗೆ ಸಾಲ ಪಡೆಯಲಿಕ್ಕೆ ಸೃಷ್ಟಿ

ಮಾಡಿದ್ದೀರಲ್ಲಾ ಪರಿಸ್ಥಿತಿ ಆ ಪರಿಸ್ಥಿತಿ ನಿವಾರಣೆ ಮಾಡಿ ಸಾಕು. ನಿನ್ನೆ ನನಗೆ ಒಂದು ಉತ್ತರ ಬಂದಿದೆ ಸರ್ಕಾರದಿಂದ, ಅದನ್ನು ನೋಡಿ ನಗಬೇಕೋ ಅಳಬೇಕೋ ಅರ್ಥವಾಗುತ್ತಿಲ್ಲ. ಈ ರಾಜ್ಯದಲ್ಲಿ ರೈತರಿಗೆ ಬೇಕಾದ ತೆಂಗಿನ ಸಸಿಗಳನ್ನು ದುಡ್ಡು ತೆಗೆದುಕೊಂಡು ಕೊಡುವ ಪ್ರಯತ್ನ ಮಾಡುತ್ತೀರಾ ? ಇದಕ್ಕೆ ಉತ್ತರ ಏನು ಬಂದಿದೆ ಎಂದರೆ ಸಂಪನ್ಮೂಲದ ಕೊರತೆ. ಈ ರಾಜ್ಯದಲ್ಲಿ ರೈತರ ಮನೆ ಮುಂದೆ ತೋಟದಲ್ಲಿ ನೆಟ್ಟುಕೊಳ್ಳುವುದಕ್ಕೆ ತೆಂಗಿನ ಗಿಡ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ? ಸಾಧ್ಯತೆ ಇದೆಯೇ ಎಂದರೆ ಇದಕ್ಕೆ ಸಂಪನ್ಮೂಲದ ಕೊರತೆ. ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ, ಒಂದು ಕಡೆ ರಾಜ್ಯದ ಬೊಕ್ಕಸಕ್ಕೆ ಬರುವಂಥ ಹಣದ ಹೊಳೆ ಏನು ಹರಿಯುತ್ತಿದೆ ಅದನ್ನು ತಡೆಯುವುದರಿಂದ ಅಭಿವೃದ್ಧಿ ಕೆಲಸಗಳಿಗೆ ನಮಗೆ ಬೇಕಾದ ಹಣಕ್ಕೆ ಕೊರತೆ ಬಂತು. ಆದುದರಿಂದ ಇವರು ಸಾಲ ಮನ್ನಾ ಮಾಡಿ ಎಂದು ಕೇಳುವಂಥ ಸಂದರ್ಭದಲ್ಲಿ ಬೇರೆ ಯಾವ ಕ್ಷೇತ್ರ ಇದೆಯೋ ಆ ಕ್ಷೇತ್ರದಲ್ಲಿ ಇದೇ ನೀತಿಯನ್ನು ಅನುಸರಿಸುತ್ತೀರಾ ? 150 ಕೋಟಿ ಏನಾಗುತ್ತದೆ, ವಿದ್ಯುಚ್ಛಕ್ತಿ ಮಂಡಲಿಯಿಂದ ಬರಬೇಕಾದ ಹಣ, ಕೈಗಾರಿಕೋದ್ಯಮಿಗಳಿಂದ ಬರಬೇಕಾದ ಹಣ, ಅಬ್ಕಾರಿ ಗುತ್ತಿಗೆದಾರರಿಂದ ಬರಬೇಕಾದ ಹಣ ಮತ್ತು ನಮ್ಮ ಬಿಳಿ ಆನೆಗಳು ಇವೆಯಲ್ಲ, ಸರ್ಕಾರಿ ಉದ್ಯಮದಲ್ಲಿ. ಅವತ್ತೇ ಹೇಳಿದೆ ದಯವಿಟ್ಟು ಬಿಳಿ ಆನೆಗಳನ್ನು ಸರ್ಕಾರಿ ಲಾಯದಿಂದ ಆಚೆಗೆ ಹಾಕಿ ಎಂದು. ಕೆ.ಎಸ್.ಆರ್.ಟಿ.ಸಿ.ಯಲ್ಲಿ 90 ಕೋಟಿ ಲಾಸ್ ಆಗುತ್ತಿದೆ. ಮೈಸೂರು ಸೋಪ್ ಫ್ಯಾಕ್ಟರಿಯಂಥ ಒಂದು ಸಣ್ಣ ಸಂಸ್ಥೆಯಲ್ಲಿ 90 ಕೋಟಿ ರೂಪಾಯಿ ಲಾಸ್ ಆಗಿದೆ. ಈ ವರ್ಷ 16 ಕೋಟಿ ರೂಪಾಯಿ ಆಗಿದೆ. ಇಂಡಸ್ಟ್ರಿಗಳಿಗೆ ವರ್ಷದಲ್ಲಿ ಎಷ್ಟು ಸಬ್ಸಿಡಿ ಕೊಡುತ್ತೀರಿ ? 9%, out of the total outlay what is the capacity? ಈ ರಾಜ್ಯದ ದೊಡ್ಡ ಮನುಷ್ಯರು ನಡೆಸುವಂಥ ಇಂಡಸ್ಟ್ರಿಗಳಿಗೆ ಕೈಗಾರಿಕೋದ್ಯಮಿಗಳಿಗೆ ರಾಷ್ಟ್ರದ ಒಂದು ವರ್ಷದ ಯೋಜನಾ ವೆಚ್ಚದಲ್ಲಿ 9 ಭಾಗ ಎಂದು ಸಬ್ಸಿಡಿ ಕೊಟ್ಟದ್ದಾದರೆ ಕೇವಲ 150 ಕೋಟಿ ರೂಪಾಯಿ ಎಷ್ಟಕ್ಕೆ ಬರುತ್ತದೆ ? I think it comes to negligible point.

ಆದುದರಿಂದ ಈ ರಾಜ್ಯದ ರೈತನಿಗೆ, ತಾವು ವಿದ್ಯುಚ್ಛಕ್ತಿ ಮತ್ತು ನೀರು ಕೊಡಿ. 10 ವರ್ಷದಲ್ಲಿ ಒಂದೇ ಒಂದು ಪರ್ಸೆಂಟ್ ನೀರಾವರಿಯನ್ನು ಜಾಸ್ತಿ ಮಾಡದೆ ಏನೊಂದು ರೈತರಿಗೆ ದ್ರೋಹ ಮಾಡಿದ್ದೀರೋ ಅದರ ಫಲವಾಗಿ ಅವನ ಆರ್ಥಿಕ ಸ್ಥಿತಿಯ ಶಕ್ತಿ ಕುಂದಿದೆ. ಆ ಶಕ್ತಿಯನ್ನು ಒದಗಿಸಿ. ಹಾಗಾದರೆ ಸಾಲ ಮನ್ನ ಮಾಡುವುದು ಬೇಡ. ಮಾನ್ಯ ಅಧ್ಯಕ್ಷರೇ ನನ್ನ ಪ್ರಾರ್ಥನೆ ಇಷ್ಟೇ. ಈಗ ಕೆಲವು ವಿಚಾರಗಳನ್ನು ಮಾನ್ಯ ಬೈರೇಗೌಡರು ಹೇಳಿದರು. ರೇಷ್ಮೆ ಬೆಲೆ ಹೋದ ವರ್ಷ 200 ರೂಪಾಯಿ ಇದ್ದದ್ದು ಈಗ 60 ರೂಪಾಯಿಗೆ ಬಂದಿದೆ. ಅದನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳಿ ಎಂದರೆ, ಈ ರಾಜ್ಯದ ರೇಷ್ಮೆ ಖಾತೆಯ ಸಚಿವರು ಇನ್ನೂ ಯುವಕರಿದ್ದಾರೆ. ಸ್ವಲ್ಪ ಉತ್ಸಾಹದಿಂದಿದ್ದಾರೆ. ಏನಾದರೂ ಮಾಡಬೇಕೆನ್ನುವ ಕಾತುರ ಇದೆ. ಅವರಿಗೆ ಆಗಲೇ ಮೊದಲ ಶಾಕ್ ಆಗಿದೆ. ಇಲ್ಲಿ ಚರ್ಚೆ ಆದ ಮೇಲೆ ಚಿಕ್ಕಪೇಟೆ, ಬಳೇಪೇಟೆಗೆ ಹೋಗಿ ಎರಡು ದಿನ ರೈಡ್ ಮಾಡಿಸಿದರು. ಚೈನಾ ಸಿಲ್ಕ್‌ನ್ನು ಹಿಡಿದು ಈ ದೇಶದ ರೈತರಿಗೆ ಒಳ್ಳೆಯದು ಮಾಡಬೇಕೆಂದು ಹೇಳಿ. ಆಮೇಲೂ 3 ದಿವಸಗಳು ಆದಮೇಲೆ ನಾನು ಯಾವುದೋ ಒಂದು ಸಭೆಯಲ್ಲಿ ಅವರನ್ನು ನೋಡುತ್ತಿದ್ದೆ. ಅವರ ಸುತ್ತ ರಾಜ್ಯದ ಸಿಲ್ಕ್ ಮರ್ಚೆಂಟ್ಸ್ ನಿಂತಿದ್ದರು. ಮಾರನೆಯ ದಿವಸ ನಾನು ಫೋನ್ ಮಾಡಿ ಕೇಳಿದರೆ, ಇಲ್ಲ ಸ್ವಾಮಿ ಈಗ ಎನ್‌ಫೋರ್ಸ್‌ಮೆಂಟನವರು ರೈಡ್ ಮಾಡುವುದು ನಿಲ್ಲಿಸಿದ್ದಾರೆ ಎಂದು ಹೇಳಿದರು. ಏಕೆ ಹೇಳುತ್ತಿದ್ದೇನೆ ಎಂದರೆ, ಈ ವ್ಯವಸ್ಥೆಯಲ್ಲಿ ಬಹುಶಃ ಎಲ್ಲಾ ಪಕ್ಷದಲ್ಲಿ ನಾವು ಉಳ್ಳವರ ಹಂಗಿಗೆ ಅವರ ಹಿಡಿತಕ್ಕೆ, ಮೇಲ್ಮಟ್ಟದಲ್ಲಿರುವ ಹಣವಂತರ ಒಂದು ಹಿಡಿತಕ್ಕೆ ಒಳಗಾಗಿದ್ದೇವೆ. ತೊಗರಿಬೇಳೆ ಬೆಳೆ ಬಗ್ಗೆ ಕಾಗದದ ಮೇಲೆ ಕೃಷಿ ಮಂತ್ರಿಗಳು ಎಲ್ಲಾ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದು ತಿಳಿಸಿದ್ದಾರೆ. ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಸ್ವಾಮಿ ? ಗುಲ್ಬರ್ಗಾದಲ್ಲಿ ಕೋಟ್ಯಾಂತರ

ರೂಪಾಯಿ ತೊಗರಿ ಬೆಳೆ ನಷ್ಟವಾಗಿದೆ. ಆದುದರಿಂದ ನನ್ನ ಪ್ರಾರ್ಥನೆ ಇಷ್ಟೇ. ರೈತರ ಸಾಲವನ್ನು ಮನ್ನಾ ಮಾಡಬೇಕೆ ಬಿಡಬೇಕೇ ಎನ್ನುವ ಪ್ರಶ್ನೆಯಲ್ಲಿ ಮತ್ತೊಂದು ಪ್ರಾಮುಖ್ಯತೆ ಇದೆ. ತಾವೂ ಇದರಲ್ಲಿ ಭಾಗಸ್ಥರು. 1989ರಲ್ಲಿ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಈ ರಾಜ್ಯದ ಜನತೆ ಮುಂದೆ ನಿಮ್ಮ ಪಕ್ಷ ಓಟು ಕೇಳುವುದಕ್ಕೆ ಹೋಗಿದ್ದಾಗ ಏನು ಆಶ್ವಾಸನೆ ಕೊಟ್ಟಿದ್ದೀರಿ ? ಸಾಲವನ್ನು ಮನ್ನಾ ಮಾಡುತ್ತೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದೀರಿ ... ನಿಮ್ಮ ಮ್ಯಾನಿಫೆಸ್ಟೋ ತೆಗೆದು ಓದಿ.

ಶ್ರೀ ಕಾಗೋಡು ತಿಮ್ಮಪ್ಪ:- ಹಾಗೆ ಹೇಳಿಲ್ಲ. ನೀವು ಮ್ಯಾನಿಫೆಸ್ಟೋ ಕೋಟ್ ಮಾಡಿ ಹೇಳಿ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ನನಗೆ ಗೊತ್ತಿರುವ ಮಾಹಿತಿ ಪ್ರಕಾರ, ಓದದೇ ಅಥವಾ ಯಾವುದೇ ಒಂದು ವಿಷಯ ತಿಳಿಯದೇ ಹೇಳಲು ನಾನು ಸಿದ್ಧನಿಲ್ಲ. ನೀವು ಇಲ್ಲ ಎಂದು ಹೇಳಿ, ನಾನು ಬೇಕಾದರೆ ತಪ್ಪಿದ್ದರೆ ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದೇ ವಿಷಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಇದೇ ಸದನದಲ್ಲಿ ಚರ್ಚೆ ಆಯಿತು. ತಾವು ಅದನ್ನು ಹೇಳಿದ್ದೀರಿ ಎಂದು ಹೇಳಿದಾಗ, ಅವರು ಏನು ಹೇಳಿದರೋ ರೈತರ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತರುವುದಕ್ಕೆ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡುತ್ತೇವೆಂದು ಹೇಳಿದ್ದೇವೆಯೇ ಹೊರತು ನಾವು ಮಾಡುತ್ತೇವೆಂದು ಹೇಳಿಲ್ಲ ಎನ್ನುವ ಮಾತನ್ನು ಈ ಸದನದಲ್ಲಿ ಬೇಕಾದಷ್ಟು ಸಾರಿ ಹೇಳಿದರು. ನಾವು ಮ್ಯಾನಿಫೆಸ್ಟೋ ತಂದಿಲ್ಲ. ತಂದಿದ್ದರೆ ನಿಮಗೆ ತೋರಿಸುತ್ತೇನೆ. ಕೇಂದ್ರ ಸರ್ಕಾರಕ್ಕೆ ಸಾಲ ಮನ್ನಾ ಬಗ್ಗೆ ಒತ್ತಾಯ ಮಾಡುತ್ತೇವೆನ್ನುವ ಶಬ್ದ ಅಲ್ಲಿದ್ದು, ಸಾಲಮನ್ನಾ ಯೋಜನೆಗೆ ನೀವು ಬದ್ಧರಾಗಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ:- ಅದರ ಅರ್ಥ ಏನು ಹೇಳಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಕೇಂದ್ರದಲ್ಲಿ ನೀವು ಅಧಿಕಾರಕ್ಕೆ ಬರುವುದಿಲ್ಲ ಎನ್ನುವುದು ಗೊತ್ತಿತ್ತು. ಅದಕ್ಕೇ ಕೇಂದ್ರದಲ್ಲಿ ಒತ್ತಾಯ ತರುತ್ತೇವೆಂದು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ:- ಆಗ ಸದನದಲ್ಲಿ ಚರ್ಚೆ ಆದಾಗ ನಾನು ಮ್ಯಾನಿಫೆಸ್ಟೋ ಓದಿ ಹೇಳಿದ್ದೇನೆ. ತಾವು ಮಿಸ್ ಇಂಟರ್‌ಪ್ರಿಟ್ ಮಾಡಬೇಡಿ.

ಶ್ರೀ ವೈ.ಕೆ. ರಾಮಯ್ಯ:- ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಏನು ಹೇಳುತ್ತಾರೋ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದು ಪೊಸಿಷನ್‌ಗೆ ನಾನು ಸ್ಟಿಕಾನ್ ಆಗುತ್ತೇನೆ. With the assistance of the Central Government I will stick on to that position. I will come to that. ಸೆಂಟ್ರಲ್ ಗೌರ್ನಮೆಂಟ್ ಯಾರು ಸ್ವಾಮಿ ? ನಮ್ಮ ಪಕ್ಷದ್ದು ಇದೆಯೇ ? ಯಡಿಯೂರಪ್ಪನವರದ್ದು ಇದೆಯೇ ? ಯಾರನ್ನು ಅವರು ಕಾಲು ಕಟ್ಟಿಕೊಂಡು ತರುತ್ತಾರೋ, ಯಾರನ್ನು ಮನವೊಲಿಸಿ ಅವರು ಸಹಾಯ ಧನವನ್ನು ತರುತ್ತಾರೋ, ಎಲ್ಲಿಂದ ಕದ್ದು ಕೊಂಡು ಬರುತ್ತಾರೋ ಅದು ನನ್ನ ಪ್ರಶ್ನೆ ಅಲ್ಲ. ಆದರೆ ಈ ರಾಜ್ಯದ ಜನತೆಗೆ ನೀವು ವಾಗ್ದಾನ ಕೊಟ್ಟಿದ್ದೀರಿ.

ನೀವು ಆ ವಾಗ್ದಾನವನ್ನು ಹೇಗೆ ಪರಿಪಾಲನೆ ಮಾಡುತ್ತೀರಿ ಎನ್ನುವ ಪ್ರಶ್ನೆಯಲ್ಲ I am not talking about the means. I am talking about the aim. You have assured the people of Karnataka that you are going to waive. Of course, after the consultation and after receiving the assistance from the Government of India. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ತಾವು ಏನು ಹೇಳುತ್ತೀರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನೀವು ಅದನ್ನು ಮಾಡತಕ್ಕಂತಹ ವಾಗ್ದಾನವನ್ನು ಕೊಟ್ಟು ಈ ರಾಜ್ಯದ ನಾಲ್ಕು ಕೋಟಿ ಜನತೆಗೆ ಈ

ತರಹ ದ್ರೋಹ ಬಗೆದಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ:- ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ನಿರ್ದಿಷ್ಟವಾಗಿ ಎಲ್ಲಿ ಹೇಳಿದ್ದೇವೆ. ಅದನ್ನು ತೋರಿಸಿ. ನಾನು ಈ ಸದನದಲ್ಲಿ ಅವೊತ್ತು ಓದಿ ಹೇಳಿದ್ದೇನೆ. ತಪ್ಪು ವ್ಯಾಖ್ಯಾನ ಮಾಡುವುದು ಬೇಡ. ಆ ರೀತಿ ಹೇಳಿಲ್ಲ, ಆ ಮಾತು ಬಂದಿಲ್ಲ. ಸಾಲ ಮನ್ನಾ ಮಾಡಬೇಡಿ, ಬಡ್ಡಿ ಮತ್ತು ಸುಸ್ತಿ ಬಡ್ಡಿಯಿಂದ ಕಗ್ಗಂಟಾಗಿರತಕ್ಕ ಈ ಸಾಲದ ವಿಚಾರದಲ್ಲಿ ಪರಿಶೀಲನೆ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಅವರ ಸರ್ಕಾರದವರು ಒದಗಿಸಿರುವ ಕಳೆದ ವರ್ಷದ ಆರ್ಥಿಕ ಸಮೀಕ್ಷೆಯನ್ನು ಓದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನಗೆ ಒಂದು ಸೆಕೆಂಡ್ ಟೈಮ್ ಕೊಟ್ಟರೆ ನಾನು ತೆಗೆದು ಹೇಳುತ್ತೇನೆ. ಈ ಆರ್ಥಿಕ ಸಮೀಕ್ಷೆಯಲ್ಲಿ ನಾನು ಹೇಳುವುದನ್ನು ದಯಮಾಡಿ ಕೇಳಿ ಆತುರಪಡಬೇಡಿ. ಮಾಡಿರುವುದು ಅಷ್ಟೇ ಅಲ್ಲ. A scheme was prepared and it is being implemented. ಸುಮ್ಮನೆ ಏಕೆ ಹೇಳುತ್ತೀರಿ ? ಡೇಟ್ ಎಲ್ಲ ಈ ಸಮೀಕ್ಷೆಯೊಳಗೆ ಇದೆ. 1990ನೇ ಇಸವಿಯಲ್ಲಿ ಒಂದು ಲೋನ್ ವೇವರ್ಸ್ ಯೋಜನೆ ತಯಾರಾಗಿದೆ, ಅದಕ್ಕೆ ನಾನು ಹೇಳುತ್ತಿರುವುದು. ಅವರ ಪೋಸಿಷನ್‌ಗೆ ನಾನು ಸ್ಪೀಕಾನ್ ಆಗುತ್ತೇನೆ. ನಾಳೆ ದಿವಸ ಕೇಂದ್ರ ಸರ್ಕಾರದಿಂದ ತರುತ್ತೀರೋ ನಬಾರ್ಡ್‌ನಿಂದ ತರುತ್ತೀರೋ ಆ ಪ್ರಶ್ನೆಯಲ್ಲ. ಆದರೆ ರಾಜ್ಯದ ಜನತೆಯ ಮುಂದೆ ನಿಮ್ಮ ಸಾಲವನ್ನು ಮನ್ನಾ ಮಾಡುತ್ತೇವೆಂದು ನೀವು ವಾಗ್ದಾನ ಕೊಟ್ಟಿದ್ದೀರಿ. ದಯಮಾಡಿ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿರುವ ವಾಗ್ದಾನವನ್ನು ಈ ರಾಜ್ಯದ ಜನತೆಗೆ ತೀರಿಸುವಂತಹ ಪ್ರಯತ್ನವನ್ನು ಮಾಡಿ. ನೀವು ಮಾಡಲಿಲ್ಲವೆಂದರೆ ನಾವು ಯಾರೂ ಒತ್ತಾಯ ಮಾಡುವುದಿಲ್ಲ. I know the values of Manifes'tos. ಅವರ ಪಕ್ಷ ತಯಾರು ಮಾಡಿದ್ದುದು ನನಗೆ ಗೊತ್ತಿದೆ. ಅದನ್ನು ನಾವು ಮಾಡಲಿಲ್ಲವೆಂದರೆ ನಾವೇನು ಭಾವಿಸಿಕೊಳ್ಳಬೇಕು ? ಕಾಂಗ್ರೆಸ್ ಪಕ್ಷದ ಸರ್ಕಾರ ಚುನಾವಣೆಯ ಸಂದರ್ಭದಲ್ಲಿ ಕೊಟ್ಟಿರತಕ್ಕ ವಾಗ್ದಾನಕ್ಕೆ ತಪ್ಪಿದೆಯೆಂದು ಭಾವಿಸಿಕೊಳ್ಳಬೇಕೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಶಿಫಾರಸು ಮಾಡುವುದು ಬೇರೆ, ನಾವು ಮಾಡುತ್ತೇವೆಂದು ಹೇಳುವುದು ಬೇರೆ. ತಮಗೆ ಎರಡೂ ಗೊತ್ತಿದೆ. ಒಳ್ಳೆಯ ವಕೀಲರಿದ್ದು ಇಂಟರ್‌ಪ್ರಿಟೇಷನ್ ಏಕೆ ? ನಿಮ್ಮ ಮೇಲೆ ನಂಬಿಕೆ ಹೋಗುತ್ತದೆ ಯಾರೂ ಕೇಸು ಕೊಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವು ಹೇಳಿದ್ದುದು ಕನ್ವಿನ್ಸ್ ಆಗಿದೆ. ರೈತನ ಪರಿಸ್ಥಿತಿ ನೋಡಿ, ಕೇಂದ್ರ ಸರ್ಕಾರಕ್ಕೆ ರೈತನ ಸಾಲ ಮನ್ನಾ ಮಾಡುವ ಅಗತ್ಯವಿದೆ ನಾವು ಒತ್ತಾಯ ತರುತ್ತೇವೆಂದು ತಾವು ಒಪ್ಪಿಕೊಂಡಿದ್ದೀರಿ. ಸಾಲ ಮನ್ನಾ ಮಾಡುವ ಅಗತ್ಯವಿದೆ. ಈಗ ಕೇಂದ್ರದಲ್ಲಿ ನಿಮ್ಮದೇ ಸರ್ಕಾರವಿದೆ, ರಾಜ್ಯ ಸರ್ಕಾರ ಕೂಡ ನಿಮ್ಮದೇ ಇದೆ.

ಶ್ರೀ ವೈ.ಕೆ. ರಾಮಯ್ಯ:- ನನ್ನ ಮಾತು ಮುಗಿಸುತ್ತೇನೆ. ನನ್ನ ಒಟ್ಟಾರೆ ಸಾರಾಂಶ ಇಷ್ಟೆ. ಈ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಯಾವುದೇ ಒಂದು ಸರ್ಕಾರ ಇರಲಿ, ರೈತನನ್ನು ಸಾಲ ಮಾಡಿಸುವಂತಹ ಪರಿಸ್ಥಿತಿಗೆ ತರುವಂತಹದ್ದು ಬಹಳ ಕೆಟ್ಟದ್ದು. ಅವನಿಗೆ ಬೇಕಾದಷ್ಟು ಗೊಬ್ಬರ, ಅವಶ್ಯಕತೆ ಇರುವಷ್ಟು ನೀರಾವರಿ ಅವನಿಗೆ ಬೇಕಾದ ತಾಂತ್ರಿಕ ಸಹಕಾರ ಇಷ್ಟನ್ನು ಕೊಟ್ಟು ರೈತ ಸಾಲ ಮಾಡುವುದಕ್ಕೆ ಹೋಗಬಾರದು ಇಂತಹ ಕಾರ್ಯಕ್ರಮಗಳನ್ನು ಮಾಡಿಕೊಡುವುದರಲ್ಲಿ. ನಾವು ವಿಫಲರಾಗಿರುವುದರಿಂದ ರೈತ ಕಷ್ಟದಲ್ಲಿ ಸಿಕ್ಕಿದ್ದಾನೆ. ರೈತನು ಮಾಡಿರುವ ಸಾಲವನ್ನು ಮನ್ನಾ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ನಿರೂಪಿಸಿಲ್ಲ. ಇದರಲ್ಲಿ ಆವೊಂದು ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ರೈತ ಕೃಷಿ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳುವಾಗ 7 ಪರ್ಸೆಂಟ್ ಬಡ್ಡಿ ಕೊಡುತ್ತೇನೆಂದು

ತೆಗೆದುಕೊಂಡಿರುತ್ತಾನೆ. ನೀವು ಅದಕ್ಕಿಂತ ಜಾಸ್ತಿ ಕೇಳಿದರೆ It is in contravention of the agreement that we have entered into between the Bank and the Loanee. ನಾನು ಹಠ ಮಾಡುತ್ತಿದ್ದೇನೆ. ಆದರೆ ನೀವು 7ಪರ್ಸೆಂಟ್‌ಗೆ ಸಾಲ ಕೊಟ್ಟಿದ್ದೀರಿ ಇವತ್ತು 12ಪರ್ಸೆಂಟ್ ಬಡ್ಡಿ ಕೇಳಿದರೆ ಕೊಡುವುದಿಲ್ಲ I will go to Court saying I have signed for only 7 percent. ನೀವು ಏನಾದರೂ ಮಾಡಿ ಮೊದಲು ಏನು ಫಿಕ್ಸ್ ಮಾಡಿದ್ದೀರಿ ಅದನ್ನು ಕೊಡುತ್ತೇನೆ. ಇದರಲ್ಲಿ ಕಾನೂನಿನ ಪ್ರಶ್ನೆ ಇದೆ. ನಮಗೆ ಸಾಲ ಕೊಡುವಾಗ 7 ಪರ್ಸೆಂಟ್‌ಗೆ ಒಪ್ಪಂದಕ್ಕೆ ಸಹಿ ಹಾಕಿಸಿಕೊಂಡು ಇವತ್ತು 12ಪರ್ಸೆಂಟ್ ಕೇಳುವ ಪರಿಸ್ಥಿತಿ ಇದೆ. ಅದು ಕಾನೂನಿಗೆ ವಿರೋಧವಾಗಿದೆ. ಒಪ್ಪಂದವನ್ನು ಮುರಿಯುವುದಿಲ್ಲವೆ ? ಇದು ರೈತನಿಗೆ ತೊಂದರೆ ಕೊಡುವುದಾಗಿದೆ.

ಇದು ನಮ್ಮ ಸಹಕಾರ ಸಚಿವರಿಗೆ ಬರುತ್ತದೆ ಎಂದು ಕಾಣುತ್ತದೆ. ದಯ ಮಾಡಿ ತಾವು ಏಳು ಪರ್ಸೆಂಟೇಜ್ ಆಫ್ ಇಂಟರೆಸ್ಟ್ ಏನಿದೆಯೋ, ನಾವು ಏನು ಒಪ್ಪಿಕೊಂಡಿದ್ದೇವೋ ಅದಕ್ಕೆ ಸೀಮಿತಗೊಳಿಸಬೇಕು ಅಂತ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ಯಾರಿಗೋಸ್ಕರವೋ ಕೇಳುತ್ತಿದ್ದೇವೆ ಎನ್ನುವ ಭಾವನೆಯಿಂದ ನಾವು ಇಲ್ಲಿ ಮಾತನಾಡುವುದಿಲ್ಲ. ಇದರಲ್ಲಿ ನಾವು ಕೂಡ ಎಲ್ಲಾ ಫಲಾನುಭವಿಗಳೇ. ನಾನು ಒಂದೇ ಒಂದು ಮಾತನ್ನು ಹೇಳುತ್ತೇನೆ, ಇದು ಇವರ ಮ್ಯಾನಿಫೆಸ್ಟೋನಲ್ಲಿ ಇತ್ತೋ ಇಲ್ಲವೋ ಗೊತ್ತಿಲ್ಲ. ತಿಬ್ಬನಹಳ್ಳಿ ಕ್ರಾಸ್‌ನಲ್ಲಿ ಸನ್ಮಾನ್ಯ ಬಂಗಾರಪ್ಪನವರು ನನ್ನನ್ನು ಕೂಡ ಕೂಡಿಸಿಕೊಂಡು ಭಾಷಣ ಮಾಡಿಕೊಂಡು ಬಂದರು. ನಾನಿರುವವರೆಗೆ ಯಾರೂ ಹತ್ತು ಸಾವಿರ ರೂಪಾಯಿಗಳ ಸಾಲ ಕಟ್ಟಬೇಡಿ ಎಂದು ಅವರು ಹೇಳಿದರು. ಅದೇ ವೇದಿಕೆಯಲ್ಲಿ ನನ್ನನ್ನೂ ಕೂಡಿಸಿಕೊಂಡು ಈ ಮಾತನ್ನು ಹೇಳಿದರು. ಅವತ್ತಿನಿಂದ ಇವತ್ತಿನವರೆಗೂ ಇಡೀ ತಿಪಟೂರು ಸಬ್‌ಡಿವಿಶನ್ನಿನಲ್ಲಿ ಒಂದು ರೂಪಾಯಿ ಸಾಲವನ್ನಾದರೂ ಡಿ.ಸಿ.ಸಿ. ಬ್ಯಾಂಕ್‌ನವರು ವಸೂಲು ಮಾಡುವುದಕ್ಕೆ ಆಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಹಾಗೆ ಹೇಳಿದರೆ, ನಾವೇನು ಮಾಡಬೇಕು ? ಅದನ್ನು ನೀವು ಮ್ಯಾನಿಫೆಸ್ಟೋ ಅಂತೀರೋ, ಮಾತು ಅಂತೀರೋ ಪ್ರಮಾಣ ಅಂತೀರೋ, ಆಶೆ ಅಂತೀರೋ ಎಂದು ಆಮೇಲೆ ತಿಮ್ಮಪ್ಪನವರು ಇದಕ್ಕೆ ನನಗೆ ಉತ್ತರ ಹೇಳಬೇಕು. ನಮಗೆ ಈ ಸ್ಥಿತಿ ಏಕೆ ಬಂದಿದೆ ? ಇದಕ್ಕೆ ಬೇಕಾದಷ್ಟು ಕಾರಣಗಳು ಇವೆ. ಮೊದಲನೆಯದಾಗಿ ಪ್ರಕೃತಿ ನಮ್ಮ ಮೇಲೆ ಆಗ್ರಹ ಮಾಡುತ್ತದೆ. ವ್ಯವಸ್ಥೆಗಳು ನಮ್ಮನ್ನು ತಂದು ಈ ಸ್ಥಿತಿಗೆ ನಿಲ್ಲಿಸಿವೆ. ಇನ್ನು ಮಾರ್ಕೆಟ್‌ನಲ್ಲಿ ನಾವು ಏನಾಗಿದ್ದೇವೆ ಎನ್ನುವುದು ತಮಗೆ ಗೊತ್ತಿದೆ. ಪ್ರಕೃತಿ ನಮಗೆ ಯಾವತ್ತು ಸಮಯಕ್ಕೆ ಸರಿಯಾಗಿ ಸಹಾಯ ಮಾಡಲಿಲ್ಲ ತೊಗರಿ ಗಿಡಕ್ಕೆ ಮಳೆ ಬಂದರೂ ರೋಗ ಬರುತ್ತದೆ, ಮಳೆ ಬರದಿದ್ದರೂ ರೋಗ ಬಂದು ಉದುರಿ ಹೋಗುತ್ತದೆ. ರಾಗಿ ಬೆಳೆಯುವ ಭಾಗದಿಂದ ಬರುವವನು ನಾನು ಒಂದು ಎಕರೆಯಲ್ಲಿ ಮೂರು ಅಥವಾ ನಾಲ್ಕು ಚೀಲ ರಾಗಿ ಬೆಳೆದರೆ ಹೆಚ್ಚು. ಮಾನ್ಯ ಖರ್ಗೆಯವರು ಇದನ್ನು ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಒಂದು ಪಲ್ಲ ರಾಗಿ ಮಾರಿದರೆ ಒಂದು ಜೊತೆ ಬಾಟಾ ಚಪ್ಪಲಿಯನ್ನು ನಾವು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಭಾಷಣ ಬೇಕಾದಷ್ಟು ಮಾಡುತ್ತೇವೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಕೂಲಿಗಾರರು ಸಿಗುವುದಿಲ್ಲ. 25-30 ರೂಪಾಯಿ ದಿನಕ್ಕೆ ನಾವು ಕೂಲಿ ಕೊಡಬೇಕು. ಕೊಯಲು ಬಂದಾಗ 40 ರೂಪಾಯಿ ಕೊಡಬೇಕು. ಯಾರನ್ನು ಸಾಕುವುದಕ್ಕೋಸ್ಕರ ಇವತ್ತು ನಾವು ಸಾಲಗಾರರಾಗಿದ್ದೇವೆ ? ನೀವು ಹೇಳುತ್ತಾ ಬಂದಿರಿ. ನಮ್ಮ ಸಾಲ ಮನ್ನಾ ಮಾಡಿ, ಬಡ್ಡಿ ಇಳಿಸಿ ಎಂದು ನಾವು ಯಾರೂ ಅರ್ಜಿ ಕೊಡಲಿಲ್ಲ ರಾಜಕೀಯಕೋಸ್ಕರ ಎಲ್ಲರೂ ಹೇಳಿಕೊಂಡು ಬಂದರು. ಒಂದು ಸ್ಪಷ್ಟವಾದ ಕನ್‌ಫ್ಯೂಶನ್ ಸೃಷ್ಟಿ ಮಾಡಿ ಇಟ್ಟಿದ್ದೇವೆ. ಯಾರು ಆಯೋಗ್ಯರಾಗುತ್ತೀರಿ, ಯಾರು ಕಟ್ಟಿಲ್ಲ, ಯಾರು ತಪ್ಪಿಸಿಕೊಂಡು ಓಡಾಡುತ್ತೀರಿ, ನಾಳೆ ಏನಾದರೂ ಈ ಸ್ಕೀಮ್ ಕೆಳಗೆ ಬದುಕಿಕೊಳ್ಳುತ್ತೀರಿ. ಕಟ್ಟಿ ಯಾಕೆ

ಕೆಟ್ಟವನಾಗಬೇಕು ಅಂತ ಹೇಳಿ ಮಾಡಿಕೊಂಡು ಹೋಗಿದ್ದೇವೆ. ಇದರ ಜೊತೆಗೆ ತಮಗೆ ಒಂದು ಮಾತನ್ನು ಹೇಳುತ್ತೇನೆ. ತಮ್ಮ ಸಹಕಾರ ಸಂಘಗಳು ಏನಾಗಿದೆ ಮಾನ್ಯ ಖರ್ಗೆಯವರೆ ? ಸೆಕ್ರೆಟರಿಗಳು ಕೂಡ ದುರುಪಯೋಗ ಮಾಡಿದ್ದಾರೆ. ನನ್ನ ಒಂದೇ ಒಂದು ಕ್ಷೇತ್ರದಲ್ಲಿ, ಬೀರಸಂದ್ರ ಎನ್ನುವ ಸೊಸೈಟಿಯಲ್ಲಿ 12 ಲಕ್ಷ ರೂಪಾಯಿಗಳ ಸಾಲವನ್ನು ರೈತರಿಗೆ ಗೊತ್ತಿಲ್ಲದೆ, ನಿಮ್ಮ ಸೆಕ್ರಟರಿ ತೆಗೆದುಕೊಂಡಿದ್ದಾರೆ. ದುಡ್ಡು ಕಟ್ಟಿರುವವರಿಗೆ ಯಾರಿಗೂ ರಸೀತಿ ಕೊಟ್ಟಿಲ್ಲ. ಯಾಕೆಂದರೆ ಮನ್ನಾ ಬಂದಾಗ ನಾನು ಈ ಬಡ್ಡಿಯನ್ನು ಉಳಿಸಿಕೊಂಡು ಬಿಡೋಣ ಎಂದು ನಿನ್ನ ಸಾಲ ತೀರುವಳಿ ಆಯಿತು ಅಂತ ಸರ್ಟಿಫಿಕೇಟ್ ಕೊಡುತ್ತಾನೆ; ರಸೀತಿ ಕೊಡುವುದಿಲ್ಲ. ಅದನ್ನೆಲ್ಲ ತಾವು ಒಂದು ಹಂತಕ್ಕೆ ತೆಗೆದುಕೊಂಡು ಹೋಗಿ ನಿಲ್ಲಿಸಬೇಕು. ನಾನು ಅವರಿಗೆ ಒಂದು ಪ್ರಶ್ನೆಯನ್ನು ನಿನ್ನೆ ಹಾಕಿದ್ದೆ ಸ್ವಾಮಿ. ಅದಕ್ಕೆ ಲಿಖಿತ ಮೂಲಕ ಉತ್ತರ ಬಂದಿದೆ. ನೀವು ಮಾರ್ಚ್‌ವರೆಗೆ ರೈತರು ಸಾಲ ಕಟ್ಟಿದರೆ ಇನ್ಸೆಂಟೀವ್ ಕೊಡುತ್ತೇವೆ. ಎಂದಾಗ, ನನ್ನ ಕ್ಷೇತ್ರದಲ್ಲಿ ಜನವರಿ ತಿಂಗಳಲ್ಲಿ ದಾವಾ ಹಾಕಿದ್ದಾರೆ ಸ್ವಾಮಿ. ವಸೂಲಿಯನ್ನು ತೀವ್ರ ಮಾಡುವುದಕ್ಕೆ ನಾವು ದಾವಾ ಹಾಕಿದ್ದುದು ಎಂದು ಅಧಿಕಾರಿಗಳು ಕೊಟ್ಟ ಉತ್ತರವನ್ನು ನಾನು ತೆಗೆದುಕೊಂಡಿದ್ದೇನೆ. ಕ್ಷಮಿಸಬೇಕು, ದಾವಾ ಹಾಕಿದರೆ ಅದರ ಮೇಲೆ ಎರಡು ಪರ್ಸೆಂಟ್ ಬಡ್ಡಿ ಜಾಸ್ತಿಯಾಗುತ್ತದೆ. ನೀವು ಏನು ಮನ್ನಾ ಮಾಡುವುದಕ್ಕೆ, ಐದು ಪರ್ಸೆಂಟ್ ಕೊಡುವುದಕ್ಕೆ ಹೊರಟಿದ್ದೀರಿ, ಅಷ್ಟೂ ಅಲ್ಲಿ ಹೋಗುತ್ತದೆ. ನಾನು ಬೇಡಿಕೊಂಡೆ, ನಿಮ್ಮ ಡಿ.ಸಿ.ಸಿ. ಬ್ಯಾಂಕ್‌ನವರನ್ನು, ಡೆಪ್ಯುಟಿ ರಿಜಿಸ್ಟ್ರಾರ್‌ನ್ನು, ಇದನ್ನು ಹಿಂದಕ್ಕೆ ತೆಗೆದುಕೊಳ್ಳಿ ನಾನು ಜೊತೆಯಲ್ಲಿ ಬರ್ತೀನಿ ಕಟ್ಟಿಸ್ತೀನಿ, ಐದು ಪರ್ಸೆಂಟ್ ಕೊಡುವುದಕ್ಕೆ ಬದಲು, ನೀವೇ ಬಂದು ದಾವಾ ಹಾಕಿದ್ದೀರ ನೀವೇ ತಿಂದು ಹಾಕ್ತೀರಿ, ಜನವರಿಯಲ್ಲೇ ದಾವಾ ಹಾಕುತ್ತೀರಿ ಅಂತ ಹೇಳಿದೆ. ಇವರು ಅರ್ಬಿಟ್ರೇಟರ್ಸ್ ಎಂದು ಐದಾರು ಜನ ಲಾಯರ್‌ಗಳನ್ನು ಅಪಾಯಿಂಟ್ ಮಾಡಿಕೊಂಡು ಬಿಟ್ಟರು. ಕುಳಿತುಕೊಂಡು ಲೆಡ್ಜರ್ ತೆಗೆದುಕೊಂಡು ದಾವಾ ಹಾಕಿದರು. ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳನ್ನು ಇಲ್ಲಿ ಶೀಲ್ಡ್ ಮಾಡುತ್ತಾರೆ. ಇಂತಹ ಅಯೋಗ್ಯರಿದ್ದಾರೆ. ಈ ಅಸಿಸ್ಟೆಂಟ್ ರಿಜಿಸ್ಟ್ರಾರ್ಸ್, ನಾವು ಅಸಿಸ್ಟ್ ಮಾಡುತ್ತೇವೆ ಎಂದು ಹೇಳಿದರೂ ಬಳಕೆ ಮಾಡಿಕೊಳ್ಳಲಿಲ್ಲ. ಒಳ್ಳೆಯ ಸೊಸೈಟಿಗಳನ್ನು ನಿರ್ನಾಮ ಮಾಡಿದ್ದಾರೆ. ಡಿಫಾಲ್ಟ್ ಮಾಡಿದ್ದಾರೆ ಎಂದು ಹೇಳಿದರೆ ಕೇಳಲಿಲ್ಲ. ಇನ್ನು ನಾವು ಏನು ಮಾತನಾಡಬೇಕು ಸ್ವಾಮಿ ? ರೇಷ್ಮೆ ಬೆಳೆ ಕೆ.ಜಿ.ಗೆ ಎಪ್ಪತ್ತು ರೂಪಾಯಿಯೂ ಸಿಗಲಿಲ್ಲ. ನೀವು ಎಡಿಬಲ್ ಆಯಿಲ್ ಇಂಪೋರ್ಟ್ ಮಾಡಬೇಕಾದರೆ ಯಾರನ್ನೂ ಕೇಳುವುದಿಲ್ಲ. ನೀವು ಮಿಲ್ಕ್ ಪೌಡರ್ ಇಂಪೋರ್ಟ್ ಮಾಡಬೇಕಾದರೆ ಯಾರನ್ನೂ ಕೇಳುವುದಿಲ್ಲ. ನೀವು ವನಸ್ಪತಿಯನ್ನು ಹೊರಗಡೆಯಿಂದ ತರಬೇಕಾದರೆ ಯಾರನ್ನೂ ಕೇಳುವುದಿಲ್ಲ. ಇವತ್ತು ಗೌರವ ಕೊಟ್ಟು ಹೇಳುತ್ತಿದ್ದೀನಿ. ರೈತರು ಅಂತ ಒಬ್ಬರು ಇದ್ದರೆ ಶರದ್‌ಪವಾರ್ ಇದ್ದಾರೆ. ತಮಗೆ ಗೊತ್ತಾ, ಕಳಕಳಿ ಇದೆಯಾ ? ಈರುಳ್ಳಿ ಬೆಲೆ ನೆಗೆದು ಬಿದ್ದು ಹೋಗಿದೆ. ಮಹಾರಾಷ್ಟ್ರದಲ್ಲಿ ಅವರು ಅಷ್ಟನ್ನೂ ಕೊಂಡರು, ಅವರು ನಿಮ್ಮ ಪಕ್ಷದವರು. ಟೊಬ್ಯಾಕೊ ಹಾಳಾಗುತ್ತಿದೆ ಎಂದು ಹೇಳಿದ್ದಕ್ಕೆ ಬಂದು ಅಸಿಸ್ಟ್ ಮಾಡಿದರು. ನೀವು ಏನು ಮಾಡಿದಿರಿ ? ಟೊಮ್ಯಾಟೋ ಬೆಲೆ ಐದು ರೂಪಾಯಿಯಿಂದ ಐವತ್ತು ಪೈಸೆಗೆ ಬಂದರೆ ನಿಮ್ಮ ರಾಜ್ಯ ಸರ್ಕಾರ ಸತ್ತು ಹೋಗಿರುತ್ತದೆ. ರಾಗಿ ಬೆಳೆ ಮುನ್ನೂರು ರೂಪಾಯಿಯಿಂದ ನೂರೈವತ್ತು ರೂಪಾಯಿಗೆ ಬಂದಾಗ ನಿಮ್ಮ ರಾಜ್ಯ ಸರ್ಕಾರಗಳು ಸತ್ತು ಹೋಗಿವೆ. ಯಾರನ್ನು ಹೋಗಿ ಕೇಳಬೇಕು ? ಸನ್ಮಾನ್ಯ ಬಂಗಾರಪ್ಪನವರು ಕೃಷಿ ಸಚಿವರಾಗಿದ್ದಾಗ ನಾನು ಒಂದು ದಿವಸ ಹೋಗಿ ಕೇಳಿದ್ದೆ. ನನಗೆ ಕೊಬ್ಬರಿಗೆ ಕೇಂದ್ರಸರ್ಕಾರ 1800 ಧಾರಣೆ ನಿಗದಿ ಮಾಡಿಬಿಟ್ಟಿದೆ, ಸಪೋರ್ಟ್ ಪ್ರೈಸ್‌ನಲ್ಲಿ ನಾನು ಯಾರಿಗೆ ಮಾರಬೇಕು ಹೇಳಿ ಎಂದು.

ಅವತ್ತು ಅಧಿಕಾರಿಗಳನ್ನು ಕರೆಯಿಸಿ ಭಾರಿ ತೀಕ್ಷ್ಣವಾಗಿ ಮಾತನಾಡಿದ್ದಾರೆ. ನಾವು ಯಾರಿಗೆ ಮಾರಬೇಕು ಹೇಳಿ; ಗೊತ್ತಿಲ್ಲ. ನಾಫೆಡ್‌ನವರು ಕೊಳ್ಳುತ್ತಾರೋ ಕೊಳ್ಳಲಿಲ್ಲ. ಮಾರ್ಕೆಟಿಂಗ್

ಫೆಡರೇಷನ್‌ನವರು ಕೊಂಡರೇ, ಕೊಳ್ಳಲಿಲ್ಲ. ನಿಮ್ಮ ಟಿ.ಎ. ಪಿ.ಸಿ.ಎಂ. ಎಂದು ಬೋರ್ಡ್ ಹಾಕಿಕೊಂಡಿದ್ದಾರೆ, ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘಗಳು ಎಂದು ರಾಜ್ಯದಲ್ಲಿ ಯಾವೂ ಬದುಕಿಲ್ಲ. ಎ.ಪಿ. ಎಂ.ಸಿ.ಗಳು ಬಿಡಿ, ನಾನು ಅವುಗಳ ಬಗ್ಗೆ ಮಾತನಾಡುವುದಿಲ್ಲ. ಎಲೆಕ್ಷನ್ ಮಾಡಬೇಕೆಂಬ ಕಳಕಳಿ ತಮಗೆ ಇಲ್ಲ, ಅವರು ಏಕೆ ಇದ್ದಾರೋ ಅವರಿಗೂ ಗೊತ್ತಿಲ್ಲ. ಕುರಿ ಅಥವಾ ಮೇಕೆ ನಮ್ಮ ಕ್ಷೇತ್ರಗಳಲ್ಲಿ ಮಾರಿ, ಬರುವ ಒಂದು ರೂಪಾಯಿಯನ್ನು ಮೋಸ ಮಾಡಿ, ಸೆಕ್ರಟರಿ ಅಲ್ಲಿರುವ ಸಿಬ್ಬಂದಿ ಬಹಳ ಚೆನ್ನಾಗಿದ್ದಾರೆ. ಯಾವ ಎ.ಪಿ.ಎಂ.ಸಿ.ಗಳು ಚೆನ್ನಾಗಿವೆ ನೋಡಿದ್ದೀರಾ? ಗೊತ್ತಿಲ್ಲ. ಈ ಸ್ಥಿತಿಗೆ ತಂದವರು ಯಾರು; ತಾವೇ. ಏನು ಈ ವ್ಯವಸ್ಥೆಯನ್ನು ನಡೆಸಿಕೊಂಡು ಬಂದಿದ್ದೇವೆ. ಯಾವುದೇ ಪಕ್ಷ ಇರಲಿ, ರೈತರನ್ನು ಇವತ್ತು ಭಿಕ್ಷುಕರನ್ನಾಗಿ ನಿಲ್ಲಿಸಿಬಿಟ್ಟಿದ್ದೀರಿ. ಕಾಂಪೀಟ್ ಮಾಡುವ ಮಾರ್ಕೆಟ್‌ನಲ್ಲಿ ನಾವು ಹೇಗೆ ಬದುಕಿದ್ದೇವೆ ಎಂದು ಏನಾದರೂ ತಾವು ಒಂದು ಕ್ಷಣ ಯೋಚನೆ ಮಾಡುವುದಕ್ಕಾಗುತ್ತದೆಯೇ? ಆಗಲಿಲ್ಲ. ಟ್ರಾಕ್ಟರ್ ಇಟ್ಟುಕೊಂಡು ಡೀಸೆಲ್ ಎಲ್ಲಿಂದ ಹಾಕುತ್ತಾನೆ. ಆಗಲಿಲ್ಲ. ಎತ್ತುಗಳು ಇವತ್ತು 16-18 ಸಾವಿರ ಜೊತೆ ಆಗಿದೆ. ಯಾವ ರೀತಿ ಕೊಳ್ಳುತ್ತಾನೋ ಗೊತ್ತಿಲ್ಲ. ಮೇವು ಎಲ್ಲಿಂದ ತಂದು ಹಾಕುತ್ತಾನೋ ಗೊತ್ತಿಲ್ಲ. ಚೌಕಾಸಿ ಮಾಡುತ್ತಲೇ ಹೋದರು. ನೀವು ದಯಮಾಡಿ ಕೇಳಿ. ಇದರಲ್ಲಿ ಯಾರದೂ ದಾಕ್ಷಿಣ್ಯ ಇಲ್ಲ. ನಾವೇ ನಿಂತುಕೊಂಡು ರೈತರನ್ನು ದಾರಿತಪ್ಪಿಸಿ, ಇವತ್ತು ಡಿಫಾಲ್ಟರ್ ಮಾಡಿದ್ದೇವೆ. ನಾವೇ ನಿಂತುಕೊಂಡು ರೈತರನ್ನು ದಾರಿ ತಪ್ಪಿಸಿ, ಸೀಮೆಗೊಬ್ಬರ ಅಥವಾ ರಸಗೊಬ್ಬರವನ್ನೋ ಬಳಕೆ ಮಾಡುವ ಸ್ಥಿತಿಗೆ ನಿರ್ಮಾಣ ಮಾಡಿ, ಇವತ್ತಿನ ದಿವಸ ರಸಗೊಬ್ಬರ ಇಲ್ಲ ಎಂದಿದ್ದೇವೆ. ನಾವೇ ನಿಂತುಕೊಂಡು ದಾರಿತಪ್ಪಿಸಿ, ಅಮೇರಿಕಾದಿಂದ ತಂದ ಬೀಜವನ್ನೂ ಕೊಡುವುದಕ್ಕೆ ಹೊರಟಿದ್ದೇವೆ. ಯಾರೂ ಕೇಳಿರಲಿಲ್ಲ. ರಸಗೊಬ್ಬರ ಕೊಡಿ ಎಂದು, ತಾವು ಇಂಪೋಸ್ ಮಾಡಿದಿರಿ ಬಿ ಕಾಂಪೋನೆಂಟನ್ನು. ಡಿ.ಸಿ.ಸಿ. ಬ್ಯಾಂಕಿನಲ್ಲಿ ಏನು ಸಾಲ ತೆಗೆದುಕೊಂಡಿದ್ದಾರೆ ಅದಕ್ಕೆ ಬಿ ಕಾಂಪೊನೆಂಟ್ ಇಷ್ಟು ತೆಗೆದುಕೊಂಡು ಹೋಗಲೇಬೇಕೆಂದು ಹಾಕಿದಿರಿ ಅವನ ಗೊಬ್ಬರಕ್ಕೆ. ಅವನ್ನು ತೆಗೆದುಕೊಂಡು ಹೋಗಿ ಇವತ್ತು ಗೊಬ್ಬರ ಮಾಡಿದಿರಿ. ಇವತ್ತು ನಿಮ್ಮ ಹತ್ತಿರ ಗೊಬ್ಬರ ಇಲ್ಲ, ಕೊಳ್ಳುವುದಕ್ಕೆ ಅವನಿಗೆ ಶಕ್ತಿ ಇಲ್ಲ. ಇದೆಲ್ಲಾ ಯಾರು ಮಾಡಿಕೊಂಡು ಬಂದಿರುವುದು, ತಾವೇ. ದಯಮಾಡಿ ತಮ್ಮ ತಪ್ಪು ಒಪ್ಪಿಕೊಂಡು, ಸಾಲ ಮನ್ನಾ ಮಾಡುವ ಯೋಗ್ಯತೆ, ಅರ್ಹತೆ ಇಲ್ಲ. ನಮ್ಮ ಸರ್ಕಾರ ಆ ಸ್ಥಿತಿಯಲ್ಲಿ ಇಲ್ಲ. ಬಡ್ಡಿ ಬಿಟ್ಟು ಕೊಡುತ್ತಾರೆ. ಈ ಸಾರಿ ಕಟ್ಟಿ, ಮುಂದಿನ ಸಲದಿಂದ ಏನೋ ರಿಯಾಯಿತಿ ಬಡ್ಡಿ ದರದ ಮೇಲೆ ಸಾಲ ಕೊಡುತ್ತೇವೆ ತೆಗೆದುಕೊಳ್ಳಿ ಎಂದು ಹೇಳುವಷ್ಟು ಕೃಪೆ ತಾವು ತೋರಿಸಬೇಕು. ಇದರ ಬಗ್ಗೆ ದಾಕ್ಷಿಣ್ಯವಿಲ್ಲ. ಇವತ್ತು ನಿಮ್ಮವರು ಏನು ಮಾಡಿದ್ದಾರೆ? ನನ್ನ ಹತ್ತಿರ ಒಂದು ವರದಿ ಇದೆ. ಆದಿತ್ಯ, ಬಿರ್ಲಾ ಎನ್ನುವರಿಗೆ 360 ಕೋಟಿ ಪಬ್ಲಿಕ್ ಇನ್‌ಸ್ಟಿಟ್ಯೂಷನ್ಸ್‌ನಿಂದ ಸಾಲ ಕೊಟ್ಟಿದ್ದೀರಿ. ಇವತ್ತಿನವರೆಗೆ ಆ ಇಂಡಸ್ಟ್ರಿ ಪ್ರಾರಂಭವಾಗಿಲ್ಲ. ಇಂಡೋ ಗಲ್ಫ್ ಎಂದು ಮಾಡುವುದಕ್ಕೆ ಹೊರಟಿದ್ದಾರೆ. ಇಡೀ ನಿಮ್ಮ ಮೇಜರ್ ಇಂಡಸ್ಟ್ರಿಯಲಿಸ್ಟ್ ಎಲ್ಲಾ ಎನ್.ಆರ್.ಐ.ಗಳಾಗಿದೆ. ಈ ದೇಶದ ದುಡ್ಡು ತೆಗೆದುಕೊಂಡು ಹೋಗಿ ಆಚೆ ಇಟ್ಟಿದ್ದಾರೆ. ತಮಗೆ ಅವರ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಎಂ.ಸಿ.ಎಫ್. ನಷ್ಟಕ್ಕೆ ಬಂದಿದೆ. ಗೋಲ್ಡನ್ ಹ್ಯಾಂಡ್, ಅವರು ಮುಟ್ಟಿದ್ದೆಲ್ಲಾ ಚಿನ್ನವಾಗುತ್ತದೆ ಎಂದು, ನೀವು ಎಲ್ಲಾ ಇಂಡಸ್ಟ್ರೀಗಳನ್ನು ಅವರಿಗೆ ಕೊಟ್ಟುಕೊಂಡು ಬಂದಿರಿ. ದುಡ್ಡನ್ನೆಲ್ಲಾ ತೆಗೆದುಕೊಂಡು ಹೋಗಿ ಇವತ್ತು ಇಂಗ್ಲೆಂಡ್‌ನಲ್ಲಿಡುತ್ತಿದ್ದಾರೆ. ಇಂಡಸ್ಟ್ರಿ ಮಾಡುತ್ತಿದ್ದಾರೆ. ಯಾರು ಕೇಳಿದ್ದೀರಿ. ಏಕೆ ಕೇಳುತ್ತೀರಿ, ನಿಮಗೆ ಏನೂ ಆಗಬೇಕಾಗಿಲ್ಲವಲ್ಲ ಇದರಿಂದ. ಕಿಸಾನ್ ನಡೆಯುತ್ತಿದ್ದುದು ಅವರದು. ಫ್ರೂಟ್ಸ್ ಜ್ಯೂಸ್ ಸಕ್ವ್ಯಾಷ್ ಮಾಡಿಕೊಡಬೇಕಾಗಿದ್ದವರು, ಇವತ್ತು ನಮಗೆ ರೇಟ್ ಇಲ್ಲ. ನಿಮ್ಮ ಟೊಮ್ಯಾಟೋ ಕೇಳುವವರು ದಿಕ್ಕಿಲ್ಲ. ನಿಮ್ಮ ಆಲೂಗೆಡ್ಡೆ ಕೇಳುವರು ದಿಕ್ಕಿಲ್ಲ. ನಿಮ್ಮ ಈರುಳ್ಳಿ ಕೇಳುವವರು ದಿಕ್ಕಿಲ್ಲ. ನಿಮ್ಮ ಟೊಬ್ಯಾಕೋ ಕೇಳುವವರು ದಿಕ್ಕಿಲ್ಲ. ನಿಮ್ಮ ರೇಷ್ಮೆ ಕೇಳುವವರು ದಿಕ್ಕಿಲ್ಲ, ನಿಮ್ಮ ರಾಗಿ

ಕೇಳುವವರು ದಿಕ್ಕಿಲ್ಲ. ನಿಮ್ಮ ಮನಮೋಹನಸಿಂಗ್‌ರವರು ಮತ್ತು ಸನ್ಮಾನ್ಯ ಕೃಷಿ ಸಚಿವರು ನಮಗೆ ಒಂದು ಮಾತು ಕೊಟ್ಟರು. ವೈಜ್ಞಾನಿಕವಾಗಿ ಧಾರಣೆ ನಿಗದಿ ಮಾಡಿಕೊಡುತ್ತೇವೆ, ಸಬ್ಸಿಡಿಗಳನ್ನೆಲ್ಲಾ ತೆಗದು ಇದನ್ನು ರೀಇಂಬರ್ಸ್ ಮಾಡುತ್ತೇವೆ, ಥ್ರೂ ಮಾರ್ಕೆಟ್, ಥ್ರೂ ಸೇಲ್ ಆಫ್ ಯುವರ್ ಪ್ರೊಡ್ಯುಸರ್ಸ್. ಏನು ಮಾಡಿಕೊಟ್ಟರಿ ? ನೀವು ಗೊಬ್ಬರದ ಬೆಲೆ ಜಾಸ್ತಿ ಮಾಡಿದ ಮೇಲೆ ಬೆಳೆಯು ಧಾರಣೆ ಕಡಿಮೆ ಮಾಡುವುದು, ಇದು ನಿಮ್ಮ ವೈಜ್ಞಾನಿಕವಾದ ಧಾರಣೆಯೇ ? ಇದನ್ನು ನಾವು ಏತಕ್ಕೆ ಕೇಳುತ್ತೇವೆ. ನಾನು ಕೈಮುಗಿದು ಈ ಸರ್ಕಾರಕ್ಕೆ ಕೇಳುತ್ತೇನೆ. ಇದರಲ್ಲಿ ನಮ್ಮನ್ನು ಭಿಕ್ಷುಕರ ಸ್ಥಿತಿಗೆ ತರಬೇಡಿ. ಏನಾಗಿದೆ ಸ್ವಲ್ಪ ಯೋಚನೆ ಮಾಡುವುದನ್ನು ಕಲಿತುಕೊಳ್ಳಿ. ನಮಗೆ ಕೊಡುತ್ತಿರುವ ಇನ್‌ಪುಟ್ಸ್ ತೆಗೆದು ನೋಡಿದ್ದೀರಾ, ಸನ್ಮಾನ್ಯ ಖರ್ಗೆಯವರೇ. ನೀವೂ ಕೂಡ ಒಬ್ಬ ರೈತರಾಗಿ ಸ್ವಲ್ಪ ತೆಗೆದು ನೋಡಿ. ಕ್ವಾಂಟಿಟಿ ಅಷ್ಟು ಉಳಿಯುವುದಿಲ್ಲ. ಇನ್‌ಪುಟ್‌ಗೆ ಏನು ಧಾರಣೆ ನಿಗದಿಯಾಗಿತ್ತು, 10 ವರ್ಷದ ಹಿಂದೆ, ಆ ಧಾರಣೆಗೆ ತಕ್ಕನಾಗಿ, ಇನ್‌ಪುಟ್ಸ್‌ನ್ನು ಕೊಟ್ಟುಕೊಂಡು ಹೋಗುವುದು. 500 ರೂಪಾಯಿ ಯಾವತ್ತೋ ನಿಗದಿಯಾಗಿದ್ದರೆ, 500 ರೂಪಾಯಿಗೆ ಇವತ್ತು ಎಷ್ಟು ಗೊಬ್ಬರ ಬರುತ್ತದೆ. ಬೀಜ ಬರುತ್ತದೆ, ಅಷ್ಟೇ ಕೊಡುವುದು ನಿಮ್ಮ ಅಗ್ರಿಕಲ್ಚರ್ ಇಲಾಖೆಯಲ್ಲಿ. ನನ್ನ ತಾಲ್ಲೂಕಿನ ಒಂದು ಉದಾಹರಣೆ ಹೇಳುತ್ತೇನೆ. 8 ಲಕ್ಷ ಸಂಬಳ ತೆಗೆದುಕೊಂಡು, 5 ಲಕ್ಷ ರೂಪಾಯಿ ಸರ್ಕಾರಿ ಗ್ರಾಂಟ್ ಖರ್ಚು ಮಾಡುವುದಕ್ಕೆ 8 ಲಕ್ಷ ರೂಪಾಯಿ ಸಂಬಳ ತೆಗೆದುಕೊಳ್ಳುವ ಅಗ್ರಿಕಲ್ಚರ್ ಇಲಾಖೆ ಇದೆ. ನಿಮ್ಮ ಅಗ್ರಿಕಲ್ಚರ್ ಅಸಿಸ್ಟೆಂಟ್ ಎಲ್ಲಿದ್ದಾರೆ, ನಿಮ್ಮ ಸಾಯಿಲ್ ಕನ್‌ಸರ್ವೇಷನ್ಸ್ ಅಧಿಕಾರಿಗಳು ಎಲ್ಲಿದ್ದಾರೆ. ಇವರನ್ನೆಲ್ಲಾ ತೆಗೆದುಬಿಡಿ. ಒಂದೇ ಮಾತು ಕೇಳುತ್ತೇನೆ. ಇವರು ಯಾರೂ ನಮಗೆ ಬೇಕಾಗಿಲ್ಲ. ನಾವು ನಮ್ಮ ಬೆಳೆ ಬೆಳೆದುಕೊಳ್ಳುತ್ತೇವೆ. ನಮಗೇನೂ ಇವರ ಸಹಾಯ, ಇವರ ತಂತ್ರಜ್ಞಾನದ ಅಗತ್ಯ ಇಲ್ಲ. ನಮಗೆ ಅನುಭವ ಇದೆ, ನಮ್ಮಷ್ಟ ಮಾಡುವ ಕಸುಬನ್ನು ನಾನು ಮಾಡುವುದಕ್ಕೆ ಇಲ್ಲಿ ಯಾರೂ ಬಂದು ಹೇಳಿ ಕೊಡಬೇಕಾದ ಅವಶ್ಯಕತೆ ಇಲ್ಲ. ನಮ್ಮ ಹೆಸರಿನಲ್ಲಿ ಇವರಿಗೇಕೆ ಸಂಬಳ ಕೊಟ್ಟುಕೊಂಡು ಇವರ ಹೆಂಗಸರು ಮಕ್ಕಳಿಗೆ ಸೀರೆ ಕೊಡಿಸುವುದನ್ನು ಬಿಟ್ಟು, ಇಷ್ಟು ಅಗ್ರಿಕಲ್ಚರ್‌ಗೆ, ಇಷ್ಟು ಅನಿಮಲ್ ಹಸ್‌ಬೆಂಡ್ರಿಗೆ, ಇಷ್ಟು ಫಿಷರೀಸ್‌ಗೆ ಎಂದು ಅನೌನ್ಸ್ ಮಾಡಿಕೊಂಡು, ನಮ್ಮನ್ನು ದಾರಿ ತಪ್ಪಿಸಿದ್ದೀರಿ. ದಯಮಾಡಿ ಇದನ್ನು ನಿಲ್ಲಿಸಿ, ಕೃಪೆ ಮಾಡಿ ಏನಾದರೂ ನಮಗೆ ಆಗಿರತಕ್ಕ ಬರ್ಡನ್ ಕಡಿಮೆ ಮಾಡಿ. ತೀರಿಸಲೇಬೇಕೆಂದು ಹೇಳಿ, ಮನ್ನಾ ಮಾಡಬೇಕೆಂದು ಹೇಳಿ, ಕೇಳಬೇಕಾಗಿತ್ತು. ಆದರೆ, ನಾವೇನು ಇವತ್ತು ಸ್ವಲ್ಪ ಮಟ್ಟಿಗೆ ರಾಜಿಯಾಗಿದ್ದೇವೆ, ದಯಮಾಡಿ ಬಡ್ಡಿ, ಸುಸ್ತಿ ಬಡ್ಡಿ ಬಿಟ್ಟು, 5-6 ತಿಂಗಳು ಟೈಮ್ ಕೊಡಿ. ನೀವೇನಾದರೂ 15 ದಿವಸ ಅಥವಾ ತಿಂಗಳು ಎಂದರೆ, ಅದೂ ಕೂಡ ಆಗುವುದಿಲ್ಲ. ಅದಕ್ಕೆ ಕಾಲಾವಕಾಶ ಕೊಟ್ಟು, ಇದನ್ನು ಕನ್‌ಸಿಡರ್ ಮಾಡಬೇಕೆಂದು ಕೇಳಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ ಅವರು ಮಾತನಾಡುತ್ತಾ, ಒಳ್ಳೆಯ ಲಾಯರ್ ನೀವು ಏನು ಈ ತರಹ ವಾದ ಮಾಡುತ್ತೀರಿ ಅಂದರು, ಅದಕ್ಕೆ ನಾನು ಇದನ್ನು ಹೇಳಬೇಕಾಗಿದೆ.

"The Karnataka Government introduced the Karnataka Agriculture and Rural Debt Scheme, 1990 to write off the loans taken by the farmers. In this scheme, loan waive over due as on 2.10.1989 up to Rs. 10,000/- Out of the total financial implication, 50% had to be borne by the Govt. of India as a grant and the remaining 50% should be borne by the Government of Karnataka," that is the State Government. ಇದು ನನ್ನದಲ್ಲ ವಾದ, ಸರ್ಕಾರದವರು ಕೊಟ್ಟಿರತಕ್ಕಂಥ ಪುಸ್ತಕದಲ್ಲಿ ಇದೆ. ಇಲ್ಲ ಎಂದು ಹೇಳಿದಿರಿ ಅದಕ್ಕೆ ನಾನು ತಮ್ಮ ಗಮನಕ್ಕೆ ತಂದೆ.

ಶ್ರೀ ಹೆಚ್.ವೈ. ಮೇಟಿ:– ಮಾನ್ಯ ಅಧ್ಯಕ್ಷರೇ ಇವತ್ತು ರೈತರ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಏಕೆಂದರೆ ಸತತವಾಗಿ ಬರಗಾಲ ವಿದ್ಯುತ್ ಕಡಿತ ಇದೆಲ್ಲದ್ದರಿಂದ ರೈತ ಯಾವ ತರಹ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾವೆಲ್ಲ ಉತ್ತರ ಕರ್ನಾಟಕದವರು ನಮ್ಮ ಜಿಲ್ಲೆಯಲ್ಲಿ ಹೆಚ್ಚು ಜೋಳ ಮತ್ತು ಸೂರ್ಯಕಾಂತಿ ಬೆಳೆಯುತಕ್ಕಂಥವರು. ನಮ್ಮ ಪರಿಸ್ಥಿತಿ ಏನಾಗಿದೆ ಅಂದರೆ, ಈ ವರ್ಷ ಮುಂಗಾರಿ ಮಳೆ ವಿಫಲವಾಗಿದ್ದರಿಂದ ಬೆಳೆ ಬಂದಿರುವುದಿಲ್ಲ. ದನಕರುಗಳು ಸಹಿತ ಆಲದ ಮರದ ಕೆಳಗೆ ಮಾರಾಟ ಮಾಡಿದರು. ಬಹುತೇಕವಾಗಿ ನಮ್ಮ ಮಂತ್ರಿಗಳು ಇದ್ದರಲ್ಲ, ನಾಡಗೌಡರು ಅವರ ತಾಲ್ಲೂಕಿನಲ್ಲಿ ಮುದ್ದೆಬಿಹಾಳ ದನಗಳ ಸಂತೆ ಸೇರುತ್ತದೆ. ಅಲ್ಲಿ ದನಗಳು ಹರಾಜು ಆಯಿತು. ಇಂತಹ ಪರಿಸ್ಥಿತಿಯಲ್ಲಿ ಏನೋ ಅತಿವೃಷ್ಟಿ ಆಗಿ ಮಳೆ ಸ್ವಲ್ಪ ಬಂತು. ದನಕರುಗಳು ಬದುಕುವುದಕ್ಕೆ ಸಾಧ್ಯವಾಯಿತು. ಆದರೆ ರೈತರಿಗೆ ಪೀಕು ಬರುವುದಕ್ಕೆ ಸಾಧ್ಯವಾಗಲಿಲ್ಲ. ಸ್ವಲ್ಪ ಪ್ರಮಾಣದಲ್ಲಿ ಪೀಕು ಬಂತು. ಜನವರಿ ಮೊದಲನೇ ವಾರದಲ್ಲಿ ತಂಪು ಗಾಳಿ ಬೀಸಿ ಸೂರ್ಯಕಾಂತಿಗೆ ರಸ್ಟ್ ರೋಗ ಬಿದ್ದು ಇವತ್ತು ನೀರಾವರಿ ಆಗಲಿ ಒಣಬೇಸಾಯದಿಂದ ಆಗಲಿ ಒಂದು ಎಕರೆಗೆ ಒಂದು ಚೀಲ ಒಂದೂವರೆ ಚೀಲ ಸಹ ಬರಲಿಲ್ಲ. ಸ್ವತಃ ತಾವು ನೋಡಬಹುದು. ತಾವು ಬೇಕಾದರೆ ಸದನದ ಸಮಿತಿ ನೇಮಿಸಿ ಅವರು ಬೇಕಾದರೆ ನೋಡಬಹುದು. ಬಿಳಿ ಜೋಳಕ್ಕೆ ಬಾಣಂತಿ ರೋಗ ಬಿದ್ದು ತಂಪುಗಾಳಿ ಬೀಸಿದ್ದರಿಂದ ಜೋಳ ಒಂದು ಚೀಲ ಎರಡು ಚೀಲ ಬರುವುದಕ್ಕೆ ಹತ್ತಿದೆ. ಈ ರೀತಿ ಆದರೆ ರೈತ ಹೇಗೆ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಸಹಕಾರ ಸಂಘಗಳಲ್ಲಿ ಸಾಲ ಮಾಡಿದ್ದು ಆ ಸಾಲ ಕೊಡಬೇಕಾದರೆ ಸರ್ಕಾರದ ಯೋಜನೆಗಳು ಸರಿಯಾಗಿ ರೈತರಿಗೆ ಮುಟ್ಟಿಲ್ಲ. ಹೀಗಾಗಿ ಪ್ರತಿಯೊಂದು ದೃಷ್ಟಿಯಲ್ಲೂ ರೈತ ವಿಫಲನಾಗಿದ್ದಾನೆ. ಈಗ ರೈತರಿಗೆ ಬಡ್ಡಿ ಮನ್ನಾ ಮಾಡುವುದು ಅವಶ್ಯಕ ಇದೆ ಎಂದು ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಯಾವುದೇ ಪರಿಸ್ಥಿತಿಯಲ್ಲಿ ಆದರೂ ಬಡ್ಡಿ ಮನ್ನಾ ಮಾಡಬೇಕು. ಮಾಡಲಿಲ್ಲ ಅಂದರೆ ರೈತ ಬದುಕುವುದಕ್ಕಾಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ 32 ಪರ್ಸೆಂಟ್ ಜನ ನಗರಗಳಲ್ಲಿ ವಾಸ ಮಾಡುತ್ತಿದ್ದು ಇನ್ನು 68 ಪರ್ಸೆಂಟ್ ಜನ ಗ್ರಾಮಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ 68 ಪರ್ಸೆಂಟ್ ಜನ ಸುಮಾರು 3 ಕೋಟಿ ಜನರು ರೈತರು ಕೂಲಿ ಕಾರ್ಮಿಕರು ಗ್ರಾಮಾಂತರ ಪ್ರದೇಶಗಳಲ್ಲಿದ್ದಾರೆ. ನನಗೆ ಬಹಳ ಕೆಟ್ಟದ್ದು ಅನಿಸಿದ್ದು ನಿನ್ನೆ ನಗರದಲ್ಲಿ ಉಪಯೋಗ ಮಾಡತಕ್ಕಂಥ ಒಳ ಉಡುಪು ಬಟ್ಟೆ ನಾನು ನಿನ್ನೆ ಕೇಳಿದೆ ಹತ್ತಿ ಬಟ್ಟೆಗೂ ಮಾಡಿದ್ದೀರಾ ಅಂತ. ಒಳ ಉಡುಪುಗಳಿಗೆ ರಿಯಾಯಿತಿ ಕೊಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ 3 ಕೋಟಿ ಜನರ ಸಲುವಾಗಿ ನಾವು ಇಲ್ಲಿ ಇವತ್ತು ವಿಚಾರ ಮಾಡುವಾಗ ಶಾಸಕರ ಸಂಖ್ಯೆ ಎಷ್ಟು ಕಡಿಮೆ ಇದೆ ಅದಕ್ಕೆ ಏನು ಹೇಳಬೇಕೋ ಗೊತ್ತಾಗುವುದಿಲ್ಲ. ಮೊದಲೇ ಬಿಜಾಪುರ ಭಾಷೆ ಒರಟು ಭಾಷೆ, ಅದು ಮಾತನಾಡಿದರೆ ತಪ್ಪಾಗಬಹುದು. ನಿನ್ನೆ ಏರ್ ಕಂಡೀಷನ್, ಒಳ ಉಡುಪು ಮತ್ತು ಪೌಡರ್ ಸ್ನೋ ಫ್ಯಾನ್ ಟಿ.ವಿ. ಇಂತಹದ್ದಕ್ಕೆ ರಿಯಾಯಿತಿ ಕೊಟ್ಟಾಗ ಡೋಲು ಬಡಿಯಲು 150–160 ಜನ ಕುಳಿತಿದ್ದರು. ಒಂದು ಕೋಟಿ ಜನರ ವಿಚಾರ ಮಾಡುವಾಗ ಆದರೆ ಇವತ್ತು 3 ಕೋಟಿ ಜನರ ವಿಚಾರ ಅವರ ಸಮಸ್ಯೆ ವಿಚಾರ ಮಾಡುವುದಕ್ಕೆ ಎಷ್ಟು ಕಡಿಮೆ ಮಂದಿ ಇದ್ದಾರೆ ನೋಡಿ. ಈ ಮಾತು ಬಹಳ ದುಃಖ ಆನಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ರೈತರು ಬದುಕುವುದು ಹೇಗೆ ಸಾಧ್ಯ ಇದೆ.

ಇವತ್ತು ಕರ್ನಾಟಕ ಸರ್ಕಾರದವರು ರೈತರುಗಳಿಗೆ ಬಡ್ಡಿ ಮನ್ನಾ ಮಾಡಬೇಕು. ನಾನು ಹಿರಿಯರಾದ ಕಾಂಗ್ರೆಸ್ ಮಿತ್ರರಿಗೆ ಹೇಳುತ್ತೇನೆ, ಇನ್ನು ಕೆಲವು ದಿವಸಗಳಲ್ಲಿ ಪಾರ್ಲಿಮೆಂಟ್ ಎಲೆಕ್ಷನ್ ಬರುವ ಹಾಗಿದೆ. ನೀವು ಯಾರೂ ಹಳ್ಳಿ ಒಳಗೆ ಹೋಗುವುದಕ್ಕಾಗುವುದಿಲ್ಲ. ನಾನು ನಿಶ್ಚಿತವಾಗಿ ಹೇಳುತ್ತೇನೆ, ಕಾಂಗ್ರೆಸ್ ಎಂಎಲ್ಎಗಳು ಮತ್ತು ಎಂಪಿಗಳು ಯಾರೂ ಹಳ್ಳಿಗಳ ಒಳಗೆ ಹೋಗುವ ಹಾಗೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವಾದರೂ ಹೋಗಿ ಬನ್ನಿ ಸುಖವಾಗಿ.

ಶ್ರೀ ಹೆಚ್.ವೈ. ಮೇಟಿ:- ನಮ್ಮ ಸರ್ಕಾರ ಇದ್ದಾಗ ಬಡ್ಡಿ ಮನ್ನಾ ಮಾಡಿದ್ದೆವು.

ಶ್ರೀ ಕಾಗೋಡು ತಿಮ್ಮಪ್ಪ:- ಎಲ್ಲಾ ಹಳ್ಳಿಗಳನ್ನು ಕೊಂಡುಕೊಂಡು ಬಿಟ್ಟಿದ್ದೀರಾ ? ನಾವು ಯಾವ ಹಳ್ಳಿಗೆ ಹೋಗುವ ಹಾಗಿಲ್ಲವಾ ?

ಶ್ರೀ ಹೆಚ್.ವೈ. ಮೇಟಿ:- ಅದಕ್ಕಾಗಿ ಸರ್ಕಾರದವರು ರೈತರುಗಳ ಸಾಲಕ್ಕೆ ಬಡ್ಡಿ ಮನ್ನಾ ಮಾಡಬೇಕು. ಮಾಡದೇ ಇದ್ರೆ ನಾವು ಧರಣ ಮಾಡಬೇಕಾಗುತ್ತದೆಂದು ಹೇಳಿ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ):- ಮಾನ್ಯ ಅಧ್ಯಕ್ಷರೇ, ಬಹಳ ಜನ ಈ ಬಗ್ಗೆ ಮಾತನಾಡಿದ್ದಾರೆ. ಸನ್ಮಾನ್ಯ ಖರ್ಗೆಯವರಿಗಾಗಲೀ ಅಥವಾ ಸರ್ಕಾರಕ್ಕಾಗಲೀ ಇದೇನು ಗೊತ್ತಿಲ್ಲವೆಂದಲ್ಲ. ಮಲಗಿದ್ದವನನ್ನು ಏನಾದರೂ ಮಾಡಿ ಎಬ್ಬಿಸಬಹುದು. ಸುಮ್ಮಸುಮ್ಮನೆ ಮಲಗಿದ್ದವನನ್ನು ಹೇಗೆ ಎಬ್ಬಿಸುವುದು ? ಬಹಳ ಕಷ್ಟ. ರೈತರ ಕಷ್ಟ ನಿಮಗೆ ಗೊತ್ತಿಲ್ಲವೆಂದಲ್ಲ. ಬಹಳ ಜನ ರೈತ ಕುಟುಂಬದಿಂದಲೇ ಬಂದಿರುವವರು. ಕಳೆದ ಹಲವಾರು ವರ್ಷಗಳಿಂದ ರೈತರುಗಳಿಗೆ ಏನು ಕೆಟ್ಟ ಪರಿಸ್ಥಿತಿ ಬಂದಿತ್ತೋ ಅದಕ್ಕಿಂತ ಹೆಚ್ಚು ಕೆಟ್ಟ ಪರಿಸ್ಥಿತಿ ಇವತ್ತು ಬಂದಿದೆ. ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಬಂದ ತಕ್ಷಣ ಮೊದಲು nitrogen fertilisers ಜಾಸ್ತಿ ಮಾಡಿದರು. ಇದು ಮೊದಲನೆಯ ಬಳುವಳಿ. ಇದಾದ ಮೇಲೆ 10% ಕಡಿಮೆ ಮಾಡಿ 300% Phosphuros and Potash ಜಾಸ್ತಿ ಮಾಡಿದರು. ಇದಕ್ಕೆ ಏನು ಗೋಲ್‌ಮಾಲ್ ಮಾಡಿದ್ದಾರೆಂದು ನನಗೆ ಗೊತ್ತು. ಏನಾದರೂ ಮಾಡಿಕೊಂಡು ಹೋಗಲಿ. ಒಂದು ಗೊಬ್ಬರದ ಬೆಲೆ ಜಾಸ್ತಿ ಮಾಡಿದಿರಿ. ಒಂದು ಕಡೆ ನೀರಿಲ್ಲ, ಇನ್ನೊಂದು ಕಡೆ ಮಾರುಕಟ್ಟೆ ವ್ಯವಸ್ಥೆ ಏನು ಮಾಡಿದ್ದೀರಿ ಸ್ವಾಮಿ? ನಾನು ಮಂತ್ರಿಯಾಗಿದ್ದಾಗ APMC ಯಲ್ಲಿ ಕೆಲವು ಕಾನೂನುಗಳನ್ನು ಬದಲಾವಣೆ ಮಾಡಿದ್ದೆವು. ಅದನ್ನು ಪಾಲಿಸುವುದಕ್ಕೆ ನಿಮ್ಮ ಸರ್ಕಾರ ಏನಾದರೂ ಕಿಂಚಿತ್ತು ಗಮನ ಕೊಟ್ಟಿದೆಯಾ ಸ್ವಾಮಿ ? ರೈತರ ಶೋಷಣೆ ಆಗುತ್ತದೆ. ಬೆಳೆ ಇಟ್ಟಾಗ ಇಲಿಗಳ ಕಾಟ, ಆಮೇಲೆ ಹಕ್ಕಿಗಳ ಕಾಟ, ಬೆಳೆ ಬೆಳೆದಾದ ಮೇಲೆ ಕಳ್ಳರ ಕಾಟ ಮತ್ತು ಹಸುಕರುಗಳ ಕಾಟ. ಬೆಳೆ ಬೆಳೆದು market ಗೆ ತೆಗೆದುಕೊಂಡು ಮಾರುವುದಕ್ಕೆ ಹೋದರೆ ದಲ್ಲಾಳಿಗಳ ಕಾಟ. ಏನು ಮಾಡಿದ್ದೀರಿ ರೈತರಿಗೆ ? ಕಾನೂನು ನಿಮ್ಮ ಕೈಯಲ್ಲಿ ಇದೆ. ಮೂರು ವರ್ಷದಿಂದ APMC ಗಳಿಗೆ ಚುನಾವಣೆ ಮಾಡುವುದಕ್ಕಾಗಲಿಲ್ಲವೇ ನಿಮ್ಮ ಕೈಯಲ್ಲಿ ? ಯಾವ ಪಕ್ಷದವರೇ ಆಗಲೀ ಅಲ್ಲಿ ರೈತ ಬಂದು ಕುಳಿತುಕೊಂಡರೆ ಅವನ ಸಹೋದರನ ಕಷ್ಟ ಅವನಿಗೆ ಗೊತ್ತಾಗುತ್ತದೆ. ಅವನು ರೈತರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನಪಡುತ್ತಾನೆ. ಚುನಾವಣೆ ಮಾಡುವುದಕ್ಕೆ ಏನು ಕಷ್ಟ ಇದೆ. ಈ ಕಾನೂನಿಗೆ ಒಂದು ಸಾರಿ ಕೆ.ಹೆಚ್. ಪಾಟೀಲರು amendment ಮಾಡಿದರು, ಈ ಮಂತ್ರಿ ಬಂದ ಮೇಲೆ ಇನ್ನೊಂದು ಸಾರಿ amendment. ನೀವು ಹೇಳುತ್ತೀರಿ co-operation ಗೆ ಅಮೆಂಡ್‌ಮೆಂಟ್. ಇರುವುದರೊಳಗೆ ಕೆಲಸ ಮಾಡುವುದಕ್ಕಾಗುವುದಿಲ್ಲವೇ ? ಬರೀ amendment, amendment ಇದೇ ಕೆಲಸವೇ ನಿಮ್ಮದು ? election ಮುಂದೆ ಹಾಕುವುದಕ್ಕೆ ಒಂದು amendment ಅಂತೆ ಅಧ್ಯಕ್ಷರೆ, ಇದೇ ಸರ್ಕಾರ ಹೊಸದಾಗಿ ಬಂದಾಗ APMC Act amendment ಆಗಿದೆ. ಈಗ ಮತ್ತೆ ಒಂದು amendment ಮಾಡುತ್ತಾರಂತೆ. ಕೆ.ಹೆಚ್. ಪಾಟೀಲರು ಇದ್ದಾಗ nomination ಇತ್ತು ಅದನ್ನು ತೆಗೆದು ಹಾಕಿದರು. ಈಗ ಇವರು ಏನಾದರೂ ಮಾಡಿ ಮತ್ತೆ amendment ತರಬೇಕೆಂದು ತರುತ್ತಿದ್ದಾರೆ. ನೀವು ಬರೀ ಇದರಲ್ಲೇ ಇದ್ದರೆ ನೀವು ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವೂ ಇಲ್ಲ. ನಮ್ಮ ಮೇಟಿಯವರು ಹೇಳಿದ ಹಾಗೆ ನೀವು ಮುಂದಿನ ಚುನಾವಣೆಯಯಲ್ಲಿ ಪ್ರತಿಫಲ ಅನುಭವಿಸಬೇಕಾಗುತ್ತದೆ. ಇದರಿಂದ

ಫಲಿತಾಂಶ ಏನಾಗುತ್ತದೆ. ರೈತನಿಗೆ ಸರಿಯಾಗಿ remuneration ಸಿಗದಿದ್ದರೆ, ಅವನ ಜೀವನ ಸರಿಯಾಗಿ ನಡೆಯದಿದ್ದರೆ, ಅವನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಕೊಡುವುದಕ್ಕಾಗದಿದ್ದರೆ, ಅವನ ಪರಿಸ್ಥಿತಿ ಏನಾಗಬಹುದೆಂದು ಯೋಚನೆ ಮಾಡಿದ್ದೀರಿ ? ಮಾವಿನ ಗಿಡ ನೀರಾವರಿ ಇದ್ದರೆ, ತೆಂಗಿನ ಗಿಡವೋ, ಸಪೋಟ ಗಿಡವೋ ಹಾಕುತ್ತಾನೆ. ಏನಕ್ಕೂ ಬೆಲೆ ಇಲ್ಲದಿದ್ದರೆ ಸೌದೆಗೆ ಒಳ್ಳೆ ಬೆಲೆ ಇದೆ. ಇವತ್ತು ಸುಬಾಬುಲ್ ಆಗಲಿ, ತಂಗಡಿಯಾಗಲಿ, eucalyptus ಆಗಲಿ, ಸ್ವಾಮಿ ಇವತ್ತು ನಾನು ಹೇಳುತ್ತಿದ್ದೇನೆ. Eucalyptus ಗೆ ನೀರು ಕಟ್ಟುವವರಿದ್ದಾರೆ ಇವತ್ತಿನ ದಿವಸ. 4 ವರ್ಷಕ್ಕೆ ಒಂದು ಸಾರಿ ಬೆಳೆ ಕುಯ್ದುಕೊಂಡು ಸುಖವಾಗಿದ್ದಾರೆ. ಒಂದು ಸ್ವಲ್ಪ ನೀರು ಕೊಟ್ಟು urea ಹಾಕಿದರೆ 3 ವರ್ಷಕ್ಕೆ ಒಂದು ಬೆಳೆ. ಹರಿಹರದವರು ಬಂದು ಅದನ್ನು ಕೊಂಡುಕೊಂಡು ಹೋಗುತ್ತಾರೆ. ಹೀಗಾದರೆ ನಾಳೆ ಏನು ಆಗಬಹುದು ? ನಾವು ಎಷ್ಟು ಕೋಟಿ ಕರ್ನಾಟಕದಿಂದ central Food Corporation ಗೆ ಕೊಡುತ್ತಿದ್ದೇವೆಂದು ಲೆಕ್ಕ ಹಾಕಿದ್ದೀರೇನೂ ? ಅವರ ಹತ್ತಿರ ಗೋಧಿ, ಅಕ್ಕಿ ಎಷ್ಟು ತೆಗೆದುಕೊಳ್ಳುತ್ತಿದ್ದೇವೆ ? ಇವತ್ತು ಪಂಜಾಬ್‌ನಲ್ಲಿ ಇಷ್ಟೆಲ್ಲಾ ಗಲಾಟೆಯಾಗುತ್ತಿದೆ, ಅಲ್ಲಿ ದಿವಸ 20–30 ಜನ ಸಾಯುತ್ತಿದ್ದಾರೆ. ಅಲ್ಲಿ ವ್ಯವಸಾಯ ಏನಾದರೂ ಕಡಿಮೆ ಆಗಿದೆಯೋ ? ಏಕೆಂದರೆ ಅವರಿಗೆ 24 ಗಂಟೆ ಕಾಲ power ಸಿಗುತ್ತದೆ. ಬೇಕಾದ ಅನುಕೂಲಗಳಿವೆ. ಹೆಚ್ಚಿಗೆ ಬೆಳೆಯುತ್ತಾರೆ. ಅವರು ನಮ್ಮ ತಲೆ ಮೇಲೆ ಹಾಕುತ್ತಾರೆ. ಅವರು ಸುಖವಾಗಿದ್ದಾರೆ. ನಮ್ಮಲ್ಲಿ ಲಕ್ಷಾಂತರ ಬೋರ್‌ವೆಲ್‌ಗಳು ಇವೆ. ನಮಗೆ ನೀರು ಈಚೆಗೆ ತೆಗೆಯುವುದಕ್ಕೆ ಆಗುತ್ತದೆ ಏನು ? ನನ್ನ ತೋಟದ borewell ನಲ್ಲಿ 17000 gallon ನೀರು ಇದೆ. 4 –5 pumpset ಹಾಕಿದ್ದೇನೆ. 12 ಗಂಟೆ power ನನಗೆ ಸಿಕ್ಕುವುದಿಲ್ಲವೆ ? ವರ್ಷಕ್ಕೆ 80 ಸಾವಿರ ರೂಪಾಯಿ ಕಂತನ್ನು ಕಟ್ಟಬೇಕು. ಇವರಿಗೆ ನಮ್ಮ ಕಷ್ಟ ಏನು ಗೊತ್ತಾಗುತ್ತದೆ. ಈ ರಾಗಿ ಬತ್ತ ಬೆಳೆಯುವುದೇ ಬೇಡ, ಎಲ್ಲಾ ಗಿಡ ಕಟ್ಟೋಣ. ಎಷ್ಟು ಬಂದರೆ ಅಷ್ಟೇ ಸಾಕು ಎನಿಸುತ್ತದೆ. ಈ ಪರಿಸ್ಥಿತಿ ಬಂದರೆ ನಮ್ಮ ರಾಜ್ಯದ ಆಹಾರದ ಉತ್ಪಾದನೆ ಯಾವ ಮಟ್ಟಕ್ಕೆ ಬರಬಹುದೆಂದು ಸ್ವಲ್ಪ ಯೋಚನೆ ಮಾಡಿ. ಈ 150 ಕೋಟಿ ರೂಪಾಯಿ ಏನು ಜಾಸ್ತಿ ಅಲ್ಲ. ನನಗೆ ಗೊತ್ತಿದೆ. ಈಗ NABARD restriction ಅವರದು ನಿಮಗೆ ಸ್ವಲ್ಪ ಇದೆ. ನಾನು 15–20 ವರ್ಷಗಳಿಂದ ಸಹಕಾರ ರಂಗದಲ್ಲಿ ಇದ್ದುದರಿಂದ ಅವರೆಲ್ಲಾ ನನಗೆ ಸ್ವಲ್ಪ ಪರಿಚಯ ಇತ್ತು. ಹೋದೆ ಕುಳಿತುಕೊಂಡೆ, convince ಮಾಡಿದೆ, ನಾಲ್ಕೈದು ವರ್ಷಗಳಿಂದ ಬರ ಇತ್ತು, ನಿಮ್ಮ Secretary ಅವತ್ತು Registrar ಆಗಿದ್ದರು. ನಾನು ಬಾಂಬೆಗೆ ಹೋಗಿ ಅವರ ಜೊತೆಯಲ್ಲಿ ಎರಡು ಮೂರು ದಿವಸ ಕುಳಿತು ಚರ್ಚೆ ಮಾಡಿ, ಮಾಡಿಸಿಕೊಂಡು ಬಂದೆ. ಯಾರಾದರೂ ಹಾಗೆ ಯೋಚನೆ ಮಾಡಿದ್ದೀರಿ ಏನು ? ನಿಮ್ಮ ಹಿಂದಿನ ಮಂತ್ರಿಗಳು ಬೆಳಗ್ಗೆ ಇಂದ ಸಾಯಂಕಾಲದವರೆಗೆ ಬಂದು convince ಮಾಡುವುದೇ ಆ ಕೆಲಸ ಆಗಿತ್ತು, ಅವನನ್ನು ತೆಗೆದು ಇವನನ್ನು ಹಾಕುವುದು ಇವನನ್ನು ತೆಗೆದು ಅವನನ್ನು ಹಾಕುವುದು. ಒಂದು improvement ಆಗಲಿಲ್ಲ. ಈ 3 ವರ್ಷದಲ್ಲಿ ನೀವು ಸಾಧಿಸಿದ್ದು ಎಂದರೆ ಹಾಳು ಮಾಡಿದ್ದುದು. ಸಹಕಾರಿ ಬೇಡಿಕೆ ಬಂದಾಗ ಅದರ ಬಗ್ಗೆ ಮಾತನಾಡುತ್ತೇನೆ. ನೀವು ಏನಾದರೂ ಮಾಡಿ ಅವರಿಗೆ convince ಮಾಡಿ. ಇವತ್ತು ನಿಮ್ಮದೇ ಸರ್ಕಾರ ಅಲ್ಲಿದೆ. ಹೌದು IMF restriction ಇದೆ. Subsidy ಕೊಡಬಾರದೆಂದು T.V.ಗೆ ಕಡಿಮೆ ಮಾಡಿದ್ದೀರಲ್ಲಾ ಅದಕ್ಕೆ IMF ಅವರ restriction ಇಲ್ಲವೇ ? lipstic ಗೆ ಕಡಿಮೆ ಮಾಡಿದರಲ್ಲಾ ಇದಕ್ಕೆ restriction ಇಲ್ಲವಾ face powder, Car, Colour T.V ಗಳಿಗೆ ಕಡಿಮೆ ಮಾಡಿದರಲ್ಲಾ ? ಇದೆಲ್ಲಾ ಬಡವರು ಉಪಯೋಗಿಸುವುದು ನೋಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ನಾಳೆ ಚುನಾವಣೆ ಬರುತ್ತದೆ ನೋಡಿ. ಅದಕ್ಕೆ ಇವರು ತಯಾರಿ ಮಾಡಿಕೊಳ್ಳುತ್ತಿದ್ದಾರೆ

ಶ್ರೀ ಆರ್.ಎಲ್. ಜಾಲಪ್ಪ:– ತಮ್ಮ ನಡತೆಯೇ ಬೇರೆಯಾಗಿದೆ, ಚಿಂತನೆಯೇ ಬೇರೆಯಾಗಿದೆ.

ಇದರಿಂದ ರಾಷ್ಟ್ರ ಉದ್ಧಾರವಾಗುವುದಿಲ್ಲ. ಮಾನ್ಯ ಬೈರೇಗೌಡರು ಹೇಳಿದರು. ಸಣ್ಣ ರೈತರಿಗೆ ಎಷ್ಟು ಕೊಟ್ಟಿದ್ದೀರಿ, ಪರಿಶಿಷ್ಟ ಜಾತಿಯವರಿಗೆ ಎಷ್ಟು ಕೊಟ್ಟಿದ್ದೀರಿ ನನಗೆ ಗೊತ್ತಿದ್ದ ಹಾಗೆ ರಾಜ್ಯ co-operative banks ಆಗಲೀ, ಬೇರೆ ಇತರೆ ಜಿಲ್ಲಾ bank ಆಗಲಿ eligibility ಇದ್ದು ಅರ್ಜಿ ಹಾಕಿದವರಿಗೆ ಯಾರಿಗೂ ಇಲ್ಲವೆಂದು ಹೇಳಿಲ್ಲ. ನಾನೂ District Bank ಅಧ್ಯಕ್ಷನಾಗಿದ್ದೆ. ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿದ್ದೆ. ಜಿಲ್ಲಾ ಬ್ಯಾಂಕ್‌ನಲ್ಲಿ ನಾನು ಅಧಿಕಾರಕ್ಕೆ ಬಂದಾಗ ಬಹಳ ಕಷ್ಟವಾಗಿತ್ತು. 2 ವರ್ಷ ಪಡಬಾರದ ಹಿಂಸೆ ಪಟ್ಟು ಅದನ್ನು ಇಂಪ್ರೂವ್ ಮಾಡಿದೆ. ನಾವು, ಈ ಗೆದ್ದಲು ಹುಳ ಹುತ್ತವನ್ನು ಕಟ್ಟಿ ಹಾವಿನ ಕೈಗೆ ಕೊಟ್ಟ ಹಾಗೆ ಕೊಟ್ಟು ಒಬ್ಬ president ಕೈಗೆ ಕೊಟ್ಟು ಅದನ್ನು ಹಾಳು ಮಾಡಲಾಯಿತು. ನಿಮ್ಮ ಸರ್ಕಾರವೂ ಅದಕ್ಕೆ ಬೇಕಾದಷ್ಟು ಸಹಾಯ ಮಾಡಿತು. 5 ಕೋಟಿ ಅಲ್ಲ, 23 ಕೋಟಿ 4 ದಿವಸಕ್ಕೆ ಒಂದೊಂದು ಕೋಟಿ ಸ್ಯಾಂಕ್ಷನ್ ಮಾಡಿದ್ದಾರೆ. ಇಲ್ಲಿಂದಲೇ ಡೈರೆಕ್ಷನ್ ತೆಗೆದುಕೊಂಡು ಹೋಗಿ 24 ಗಂಟೆ ಒಳಗೆ 10 ಕೋಟಿ ರೂಪಾಯಿ ತೆಗೆದುಕೊಂಡಿದ್ದಾರೆ. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಏನೋ 5% concession ಕೊಡಿ ಎಂದರೆ ಇದಕ್ಕೆ ಮಾನ್ಯಮಂತ್ರಿಗಳು ಯೋಚನೆ ಮಾಡುತ್ತೇನೆಂದು ಹೇಳುತ್ತಾರೆ. agricultural productionಗೆ incentive ಎಂದು 5 per cent ಕೊಡುತ್ತಿದ್ದರು ಅಧ್ಯಕ್ಷರೆ. ಈಗ ಏನು ಮಾಡಿದ್ದಾರೆ? ಬರೀ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಕೊಡುತ್ತಾರಂತೆ. ಬೇರೆ ರೈತರಿಗೆ ಏನು ಲುಕ್ಸಾನು ಆಗುವುದಿಲ್ಲವೇನು? ನಾವು ಬಡ್ಡಿ ಮನ್ನಾ ಮಾಡುವಾಗ ಸಣ್ಣ ಮತ್ತು ಅತಿ ಸಣ್ಣ ರೈತರು ಎಂದು ನೋಡಿದವೇ? ಈಗ ಆದರೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಕೊಡುತ್ತಾರಂತೆ. ದೊಡ್ಡವರಿಗೆ ಕೊಡುವುದಿಲ್ಲವಂತೆ. ದೊಡ್ಡವರು production ಮಾಡುತ್ತಾರಾ ದುಡ್ಡನ್ನು? ಈ ರೀತಿ differntiate ಮಾಡುವುದಕ್ಕೆ ಹೋಗಬೇಡಿ. ನೀವು ಹೋಗಿ ದಯಮಾಡಿ ನಬಾರ್ಡ್‌ನವರನ್ನು ಕನ್‌ವಿನ್ಸ್ ಮಾಡಿ, ರಿಸರ್ವ್ ಬ್ಯಾಂಕ್‌ನವರ ಜೊತೆ ಮಾತನಾಡಿ. ಇಷ್ಟೊಂದು ಕೋಟಿ ರೂಪಾಯಿ, ಸಾವಿರಾರು ಕೋಟಿ ರೂಪಾಯಿ ಏನಾಯಿತು? ತಮ್ಮ ರಿಸರ್ವ್ ಬ್ಯಾಂಕಿನವರು ಏನು ಮಾಡುತ್ತಿದ್ದರು? ನಿಮ್ಮ ಪ್ರಧಾನ ಮಂತ್ರಿಗಳು ಏನು ಮಾಡುತ್ತಿದ್ದರು? ನಿಮ್ಮ ವಿತ್ತ ಮಂತ್ರಿಗಳು ಏನು ಮಾಡುತ್ತಿದ್ದರು? ನ್ಯಾಯವಾಗಿ ತಪ್ಪು ಮಾಡಿದವರನ್ನು ಮನೆಗೆ ಕಳಿಸಬೇಕಿತ್ತು.

ಶ್ರೀ ಸಿ. ಬೈರೇಗೌಡ:– ನಾಲ್ಕು ಸಾವಿರ ಕೋಟಿ ರೂಪಾಯಿಗೆ ನಬಾರ್ಡ್ ರಿಸ್ಟ್ರಿಕ್ಷನ್ಸ್ ಇಲ್ಲ. ಇವರಿಗೆ ಬಿಟ್ಟರು. ರೈತರು ಇಡೀ ರಾಷ್ಟ್ರದಲ್ಲಿ ಕಷ್ಟಪಟ್ಟು ಬೆವರು ಹರಿಸಿ ದುಡಿಯುತ್ತಾರೆ, ಅವರಿಗೆ ಕನ್ಸೇಷನ್ ಇಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಗೊಬ್ಬರದ ಬೆಲೆಯಲ್ಲಿ 5 ರೂಪಾಯಿ ಕನ್ಸೇಷನ್ ಕೊಡಿ ಎಂದರೆ ಕೊಡುವುದಿಲ್ಲ. ಗೋಧಿ ಬೆಲೆ ಜಾಸ್ತಿ ಆಯಿತು. ನೀವು ಹೇಳುತ್ತೀರಿ ಸಬ್ಸಿಡೈಸ್ ಮಾಡುತ್ತೇವೆ ಎಂದು. ಯಾರಿಗೆ ಸಬ್ಸಿಡೈಸ್ ಮಾಡುವುದು? ಯಾರೋ ನಾಲ್ಕು ಜನರ ಹತ್ತಿರ ಪ್ರೊಕ್ಯೂರ್‌ಮೆಂಟ್ ಮಾಡಿಕೊಂಡು ಅವರಿಗೆ ಕೊಡುತ್ತೀರಿ? ಟ್ರಾಕ್ಟರ್‌ಗೆ ಕಡಿಮೆ ಮಾಡಿದ್ದೇವೆಂದು ಹೇಳುತ್ತೀರಿ ಎಷ್ಟು ಜನ ನಮ್ಮ ದೇಶದಲ್ಲಿ ರೈತರು ಟ್ರಾಕ್ಟರ್ ಕೊಂಡುಕೊಂಡಿದ್ದಾರೆ? ಗೊಬ್ಬರದ ಬೆಲೆ ಜಾಸ್ತಿ ಆಯಿತು ಎಂದರೆ ಇಲ್ಲ ನಾವು ಸಹಾಯ ಧನ ಕೊಡುತ್ತೇವೆ. ಪ್ರೊಕ್ಯೂರ್ ಮಾಡುವಾಗ ಅದು ಸಬ್ಸಿಡೈಸ್ಡ್ ಎಂದು ಹೇಳುತ್ತೀರಿ. ನಾವೇನು ಈಡಿಯಟ್ಸೇ? PL 480 Market ಹಿಂದೆ ಏನು ನೀವು ಭಿಕ್ಷೆ ಎತ್ತುತ್ತಿದ್ದಿರಲ್ಲ, ಅಮೆರಿಕಾ ದೇಶದಿಂದ ಮತ್ತು ಬೇರೆ ಬೇರೆ ದೇಶದಿಂದ ನೀವು ಇದೇ ಪಾಲಿಸಿಯನ್ನು ಮುಂದುವರಿಸಿಕೊಂಡು ಹೋಗುವುದಾದರೆ ಕಡೆಗೆ ರೈತನಿಗೆ ನೀವು ಕೊಡುವುದು 420ನೇ. ಹುಷಾರಾಗಿರಿ, ಹುಷಾರಾಗಿದ್ದುಕೊಂಡು ಮೊದಲು ಅವನಿಗೆ ಏನು ಮುಖ್ಯವಾಗಿ ಬೇಕು ಅದನ್ನು ವ್ಯವಸ್ಥೆ ಮಾಡಿ. ಪ್ರೊ: ನಂಜುಂಡಸ್ವಾಮಿಯವರು ಹೇಳಿದಂತೆ ನಾವೇನು ಭಿಕ್ಷೆ ಎತ್ತಬೇಕಾಗಿಲ್ಲ ನಿಮ್ಮ ಹತ್ತಿರ. ನಮಗೆ ಬರುವ ಹಕ್ಕು ಇದನ್ನು ಬಿಟ್ಟು ಕೊಡಿ ಸ್ವಲ್ಪ ಎಂದು ಹೇಳುತ್ತಿದ್ದೇವೆ. ನೀವು ಬೇರೆ

ಯಾವುದಕ್ಕೋ ಖರ್ಚು ಮಾಡುತ್ತಿದ್ದೀರಿ. ಇದನ್ನು ಸ್ವಲ್ಪ ಕಡಿಮೆ ಮಾಡಿ ಎಂದು ಕೇಳುತ್ತಿದ್ದೇವೆಯೇ ವಿನಹ ನಾವು ನಿಮಗೇನು ಭಿಕ್ಷೆ ಕೇಳುತ್ತಿಲ್ಲ. ದಯಮಾಡಿ ಇದನ್ನು ಒಂದು ವರ್ಷಕ್ಕೆ ಆದರೂ ಎಕ್ಸ್‌ಟೆಂಡ್ ಮಾಡಿ. ಸಹಕಾರಿ ಸಂಘಗಳು ಸ್ವಲ್ಪ ಅಭಿವೃದ್ಧಿ ಸ್ಥಿತಿಗೆ ಬರುವುದಕ್ಕೆ ವ್ಯವಸ್ಥೆ ಆಗಬೇಕು. ಮತ್ತು ರೈತರು ಏನು ಕಷ್ಟದಲ್ಲಿ ಇದ್ದಾರೆ ಅವರಿಗೆ ಸ್ವಲ್ಪ ರಿಲೀಫ್ ಸಿಕ್ಕಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಕೇಳುತ್ತಿದ್ದೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ನನ್ನದೊಂದು ಖಾಸಗಿ ಮಸೂದೆ ಇದೆ ಅದನ್ನು ಮಂಡಿಸುವುದಕ್ಕೆ ಯಾವಾಗ ಅವಕಾಶ ಕೊಡುತ್ತೀರಿ.

ಅಧ್ಯಕ್ಷರು:- ನಂತರ ಕೊಡುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ:- ರೈತರ ಸಮಸ್ಯೆ ಮಟ್ಟಿಗೆ ಹೇಳುವುದಾದರೆ..

ಶ್ರೀ ಬಿ.ಹೆಚ್. ಬನ್ನಿಕೋಡ್:- ನಮಗೆ ಅವಕಾಶ ಇದೆಯೇ ಇಲ್ಲವೇ ?

ಅಧ್ಯಕ್ಷರು:- ಎರಡು ಗಂಟೆಗೆ ಮುಕ್ತಾಯವಾಗಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್:- ನಮಗೂ ಮಾತನಾಡುವುದಕ್ಕೆ ಅವಕಾಶ ಸಿಗಬೇಕು.

ಅಧ್ಯಕ್ಷರು:- ಇನ್ನೂ ನಾಲ್ಕು ಜನ ಮಾತನಾಡಲು ಇದ್ದಾರೆ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಅದರಲ್ಲಿ ನಮ್ಮ ಹೆಸರು ಇದೆಯಾ ?

ಅಧ್ಯಕ್ಷರು:- ತಮ್ಮದೂ ಇದೆ, ತಾವು ಪತ್ರ ಕಳಿಸಿದ್ದೀರಿ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮೊದಲು ನಾನು ಸಹಿ ಹಾಕಿದ್ದೇನೆ.

ಶ್ರೀ ಆರ್. ದಯಾನಂದ ರಾವ್:- ಮಾನ್ಯ ಸದಸ್ಯರು ಶುರು ಮಾಡಿದ್ದಾರೆ.

† ಶ್ರೀ ವಿನಯಕುಮಾರ್ ಸೊರಕೆ:- ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ಸ್ನೇಹಿತರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಾಮುಖ್ಯವಾಗಿ ರೈತರ ಸಾಲ ಮನ್ನಾ ಮಟ್ಟಿಗೆ ಇಲ್ಲಿ ಪ್ರಸ್ತಾಪ ಆಗಿದೆ. ಹೆಚ್ಚಿನ ಅಂಶ 1989ನೇ ಇಸವಿ ಶಾಸಕರಾಗಿ ಆಯ್ಕೆ ಆಗಿ ಬಂದಂತಹ ಮರು ದಿವಸವೇ ಬಿಜೆಪಿಯ ಮುಖಂಡರಾದ ಶ್ರೀಮಾನ್ ಯಡಿಯೂರಪ್ಪನವರು ಇಲ್ಲಿ ಧರಣಿ ಕೂಡ ಪ್ರಾರಂಭ ಮಾಡಿದ್ದಾರೆ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವೇನಾದರೂ ರಾಜ್ಯ ಸರ್ಕಾರದ ಹಂತದಲ್ಲಿ ನಮ್ಮ ಸರ್ಕಾರ ಬಂದರೆ ನಾವು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತರುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆ. ಆಗಿನ ನಮ್ಮ ಕೇಂದ್ರ ಸರ್ಕಾರದ ಚುನಾವಣಾ ಪ್ರಣಾಳಿಕೆಯಲ್ಲಿ ಸಹ ಸಾಲ ಮನ್ನಾದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆದರೆ ಅವತ್ತು ಕೇಂದ್ರ ಸರ್ಕಾರದಲ್ಲಿ ಶ್ರೀಮಾನ್ ವಿ.ಪಿ.ಸಿಂಗ್ ಅವರ ಸರ್ಕಾರ ಬಂದಂತಹ ಸಂದರ್ಭದಲ್ಲಿ ಈ ಒಂದು ಅಧಿವೇಶನದಲ್ಲಿ ಸಾಕಷ್ಟು ಚರ್ಚೆ ನಡೆದ ನಂತರ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಕೂಡ ಇವತ್ತು ರಾಜ್ಯ ಸರ್ಕಾರಕ್ಕೆ ಕೊಡಬೇಕಾದಂತಹ ಪರ್ಸೆಂಟೇಜ್ ಎಷ್ಟು ಇದೆ ಅದನ್ನು ಕೊಡುವಂತಹ ರೀತಿಯಲ್ಲಿ ತೀರ್ಮಾನ ಕೂಡ ಕೈಗೊಂಡಿದ್ದೇವೆ. ಅದಾದ ನಂತರ ಹೆಚ್ಚಿನ ಅಂಶ ಅವತ್ತು ವಿ.ಪಿ. ಸಿಂಗ್ ಅವರ ಸರ್ಕಾರ ಬಿಜೆಪಿ ಬೆಂಬಲದಿಂದ ಇದ್ದಂತಹ ಸಂದರ್ಭದಲ್ಲಿ ಯಾವುದೇ ರೀತಿಯ ತೀರ್ಮಾನ ಕೈಗೊಳ್ಳುವುದಕ್ಕೆ ಬದ್ಧರಾಗದಂತಹ ಸಂದರ್ಭದಲ್ಲಿ ಇವತ್ತು ಹೆಚ್ಚಿನ ಅಂಶ ಸಾಲ ಮನ್ನಾ ರೈತರ ಸಮಸ್ಯೆ ಅಲ್ಲ. ಅದನ್ನು ರಾಜಕೀಯವಾಗಿ ಪರಿಗಣಿಸುವ ಕೆಲಸ ಕಾರ್ಯ ಇವತ್ತು ರಾಜ್ಯದಲ್ಲಿ ನಡೆಯಿತು. ಹೆಚ್ಚಿನ ಚರ್ಚೆ ಅಸೆಂಬ್ಲಿಯಲ್ಲಿ ಮಾಡಿದರು. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯೂ

ಕೂಡ ಬಹಿರಂಗವಾದ ಭಾಷಣದ ಮುಖಾಂತರ ಯಾರೂ ಕೂಡ ಸಾಲ ಕಟ್ಟಬೇಡಿ ಎನ್ನುವ ರೀತಿಯಲ್ಲಿ ಆಯಿತು. ಈ ರೀತಿಯ ಪ್ರಚಾರ ಕಾರ್ಯಕ್ರಮಗಳು ನಡೆದಂತಹ ಸಂದರ್ಭದಲ್ಲಿ ರೈತರು ಕೂಡ ಇಂತಹ ತಪ್ಪು ಅಭಿಪ್ರಾಯದಲ್ಲಿ ಹೋಗುವುದಕ್ಕೆ ಅವಕಾಶ ಆಯಿತು. ಶ್ರೀಮಾನ್ ಜನಾರ್ದನ ಪೂಜಾರಿ ಅವರ ಸಾಲ ಕೊಡುವ ಕಾರ್ಯಕ್ರಮದ ಮಟ್ಟಿಗೆ ಕೂಡ. ಅವತ್ತು ಸಾಲ ಮನ್ನಾ ಕಾರ್ಯಕ್ರಮವನ್ನು ನಡೆಸಿದಂತಹ ಸಂದರ್ಭದಲ್ಲಿ ಯಾರಿಗೂ ಸಹಿತ ಸಾಲವನ್ನು ಹಿಂದಕ್ಕೆ ಕೊಡಬೇಡಿ ಎನ್ನುವ ರೀತಿಯಲ್ಲಿ ಪ್ರಸ್ತಾಪ ಮಾಡಿಲ್ಲ, ಆದರೆ ಕಳೆದ ಪಾರ್ಲಿಮೆಂಟ್ ಚುನಾವಣೆಯಲ್ಲಿ ಇವತ್ತು ಎಲ್ಲಾ ಸಾಲಗಳನ್ನು ಮನ್ನ ಮಾಡುತ್ತೇವೆ ಎನ್ನುವ ವಾಗ್ದಾನವನ್ನು ಕೊಟ್ಟರು. ಚುನಾವಣೆಯಲ್ಲಿ ಗೆಲ್ಲುವಂತಹ ಪ್ರಯತ್ನ ನಡೆಯಿತು. ಇವತ್ತು ಪರಿಸ್ಥಿತಿ ಏನು ಆಗಿದೆ ಎಂದರೆ ನಮ್ಮಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆ ಅವರ ಸರ್ಕಾರ ಇರುವಂತಹ ಸಂದರ್ಭದಲ್ಲಿ ಬಡ್ಡಿ ರಿಯಾಯಿತಿ ಕಾರ್ಯಕ್ರಮ ಮಾಡಿದರು. ಹೆಚ್ಚಿನ ಅಂಶ ನಮ್ಮ ಹಣಕಾಸಿನ ಸಂಸ್ಥೆಗಳು ಏನು ಆಗಿವೆ ಎಂದರೆ ಈ ಬಡ್ಡಿ ರಿಯಾಯಿತಿ ಘೋಷಣೆ ಮಾಡಿದ ನಂತರ ಹಣಕಾಸಿನ ಸಂಸ್ಥೆಗಳಿಗೆ ಹಣ ಬರದ ರೀತಿಯಲ್ಲಿ ಆಗಿದೆ. ಎಲ್ಲಾ ಸಹಕಾರಿ ಸಂಸ್ಥೆಗಳಲ್ಲಿ ಬಡ್ಡಿ ರಿಯಾಯಿತಿಯಿಂದಾಗಿ ಒಂದು ರೀತಿಯಲ್ಲಿ ಕುಸಿತ ಆಗುವಂತಹ ಸಂದರ್ಭಗಳನ್ನು ನಾವು ಕಾಣುತ್ತಿದ್ದೇವೆ. ಹಣ ತಲುಪದೆ ಇದ್ದ ದಿಸೆಯಲ್ಲಿ ನಮ್ಮ ಹಳ್ಳಿಗಳಲ್ಲಿ ರಾಷ್ಟ್ರೀಕೃತ ಬ್ಯಾಂಕಿನ ಸಾಲವನ್ನು ಕಟ್ಟುವುದಕ್ಕೆ ಹೋದಂತಹ ರೈತರನ್ನು ಕೂಡ ಕೆಲವೊಂದು ರಾಜಕೀಯ ಉದ್ದೇಶದಿಂದ ಮನ್ನಾ ಆಗುತ್ತದೆ ಏಕೆ ಕಟ್ಟುತ್ತೀಯ ಎನ್ನುವ ರೀತಿಯಲ್ಲಿ ಹೇಳಿ ಅವರನ್ನು ಹಿಂದಕ್ಕೆ ಕಳಿಸಿದರು. ಇವತ್ತು ಅವರ ಮನೆ ಜಪ್ತಿ ಮಾಡುವಂತಹ ಒಂದು ಪರಿಸ್ಥಿತಿ ಬಂದಿದೆ. ಬಡ್ಡಿಗೆ ಬಡ್ಡಿ ಸೇರಿ ಇವತ್ತು ಈ ಸಾಲವನ್ನು ಕಟ್ಟುವುದಕ್ಕೆ ಸಾಧ್ಯ ಆಗದೇ ಇರುವಂತಹ ಪರಿಸ್ಥಿತಿ ಬಂದಿದೆ. 100ಕ್ಕೆ 99 ಪರ್ಸೆಂಟ್ ಶಾಸಕರೂ ಕೂಡ ರೈತ ಕುಟುಂಬದಿಂದ ಬಂದಂತಹ ಶಾಸಕರು ಇದ್ದೇವೆ. ಇವತ್ತು 100ಕ್ಕೆ 100 ಪರ್ಸೆಂಟ್ ಎಂದರೂ ತಪ್ಪಾಗಲಿಕ್ಕಿಲ್ಲ. ರೈತರ ಸವಲತ್ತನ್ನು ಕೊಡುವುದಕ್ಕೆ ಆಗಲಿ ನೀರನ್ನು ಕೊಡುವ ಮಟ್ಟಿಗೆ ಆಗಲಿ ವಿದ್ಯುತ್ ಕೊಡುವುದಕ್ಕೆ ಆಗಲಿ ಅದರ ಮಟ್ಟಿಗೆ ಸಾಕಷ್ಟು ರೀತಿಯಲ್ಲಿ ಸರ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳುವುದಕ್ಕೆ ಸಂಪೂರ್ಣವಾದ ಬೆಂಬಲ ಇವತ್ತು ಈ ಒಂದು ಸದನದಲ್ಲಿ ಇದೆ.

ಆದರೆ ರಾಜಕೀಯ ದುರುದ್ದೇಶದಿಂದ ಈ ರೈತರನ್ನು ಬಳಕೆ ಮಾಡಿಕೊಳ್ಳುವುದು ಸರಿಯಲ್ಲ. ರೈತರಿಗೆ ಇರುವಂತಹ ತೊಂದರೆ ಏನೆಂದರೆ ಬಲವಾದ ಸಂಘಟನೆ ಅವರಲ್ಲಿಲ್ಲ. ಅವರು ಕೇಳಬೇಕು ತಮ್ಮ ಹಕ್ಕನ್ನು. ಅದನ್ನು ರಾಜಕೀಯವಾಗಿ ನಾವು ಬಳಕೆ ಮಾಡುವುದರ ಮುಖಾಂತರ ಆ ಶಕ್ತಿಯನ್ನು ಮರ್ದನೆ ಮಾಡುವಂತಹ ಕೆಲಸವನ್ನು ಇಲ್ಲಿ ಮಾಡುತ್ತಿದ್ದೇವೆ. ಇಲ್ಲಿ ಶ್ರೀಮಾನ್ ನಂಜುಂಡಸ್ವಾಮಿ ಅವರು ರೈತರ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದ್ದಾರೆ. ಶ್ರೀಮಾನ್ ಯಡಿಯೂರಪ್ಪನವರೂ ಪ್ರಸ್ತಾಪ ಮಾಡುತ್ತಿದ್ದಾರೆ. ನನಗೆ ಯಾರು ನಿಜವಾದ ರೈತರ ಪ್ರತಿನಿಧಿ ಎಂದು ಅನುಮಾನ ಬರುತ್ತದೆ. ಸಹಕಾರ ಸಂಸ್ಥೆಗಳು ಸಂಪೂರ್ಣವಾಗಿ ಮುಳುಗಿ ಹೋಗುವ ಸ್ಥಿತಿಯಲ್ಲಿವೆ. 50–100 ವರ್ಷಗಳಿಂದ ಇದ್ದಂತಹ ಸಹಕಾರಿ ಸಂಸ್ಥೆಗಳು ಮುಳುಗಿ ಹೋಗುವಂತಹ ಸ್ಥಿತಿಯನ್ನು ನಾವು ಕಾಣುತ್ತೇವೆ. ಅದೇ ದಿಸೆಯಲ್ಲಿ ಸಹಕಾರಿ ಸಂಸ್ಥೆಗಳು ಮುಳುಗಿ ಹೋದರೆ ಹಿಂದೆ ಇದ್ದಂತಹ ಬಡ್ಡಿದಾರ, ಇವತ್ತು ಸೇಠ್ ಎಂದು ಏನು ಇದ್ದಾರೆ, 100ಕ್ಕೆ 100 ಪರ್ಸೆಂಟ್ ಬಡ್ಡಿ ಕೊಟ್ಟು ಸಾಲ ಪಡೆದುಕೊಳ್ಳಬೇಕು ಎನ್ನುವಂತಹ ವ್ಯವಸ್ಥೆ ಬರಬೇಕು ಎನ್ನುವಂತಹ ಉದ್ದೇಶ ಬಿಜೆಪಿ ಮಿತ್ರರಿಗೆ ಇದೆ ಎನ್ನುವ ರೀತಿಯಲ್ಲಿ ಹೆಚ್ಚಿನ ಅಂಶ ಪ್ರಸ್ತಾಪ ಇಟ್ಟಿದ್ದಾರೆ. ಸರ್ಕಾರ ಕೂಡ ಇದರ ಮಟ್ಟಿಗೆ ಗಮನ ಕೊಡಬೇಕು. ರೈತರ ಅಭ್ಯುದಯಕ್ಕೆ ಗಮನ ಕೊಡಬೇಕು. ಒಂದು ವಿಪತ್ತಿನಲ್ಲಿ ರೈತ ಸಿಕ್ಕಿ ಹೋಗಿದ್ದಾನೆ. ಯಾವುದೋ ಒಂದು ರೀತಿಯ ಪ್ರಚಾರಕ್ಕೆ ಶಾಮೀಲಾಗಿ ಅದನ್ನು ನಂಬಿ ಬಡ್ಡಿ ಮನ್ನಾ ಮಾಡಬೇಕು, ಸಾಲ ಮನ್ನಾ ಮಾಡಬೇಕು ಎನ್ನುವ ಪರಿಸ್ಥಿತಿಯಲ್ಲಿ ಸಿಕ್ಕಿ ಹೋಗಿದ್ದಾನೆ. 5 ಪರ್ಸೆಂಟ್ ಬಡ್ಡಿ ರಿಯಾಯಿತಿಯನ್ನು ಸನ್ಮಾನ್ಯ ಬಂಗಾರಪ್ಪನವರು ಕೊಟ್ಟಂತಹ ಸಂದರ್ಭದಲ್ಲಿ ಸಾಕಷ್ಟು ರೈತರು ಸಾಲವನ್ನು ಕಟ್ಟಿದರು.

ಇವತ್ತು ಅದೇ ರೀತಿಯಲ್ಲಿ ಬಡ್ಡಿ ರಿಯಾಯಿತಿ ಮಟ್ಟಿಗೆ ಕೂಡ...

ಅಧ್ಯಕ್ಷರು:- ಮುಗಿಸಿ....

ಶ್ರೀ ವಿನಯಕುಮಾರ್ ಸೊರಕೆ:- ಸುಸ್ತಿ ಬಡ್ಡಿ ರಿಯಾಯಿತಿ ಮಾಡಿ ಬಡ್ಡಿ ರಿಯಾಯಿತಿ ಮಾಡಿ ಕೊಟ್ಟರೆ ರೈತರಿಗೆ ಹೆಚ್ಚಿನ ಪ್ರಯೋಜನ ಆಗಬಹುದು ಎನ್ನುವ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಮಂಡನೆ ಮಾಡುತ್ತಾ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಳ):- ಮಾನ್ಯ ಅಧ್ಯಕ್ಷರೆ, ನಮ್ಮ ದೇಶದಲ್ಲಿ ನಮ್ಮ ನಾಡಿನಲ್ಲಿ ರೈತರೇ ಬಹುಸಂಖ್ಯೆಯಲ್ಲಿರತಕ್ಕವರು. ನಮ್ಮ ನಾಡಿನಲ್ಲಿ 100ಕ್ಕೆ 68ರಷ್ಟು ದಾಶಾಂಶ ರೈತರು ಇರುವಾಗ ಅವರ ಅಭ್ಯುದಯದ ಬಗ್ಗೆ ಅವರ ಏಳಿತಿಗೆ ನಾವು ಪ್ರಯತ್ನ ಮಾಡುವುದು ಬಹಳ ಪ್ರಾಮುಖ್ಯವಾದುದು. ರೈತರು ಇಲ್ಲದಿದ್ದರೆ ಈ ದೇಶ ಉಳಿಯುವುದಿಲ್ಲ, ಈ ನಾಡೂ ಉಳಿಯುವುದಿಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ 1962ನೇ ಇಸವಿಯಲ್ಲಿ ಚೈನಾ ದೇಶ ಯುದ್ಧ ಮಾಡಿದಾಗ, 1965ನೇ ಇಸವಿಯಲ್ಲಿ ಚೈನಾ ಪಾಕಿಸ್ಥಾನ ಯುದ್ಧ ಮಾಡಿದಾಗ 1971ನೇ ಇಸವಿಯಲ್ಲಿ ಪಾಕಿಸ್ಥಾನ ನಮ್ಮ ದೇಶದ ಮೇಲೆ ಯುದ್ಧ ಮಾಡಿತು. ಯುದ್ಧ ಮಾಡಿದಂತಹ ಸಂದರ್ಭದಲ್ಲಿ ನಮ್ಮ ದೇಶದಲ್ಲಿರತಕ್ಕ ರೈತರು ಒಳ್ಳೆಯ ರೀತಿಯಲ್ಲಿ ಗೋಧಿಯನ್ನು ಬೆಳೆಸಿ, ಒಳ್ಳೆಯ ರೀತಿಯಲ್ಲಿ ರಾಗಿಯನ್ನು ಬೆಳೆಸಿ ಒಳ್ಳೆಯ ರೀತಿಯಲ್ಲಿ ಅಕ್ಕಿಯನ್ನು ಬೆಳೆಸಿ, ನಮ್ಮ ಯೋಧರಿಗೆ ಕಳಿಸದೇ ಇದ್ದಿದ್ದರೆ, ಆ ಯೋಧರು ಯುದ್ಧ ಮಾಡಲಿಕ್ಕೆ ಸಾಧ್ಯವೇ ಇರಲಿಲ್ಲ

ಆದ್ದರಿಂದ ಈ ದೇಶ ಉಳಿಯಲಿಕ್ಕೆ ಯೋಧರು ಎಷ್ಟು ಮುಖ್ಯವೋ ರೈತರು ಅಷ್ಟೇ ಮುಖ್ಯ. ಅದೇ ರೀತಿ ನಮ್ಮ ಊರಿನಲ್ಲಿ ರೈತರು ಸರಿಯಾದ ರೀತಿಯಲ್ಲಿ ಬೆಳೆ ಬೆಳೆಯದಿದ್ದರೆ ಯಾರಿಗೂ ಬದುಕಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ರೈತರನ್ನು ಉಪಯೋಗಿಸಿ ನಿಮ್ಮನ್ನು ಒಳ್ಳೆದು ಮಾಡುತ್ತೇವೆಂದು ಹೇಳಿ ಸತ್ಯಕ್ಕೆ ದೂರವಾದ ಪ್ರಚಾರದಿಂದ ಅವರನ್ನು ಮಂಕು ಮಾಡಿ ಮರಳು ಮಾಡಿ, ಅವರನ್ನು ಮೋಸ ಮಾಡುವುದನ್ನು ಬಿಟ್ಟು ನಿಜವಾದ ರೈತರ ಬಗ್ಗೆ ಕಳಕಳಿಯನ್ನು ಹೊಂದುವುದು ಬಹಳ ಪ್ರಾಮುಖ್ಯವಾದುದು. ಶ್ರೀಯುತ ಜನಾರ್ದನ ಪೂಜಾರಿಯವರು ಸಾಲ ಮೇಳ ಮಾಡಿದಾಗ ಎಷ್ಟು ಬಡಜನರಿಗೆ ಉಪಕಾರವಾಗಿದೆ ಎಂದು ಅನೇಕರಿಗೆ ಗೊತ್ತಿದೆ. ನಮ್ಮ ಮಿತ್ರರಾದಂಥ ವಾಟಾಳ್ ನಾಗರಾಜ್ ಹೇಳಿದ ಹಾಗೆ, ರೈತರಿಗೆ ಕೂಲಿಕಾರರಿಗೆ ಹಿಂದುಳಿದವರಿಗೆ ಅಲ್ಪಸಂಖ್ಯಾತರಿಗೆ ಬ್ಯಾಂಕಿಗೆ ಹೋಗುವುದಕ್ಕೆ ಸಾಧ್ಯವಿರಲಿಲ್ಲ. ನಮಗೆ ಕುಳಿತುಕೊಳ್ಳಲು ಹೇಳುವವರು ಇರಲಿಲ್ಲ.ಈಗ ಕುರ್ಚಿ ಎಳೆದು ಕುಳಿತುಕೊಳ್ಳುವ ಶಕ್ತಿ ಒಬ್ಬ ಕೂಲಿಯುವನಿಗೆ ಒಬ್ಬ ಬಡವನಿಗೆ, ಒಬ್ಬ ರೈತನಿಗೆ ಬಂದಿದ್ದರೆ ಅದು ಪೂಜಾರಿಯವರ ಕಾಲದ ಸಾಲ ಮೇಳದಲ್ಲಿ ಎಂದು ಹೇಳುವುದಕ್ಕೆ ಜಿಪುಣತನ ತೋರಿಸಬೇಕಾಗಿಲ್ಲ. ಆದ್ದರಿಂದ ಈ ರೈತರ ಸಾಲ ಮನ್ನ ಮಾಡಬೇಕೆಂದು ಉದ್ದೇಶ ಇದೆಯಲ್ಲ, ಆ ರೀತಿ ಒಂದು ಆಸೆಯನ್ನು ಹುಟ್ಟಿಸಿ, ಇಡೀ ನಾಡಿನಲ್ಲಿ, ಇಡೀ ರಾಷ್ಟ್ರದಲ್ಲಿ ಜನರನ್ನು ಒಂದು ರೀತಿ ತಪ್ಪು ಅಭಿಪ್ರಾಯಕ್ಕೆ ಕೆಲವರು ತಿರುಗಿಸುತ್ತಿದ್ದಾರೆ.

ಒಬ್ಬರು ಒಂದು ಪುಸ್ತಕದಲ್ಲಿ ಬರೆದಿದ್ದಾರೆ. ಸಾಲ ತೆಗೆಯಬೇಕು, ಮನ್ನ ಮಾಡಬೇಕು ಸಾಲ ತೆಗೆಯಬೇಕು, ಮನ್ನ ಮಾಡಬೇಕು. ಇದರಿಂದ ಬ್ಯಾಂಕೂ ಉಳಿಯುವುದಿಲ್ಲ. ಊರು ಉಳಿಯುವುದಿಲ್ಲ ಯಾರೂ ಉಳಿಯುವುದಿಲ್ಲ ಎಂದು ಅವರು ಬರೆದಿದ್ದಾರೆ. ಆದ್ದರಿಂದ ಸಾಲ ತೆಗೆದು ಮನ್ನ ಮಾಡಬೇಕಾದ್ದಲ್ಲ ಆದರೆ ಅವರಿಗೆ ಕೊಡಬೇಕಾದ ನೀರು, ವಿದ್ಯುತ್ ಮತ್ತು ಇತರ ಸವಲತ್ತುಗಳನ್ನು ರೈತನಿಗೆ ಕೊಡಬೇಕಾದಂತದ್ದು ಬಹಳ ಪ್ರಾಮುಖ್ಯ. ಇದು ಸರ್ಕಾರದ ಕರ್ತವ್ಯ. ಕುವೆಂಪುರವರು ಹೀಗೆ ಹೇಳಿದ್ದಾರೆ.

"ನೇಗಿಲು ಹಿಡಿದು ಹೊಲದಲಿ ಹಾಡುವ ಉಳುವ ಯೋಗಿಯ ನೋಡಲ್ಲಿ.
ರಾಜ್ಯಗಳಳಿಯಲಿ, ರಾಜ್ಯಗಳುಳಿಯಲಿ ಹಾರಲಿ ಗದ್ದುಗೆ ಮುಕುಟಗಳು
ಆದರೂ ಈ ರೈತ ಬಿತ್ತುಳುವುದನ್ನು ಬಿಡುವುದೇ ಇಲ್ಲ.
ಬಾಳಿತು ನಮ್ಮೀ ನಾಗರೀಕತೆಯು ಮಣ್ಣುಳಿ ನೇಗಿಲಿನಾಶ್ರಯದಲ್ಲಿ.
ನೇಗಲಿ ಕುಲದೊಳಗಡಗಿದೆ ಧರ್ಮ, ನೇಗಿಲ ಮೇಲೆಯೇ ನಿಂತಿದೆ ಧರ್ಮ".

ಇದು ಸತ್ಯವಾದದ್ದು. ಆದ್ದರಿಂದ ರೈತ ಇದ್ದರೆ ಈ ದೇಶ ಉಳಿಯುತ್ತದೆ. ರೈತರನ್ನು ನಾವು ಒಳ್ಳೆಯ ರೀತಿ ಕಾಪಾಡಬೇಕು. ಆದ್ದರಿಂದ ಸರ್ಕಾರದ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡತಕ್ಕದ್ದು ಬಹಳ ಒಳ್ಳೆಯದು. ಆ ರೀತಿ ಮಾಡಿ ಅವರನ್ನು ರಕ್ಷಿಸಿ, ಅವರಿಗೆ ಬೇಕಾದಂಥ ಸವಲತ್ತುಗಳನ್ನೆಲ್ಲಾ ಕೊಟ್ಟು ರೈತರನ್ನು ಬದುಕಿಸುವಂಥದ್ದು, ಅವರಿಗೆ ಒಂದು ಶಕ್ತಿ ಕೊಡುವಂತದ್ದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ಅಧ್ಯಕ್ಷರೇ, ನೀಡುವ ರೈತ ಬೇಡುವ ಸ್ಥಿತಿಯನ್ನು ನಿರ್ಮಾಣ ಮಾಡಿ ಈ ಚರ್ಚೆಯನ್ನು ನಾವು ಇಲ್ಲಿ ಮಾಡುತ್ತಿದ್ದೇವೆ. ಇವರಲ್ಲಿ ಭಾಗವಹಿಸಿ ಒಂದೆರಡು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ. ಈಗಾಗಲೇ ಮಾತನಾಡಿದಂಥ ಎಲ್ಲಾ ಸದಸ್ಯರು ಪಕ್ಷಾತೀತವಾಗಿ ರೈತನಿಗೆ ಇರತಕ್ಕ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ. ಎಲ್ಲಾ ಸದಸ್ಯರಿಗೂ ಈ ಸರ್ಕಾರಕ್ಕೂ ರೈತನ ಸಮಸ್ಯೆಯ ಅರಿವು ಇದ್ದರೆ ಅವನು ಬದುಕುತ್ತಾನೆ. ತಾನು ಬೆಳೆಯುತಕ್ಕ ಉತ್ಪಾದನೆಗಳ ವೆಚ್ಚ ಹೆಚ್ಚಾಗಿದೆ. ಅವನು ಬೆಳೆದ ಕೃಷಿ ಉತ್ಪಾದನೆಗೆ ಬೆಲೆ ಇಲ್ಲ. ಇದು ಇವತ್ತಿನ ಚರ್ಚೆಯ ಸಾರಾಂಶ. ಆದಕ್ಕೆ ನಾನು ವಿವರವಾಗಿ ಹೋಗುವುದಿಲ್ಲ. ರೈತನ ಉತ್ಪಾದನೆಗೆ ಬೇಕಾದ ಸಾಧನ ಸಲಕರಣೆಗಳನ್ನು ಕಡಿಮೆ ಬೆಲೆಗೆ ಒದಗಿಸಲಿಕ್ಕೆ ಇಲ್ಲಿಯವರೆಗೆ ಯಾವ ಪ್ರಯತ್ನವೂ ನಡೆದಿಲ್ಲ. ಗೊಬ್ಬರ ಇರಬಹುದು. ಔಷಧ ಇರಬಹುದು, ಬೀಜ ಇರಬಹುದು ಎಷ್ಟೇ ರೇಟ್ ಹೆಚ್ಚಾದರೂ .ಅವರ ವೆಚ್ಚಕ್ಕನುಗುಣವಾಗಿ ಅವನು ಬೆಳೆದಂತ ಬೆಲೆಗೆ ಲಾಭದಾಯಕವಾದ ಬೆಲೆಯನ್ನಾದರೂ ನಿಗದಿ ಪಡಿಸಿಲ್ಲ. ಇವೆರಡರಲ್ಲಿ ಒಂದಾದರೂ ಸಾಕು. ಅವನು ವ್ಯವಸಾಯಕ್ಕಾಗಿ ಕೊಳ್ಳತಕ್ಕ ಉಪಕರಣಗಳ ಬೆಲೆಯನ್ನು ಹತೋಟಿಯಲ್ಲಿಟ್ಟು ಬೆಳೆದಂಥ ಬೆಲೆಗೆ ಸರಿಯಾದ ಬೆಲೆ ಕೊಟ್ಟಿದ್ದರೆ, ಅವನಿಗೆ ಆರ್ಥಿಕ ಸುವ್ಯವಸ್ಥೆ ಬರುತ್ತಿತ್ತು. ಗೊಬ್ಬರ, ವಗೈರೆ ವಸ್ತುಗಳ ಬೆಲೆ ಬೇಕಾದಷ್ಟು ಹೆಚ್ಚು ಇರಲಿ ಅವನ್ನು ಲೆಕ್ಕಾಚಾರ ಮಾಡಿ. ಯಾವ ರೀತಿ ಇವತ್ತು ಉದ್ಯಮಗಳಲ್ಲಿ ಉತ್ಪಾದನೆಯಾದಂಥ ಮಾಲಿನ ವೆಚ್ಚವನ್ನು ಕಡಿಮೆ ಬೆಲೆಗೆ ತೆಗೆದುಕೊಂಡು 100ಕ್ಕೆ 20ರಷ್ಟು ಲಾಭವನ್ನು ಸೇರಿಸಿ ಮಾರಾಟ ಮಾಡುವಂಥ ವ್ಯವಸ್ಥೆ ಇದೆ. ಅದನ್ನಾದರೂ ಮಾಡಬೇಕು.

ಇದು ಎರಡೂ ಇವತ್ತು ಆಗದೇ ಇರುವುದರಿಂದ ರೈತ ಬಹಳ ಕಷ್ಟಕ್ಕೆ ಒಳಗಾಗಿದ್ದಾನೆ. ಇವೊತ್ತು ಈ ಕ್ಷೇತ್ರಕ್ಕೆ ಅನ್ನ ನೀಡತಕ್ಕ ಆರ್ಥಿಕ ಸಂಪತ್ತನ್ನು ಉತ್ಪಾದನೆ ಮಾಡತಕ್ಕ ರೈತನ ಸ್ಥಿತಿ ಈ ಮಟ್ಟಕ್ಕೆ ಬರುವುದಕ್ಕೆ ಕಾರಣ. ಈ ದೇಶದಲ್ಲಿ ಆಡಳಿತ ನಡೆಸಿದಂಥ ಆಡಳಿತ ಶಾಹಿಯೇ ವ್ಯವಸ್ಥೆ. ರೈತನ ಬಡ್ಡಿ ಮತ್ತು ಸಾಲ ಮನ್ನಾ ಮಾಡಿ ಎಂದು ಕೇಳುತ್ತಿದ್ದೇವೆ. ಸಂಪತ್ತನ್ನು ಉತ್ಪಾದನೆ ಮಾಡತಕ್ಕ ರೈತ, ದುಡಿಯತಕ್ಕ ರೈತ ಶ್ರೀಮಂತನಾಗಬೇಕಾಗಿತ್ತು. ಅವನನ್ನು ಭಿಕ್ಷೆ ಬೇಡತಕ್ಕ ಸ್ಥಿತಿಗೆ ತಂದಿಟ್ಟಿದ್ದೇವೆ. ಆಡಳಿತ ನಡೆಸಿದಂಥ ರಾಜ್ಯ ಸರ್ಕಾರವು ಇರಬಹುದು, ಕೇಂದ್ರ ಸರ್ಕಾರವು ಇರಬಹುದು ರೈತರನ್ನು ಶ್ರೀಮಂತರಾಗಲು ಬಿಟ್ಟಿಲ್ಲ. ಇವೊತ್ತು ರಾಷ್ಟ್ರೀಯ ಉತ್ಪಾದನೆಯನ್ನು ಇನ್ನೂ ಬೆಳೆಸಿ, ನಾವೆಲ್ಲರೂ ಉಳಿಯುವ ಸಲುವಾಗಿ ಬಡ್ಡಿ ಮನ್ನಾ, ಸಾಲ ಮನ್ನಾ ಎಂದು ಹೇಳಿ ಅವನನ್ನು ಜೀವಂತ ಇಡಬೇಕು. ಅವನ ಶೋಷಣೆ ಮುಂದುವರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಯೇ ವಿನಹ, ಅವನನ್ನು ನಾವು ರಕ್ಷಣೆ ಮಾಡಲು ಹೊರಟಿಲ್ಲ. ಬಡ್ಡಿ ಮನ್ನಾ ಸಾಲ ಮನ್ನಾ ನಾವು ನಿರ್ಮಾಣ ಮಾಡಿದಂಥ ವ್ಯವಸ್ಥೆ

ಸಾಲ ಮನ್ನಾ ಮಾಡುವುದು ಅನಿವಾರ್ಯ. ಸರ್ಕಾರ ಇದು ಸಾಧ್ಯವಿಲ್ಲ ಎಂದು ಹೇಳುವುದು ಸರಿಯಲ್ಲ. ಅದನ್ನು ಮಾಡದೇ ಹೋದರೆ ರಾಷ್ಟ್ರೀಯ ಸಂಪತ್ತನ್ನು ಉತ್ಪಾದನೆ ಮಾಡತಕ್ಕ ರೈತ ಏನಾದರೂ ಪೆಟ್ಟು ತಿಂದರೆ ನಾವು ಯಾರೂ ಉಳಿಯಲು ಸಾಧ್ಯವಿಲ್ಲ. ಕೇವಲ ಸಾಲ ಮನ್ನಾ ಬಡ್ಡಿ ಮನ್ನಾ ಘೋಷಣೆ ಮಾಡಿದರೆ ಸಾಲದು. ಈ ಸದನದ ಎಲ್ಲಾ ಮಾನ್ಯ ಸದಸ್ಯರು ಹಾಗೂ ಸರ್ಕಾರ ಇವೊತ್ತು ಸಂಪೂರ್ಣವಾಗಿ ವಿಚಾರವನ್ನು ಮಾಡಬೇಕಾಗಿದೆ. ದುಡಿಯುವಂಥ ರೈತ, ಅನ್ನ ಕೊಡುವಂಥ ರೈತ ಇವೊತ್ತು ಏತಕ್ಕೆ ಬಡವನಾಗಿದ್ದಾನೆ. ಅವನ ಮೂಲ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿಕ್ಕೆ ನಾವು ಪ್ರಯತ್ನ ಮಾಡಬೇಕು. ಅವನು ಬೆಳೆದಂಥ ಬೆಳೆಗೆ ಸರಿಯಾಗಿ ಬೆಲೆ ಕೊಡಬೇಕು. ಅದನ್ನು ಬಿಟ್ಟು ಪದೇ ಪದೇ ಸಾಲ ಮನ್ನಾ ಮಾಡುತ್ತೇವೆ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿಕೊಳ್ಳುತ್ತಾ ಕೂರುವುದು ಸರಿಯಲ್ಲ. ಅವನು ಬೆಳೆದಂಥ ಬೆಳೆಗೆ ಸರಿಯಾದಂಥ ಬೆಲೆ ಸಿಗುವಂಥ ವ್ಯವಸ್ಥೆ ಮಾಡಲು 10 ವರ್ಷದ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಅವನು ಕಬ್ಬು ಮಾರಿದರೆ ಹಣಸಿಗುತ್ತಿಲ್ಲ. ಬಜಾರಿಗೆ ಮಾಲು ತೆಗೆದುಕೊಂಡು ಹೋದರೆ ಬಾಯಿಗೆ ಬಂದ ರೇಟು ಕೇಳುತ್ತಾರೆ. ಆದರೆ ಅವನು ಕೊಳ್ಳುವ ವಸ್ತುಗಳಿಗೆ ಅವರು ಹೇಳಿದಂಥ ಬೆಲೆಯನ್ನು ಕೊಡಬೇಕಾಗಿದೆ. ಅವನು ಮಾರುವಂಥ ವಸ್ತುಗಳಿಗೆ ಕೇಳುವವರೇ ಇಲ್ಲ. ಈ ಮೂಲ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಸರ್ಕಾರ ಹಾಗೂ ಸದನ ಪ್ರಯತ್ನ ಮಾಡಬೇಕು.

ಈ ಸಮಸ್ಯೆಯನ್ನು ಬಗೆಹರಿಸಿ ನೀವು ನೀರಾವರಿ ಕರ ಕೇಳಿ, ಯಾವುದೇ ಟ್ಯಾಕ್ಸ್‌ನ್ನು ಕೇಳಿ ಅವನು ಕೊಡುವುದಕ್ಕೆ ಸಿದ್ಧನಿದ್ದಾನೆ. ಆದರೆ ಅವನು ಬೆಳೆಯತಕ್ಕ ಎಲ್ಲಾ ಬೆಳೆಗಳಿಗೂ ಸರಿಯಾದ ಲಾಭದಾಯಕ ಬೆಲೆ ಸಿಗುವಂತೆ ನೀವು ಕೂಡಲೇ ಮಾಡಬೇಕು. ಇವೊತ್ತು ಸಾಲ ಮನ್ನಾ ಅಥವಾ ಬಡ್ಡಿ ಮನ್ನಾ ವ್ಯವಸ್ಥೆ ಏನು ಇದೆ ಅದನ್ನು ಸರ್ಕಾರ ಕೂಡಲೇ ಬಗೆಹರಿಸಬೇಕು. ಇದರ ಜೊತೆಗೆ ಸಾಲ ಮನ್ನಾ ಯೋಜನೆಯಿಂದ ಸಹಕಾರಿ ಸಂಘಗಳು ತಾಲ್ಲೂಕು ಮಟ್ಟದ ಸಹಕಾರಿ ಸಂಘಗಳು ಇವೊತ್ತು ದಿವಾಳಿಯ ಅಂಚಿನಲ್ಲಿವೆ. ಇದು ಸರ್ಕಾರದ ತಪ್ಪು ನೀತಿಯಿಂದಾಗಿದೆ. ಅವುಗಳ ಆರ್ಥಿಕ ಸ್ಥಿತಿಗತಿಗಳ ಸುಧಾರಣೆ ಬಗ್ಗೆ ಯಾವುದೇ ಯೋಜನೆ ಈ ಬಡ್ಜೆಟ್‌ನಲ್ಲಿ ಇಲ್ಲ. ಸರ್ಕಾರ ಸಹಕಾರಿ ಸಂಘಗಳನ್ನು ಪುನಶ್ಚೇತನಗೊಳಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ನಾನು ರೈತರಿಗೆ ಬಡ್ಡಿ ಸುಸ್ತಿ ಬಡ್ಡಿ ರದ್ದು ಮಾಡಿ ಎಂಬ ವಿಷಯದ ಮೇಲೆ ಮಾತನಾಡುವುದಿಲ್ಲ. ಏತಕ್ಕೆಂದರೆ ಈಗಾಗಲೇ ಹಲವಾರು ಸಾರಿ ರೈತರು ಸಾಲಗಾರರು ಅಲ್ಲ ಎಂದು ಹೇಳಿದ್ದೇನೆ. ರೈತರು ಸಾಲವನ್ನು ಯಾರಿಗೂ ಕೊಡಬೇಕಾಗಿಲ್ಲ. ನಾನು ದೀರ್ಘವಾಗಿ ಚರ್ಚೆ ಮಾಡಬೇಕೆಂದು ಹಿರಿಯ ಸದಸ್ಯರು ಇಲ್ಲಿ ಸಲಹೆ ಮಾಡಿದ್ದಾರೆ. ಹೆಚ್ಚು ಬೆಳೆಯುವಂಥ ಒಂದು ಕಾರ್ಯ ತಂತ್ರ ಬಂದ ಮೇಲೆ, ಹೈಬ್ರೀಡ್ ವೆರೈಟೀಸ್ ಮತ್ತು ರಸಾಯನಿಕ ಗೊಬ್ಬರ, ರಸಾಯನಿಕ ಕೀಟನಾಶಕಗಳನ್ನು ಉಪಯೋಗಿಸಿ ಸರ್ಕಾರದ ಕಾರ್ಯ ಏನು ಇದೆ ಹಸಿರು ಕ್ರಾಂತಿ ಮಾಡಬೇಕು, ಅದರ ನಡುವೆ ಉದ್ಭವ ಆಗಿರತಕ್ಕ ಇದು ಒಂದು ಸುಳ್ಳು ಲೆಕ್ಕಾಚಾರವೆಂದು ನಾನು ಕರೆಯುತ್ತೇನೆ, ಸರ್ಕಾರ ಇದನ್ನು ಒಪ್ಪಿಕೊಂಡಿದೆ. ಸಾಲ ಕೊಟ್ಟಿದ್ದು ಡೆವಲಪ್‌ಮೆಂಟ್ ಸ್ಟ್ರಾಟಜಿ, ಸಾಲ ರದ್ದು ಮಾಡುವುದೂ ಡೆವಲಪ್‌ಮೆಂಟ್ ಸ್ಟ್ರಾಟೇಜಿ ಎಂದು ತಾನೇ ?

ಸಹಕಾರಿ ಸಂಘಗಳನ್ನು ತೆರೆದು ಸಾಲ ಕೊಟ್ಟಿದ್ದು ಉತ್ಪಾದನ ಮಾಡುವ ಸಲುವಾಗಿ as a part of development strategy. ಸಾಲವನ್ನು ರದ್ದು ಮಾಡಿದ್ದು as a part of development strategy. But, fact remains that agriculture production has increased. ಆ ಕಾರಣ ಇವನ್ನು ಕೃತಕ ಸಾಲಗಳು ಎಂದು ನಾವು ಪರಿಗಣಿಸಿ ಆಗಿದೆ. ಇದನ್ನು ನಾವು ರದ್ದು ಮಾಡಿದ್ದೇವೆ

ಎಂದು ಹೇಳಿಯೂ ಆಗಿದೆ, ಅದರಿಂದ ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ಇಲ್ಲಿ ನೆರೆಹಾವಳಿ ಬಗ್ಗೆ ಒಂದೆರಡು ಕೆಲಸ ಸರ್ಕಾರದಿಂದ ಆಗಬೇಕಾಗಿದೆ. ಅದನ್ನು ಮಾತ್ರ ಹೇಳುತ್ತೇನೆ. ಸಭಾಧ್ಯಕ್ಷರೇ, ಮೊನ್ನೆ ಆದ ನೆರೆಹಾವಳಿಯಲ್ಲಿ ಸಿಂಧನೂರು, ಸಿರಗುಪ್ಪ ಮತ್ತು ಮಾನ್ವಿ ಈ ಮೂರು ತಾಲ್ಲೂಕುಗಳಲ್ಲಿ ಫಲವತ್ತಾದ ಭೂಮಿ ಮೇಲೆ ಮರಳು ಹೋಗಿ ತುಂಬಿಕೊಂಡಿದೆ. ಕೆಲವು ಕಡೆ ಮೂರು ಅಡಿ, ನಾಲ್ಕು ಅಡಿ ಕೆಲವು ಕಡೆ ಆರು ಅಡಿ ಮರಳು ಹೋಗಿ ಸೇರಿಕೊಂಡಿದೆ. ಇವನ್ನು ಯಾವುದೇ ರೈತ ತೆಗೆಯುವುದಕ್ಕೆ ಸಾಧ್ಯವಿಲ್ಲ, ಇದನ್ನು ದಯವಿಟ್ಟು ಮಂತ್ರಿಗಳು ಯಾರು ಇದನ್ನು ಕೇಳುತ್ತಿದ್ದಾರೋ ಅವರು ದಯವಿಟ್ಟು ನೋಟ್ ಮಾಡಿಕೊಳ್ಳಬೇಕು. ಉಸುಕು ಎನ್ನುತ್ತೀರಲ್ಲಾ ನಿಮ್ಮ ಕಡೆ, ನಾವು ಮರಳು ಎಂದು ಹೇಳುತ್ತೇವೆ. ಆ ಮರಳು ಹೋಗಿ ಐದು ಅಡಿ, ಆರು ಅಡಿ ರೈತನ ಭೂಮಿ ಮೇಲೆ ಹೋಗಿ ನೆರೆಹಾವಳಿಯಿಂದ ಸೇರಿಕೊಂಡಿದೆ. ಅದನ್ನು ಸಣ್ಣ ರೈತರು ತೆಗೆಯುವುದಕ್ಕೆ ಸಾಧ್ಯವೇ ಇಲ್ಲ. ಇದು ಒಂದು ಸರ್ಕಾರಿ ಕಾರ್ಯಕ್ರಮವೇ ಆಗಬೇಕು. ಆದಷ್ಟು ಬೇಗ ಆ ಮರಳನ್ನು ತೆಗೆಸಿಕೊಡಬೇಕು. ಮತ್ತೊಂದು ಈ ಪ್ರವಾಹದಲ್ಲಿ ಪಂಪ್‌ಹೌಸಸ್ ಜೊತೆಗೆ ಪಂಪುಸೆಟ್ಟುಗಳು ಕೊಚ್ಚಿಕೊಂಡು ಹೋಗಿವೆ. ಅದಕ್ಕೆ ಈ ಸರ್ಕಾರ ಏನು ಹೇಳುತ್ತಿದೆ, ಹತ್ತು ಸಾವಿರ ರೂಪಾಯಿ ವರಮಾನ ಇರುವವರಿಗೆ ಮಾತ್ರ ನಾವು ಪಂಪುಸೆಟ್ಟು ಕೊಡುತ್ತೇವೆ, ಹನ್ನೊಂದು ಸಾವಿರ ಇರುವವರಿಗೆ ಕೊಡುವುದಿಲ್ಲ ಎಂದು ಹೇಳಿ. ಯಾವ ವರ್ಷದ ಆದಾಯ ಹಿಡಿಯುತ್ತಿದ್ದೀರಿ ಎಂದು ನನಗೆ ಗೊತ್ತಿಲ್ಲ. ನನ್ನ ಹತ್ತಿರ ಸಿಂಧನೂರಿನವರು, ಸಿರಗುಪ್ಪದವರು, ಮಾನ್ವಿಯವರು ಬಂದಿದ್ದಾರೆ. ಮಾನ್ಯ ಶಂಕರರೆಡ್ಡಿಯವರ ಹೇಳಿಕೆಯನ್ನು ಅಧಿಕೃತವಾಗಿ ತೆಗೆದುಕೊಳ್ಳುವುದಿಲ್ಲ. ಸರ್ಕಾರದಿಂದ ಹೇಳಿಕೆ ಬಂದರೆ ತೆಗೆದುಕೊಳ್ಳುತ್ತೇನೆ. ಇದನ್ನು ಅವರು ಕೊಡುತ್ತಿಲ್ಲ. ಹತ್ತು ಸಾವಿರ ರೂಪಾಯಿ ವರಮಾನ ಇರುವವರಿಗೆ ಮಾತ್ರ ಪಂಪುಸೆಟ್ ಕೊಡುತ್ತೇವೆ ಹನ್ನೊಂದು ಸಾವಿರ ಇರುವವರಿಗೆ ಕೊಡುವುದಿಲ್ಲ ಎಂದು. ಯಾವ ವರ್ಷದ ವರಮಾನವನ್ನು ಹಿಡಿಯುತ್ತಿದ್ದೀರಿ. ಇಡೀ ಪಂಪ್‌ಸೆಟ್ಟೇ ಕೊಚ್ಚಿಕೊಂಡು ಹೋಗಿದೆ. ಪಂಪುಹೌಸ್ ಕೊಚ್ಚಿಕೊಂಡು ಹೋಗಿದೆ. ಬೆಳೆಯಲ್ಲಾ ಕೊಚ್ಚಿಕೊಂಡು ಹೋಗಿದೆ. ಆದ್ದರಿಂದ ಈ ತಾರತಮ್ಯ ಏನಿದೆ ಅದನ್ನು ತೆಗೆದುಹಾಕಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಸವಿಸ್ತಾರವಾಗಿ ಆಮೇಲೆ ಮುಖ್ಯಮಂತ್ರಿಗಳು ಕೊಡುತ್ತಾರೆ. ಕೆಲವು ತೀರ್ಮಾನ, ಏಕೆಂದರೆ ಹಣಕಾಸಿನ ಸಚಿವರು ಅವರೇ ಆದಕಾರಣ ಅವರು ಹೇಳುತ್ತಾರೆ. ಒಂದು ಸ್ಟೇಟ್‌ಮೆಂಟನ್ನು ಮುಖ್ಯಮಂತ್ರಿಗಳು ಆಮೇಲೆ ಮಾಡುತ್ತಾರೆ. ಮೂರು - ನಾಲ್ಕು ದಿವಸದಲ್ಲಿ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಿಗೆ ಕಾಲಾವಕಾಶ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಇವರ ಮೇಲೆ ಅಂತಿಮ ಒಂದು ತೀರ್ಮಾನವನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತೇನೆ ಎಂದು ಹೇಳಿ ಈಗಾಗಲೇ ತಮಗೂ ಕೂಡಾ ಹೇಳಿದ್ದಾರೆ ಮತ್ತು ತಮ್ಮ ಜೊತೆಯಲ್ಲಿಯೂ ಕೂಡ ಮಾತನಾಡುವಾಗ ಸ್ಪಷ್ಟವಾಗಿ ಅವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಒಂದೆರಡು ಮಾತನ್ನು ತಾವು ಎತ್ತಿದ್ದಕ್ಕಾಗಿ ಅದರ ಮೇಲೆ ನಾನು ಒಂದೆರಡು ಮಾತನ್ನು ಆಡುತ್ತೇನೆಯೇ ಹೊರತಾಗಿ ಬೇರೆ ವಿಷಯವನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸುತ್ತಾರೆ. ಈಗ ಬಡ್ಡಿ ಮತ್ತು ಸುಸ್ತಿ ಬಡ್ಡಿ ಎರಡನ್ನೂ ಕೂಡ ಮನ್ನಾ ಮಾಡುವುದರ ಬಗ್ಗೆ, ಸಾಲ ಮನ್ನಾ ಮಾಡುವುದರ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ಆಯಿತು. ರೈತರ ಒಂದು ಅಭಿವೃದ್ಧಿಗಾಗಿಯಾಗಲಿ, ಅವರ ಏಳಿಗೆಗಾಗಲೀ ಎಲ್ಲರೂ ಕೂಡ ಈ ಸದನದಲ್ಲಿ ಬದ್ಧರಾಗಿದ್ದಾರೆ. ಈ ಕಡೆ ಸದಸ್ಯರಾಗಲಿ, ಆ ಕಡೆ ಸದಸ್ಯರಾಗಲಿ ಯಾರಿಗೂ ಯಾವ ಭಿನ್ನಾಭಿಪ್ರಾಯವಿಲ್ಲ. ವಿಚಾರಗಳು ವ್ಯತ್ಯಾಸವಿರಬಹುದು. ಅಂದರೆ ಆಚರಣೆಯಲ್ಲಿ ತರುವಾಗ ಅಥವಾ ಇಂಪ್ಲಿಮೆಂಟ್ ಮಾಡುವಾಗ ಯಾವ ಯಾವ ರೀತಿಯಾಗಿ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು.

ಸಂಪನ್ಮೂಲದ ಕೊರತೆ ಇದ್ದ ಕಾರಣ ಹಂತಹಂತವಾಗಿ ಅದನ್ನು ಇಂಪ್ಲಿಮೆಂಟ್ ಮಾಡತಕ್ಕ ಒಂದು ಯೋಜನೆ ಇರುತ್ತದೆ. ಆದರೆ ಪ್ರೊ: ನಂಜುಂಡಸ್ವಾಮಿಯವರು ಹೇಳಿದ ಹಾಗೆ ಅವರೇ ಒಂದು ವಿಶಿಷ್ಟವಾದಂತಹ ಧಾಟಿ ಮತ್ತು ಅವರದೇ ವಿಶಿಷ್ಟವಾದಂತಹ ನಿಲುವು ಇದೆ. ನಾವು ಕೊಡುವುದೇ ಇಲ್ಲ, ನೀವು ಕೇಳಲೇಬಾರದು. ನಾವು ಸಾಲಗಾರರು ಅಲ್ಲ ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದಾರೆ. ಅದು ಅವರಿಗೆ ಬಿಟ್ಟಿದ್ದುದು, ಆದರೆ ವಾಸ್ತವಾಂಶ ಏನು ಅಂದರೆ ಯಾವ ಸರ್ಕಾರ ಇದ್ದರೂ ಕೂಡ ವಸೂಲಿ ಮಾಡುತ್ತಲೇ ಇದೆ ರೈತರು ಕೊಡುತ್ತಾ ಇದ್ದಾರೆ. ಆದರೆ ಕಾರಣಾಂತರದಿಂದ ಕೆಲವು ಕಡೆ ನಿಂತು ಹೋಗಿದೆ. ಆದರೆ ಒಂದು ಮಾತನ್ನು ನೆನಪಿನಲ್ಲಿಡಬೇಕು. ಇವತ್ತು ಎಷ್ಟು ರೈತರಿಗೆ ಕೋ ಆಪರೇಟಿವ್ ಬ್ಯಾಂಕಿನಿಂದಾಗಲಿ ಅಥವಾ ಬೇರೆ ಬ್ಯಾಂಕಿನಿಂದಾಗಲೀ ನಾವು ನೇರವಾಗಿ ಸಾಲದ ರೂಪದಲ್ಲಾಗಲಿ ಸಹಾಯಧನ ರೂಪದಲ್ಲಿ ಸಹಾಯವನ್ನು ಮಾಡುತ್ತಿದ್ದೇವೆನ್ನತಕ್ಕದ್ದನ್ನು ಗಮನದಲ್ಲಿ ಇಟ್ಟುಕೊಳ್ಳತಕ್ಕದ್ದು ಅವಶ್ಯಕತೆ ಇದೆ. ಅಗ್ರಿಕಲ್ಚರಲ್ ಪ್ರೊಡಕ್ಷನ್‌ಗೆ ನಾವು ಒಂದೇ ಕಡೆ ನೋಡತಕ್ಕಂಥದ್ದು ಇಲ್ಲ. ಒಂದು ಕಡೆ ನಮ್ಮ ರೈತರು ಯಾರು ಹೊಲ ಇದೆ ಅಥವಾ ಯಾರು ಮಾಲೀಕರಿದ್ದಾರೆ ಅವರು ಒಂದು ಕಡೆ ಇದ್ದಾರೆ. ಇನ್ನು ಇನ್ನೊಂದು ಕಡೆ ಅದಕ್ಕೆ ಹೆಚ್ಚಿನ ಸಹಾಯವನ್ನು ನೀಡತಕ್ಕಂಥ ಕೂಲಿಕಾರನು ಕೂಡ ಇದ್ದಾನೆ. ಅವನ ಬಗ್ಗೆಯೂ ನಾವು ಚಿಂತನೆ ಮಾಡಬೇಕಾಗುತ್ತದೆ. ಬರೀ ಒಂದು ಸೈಡನ್ನು ಇಟ್ಟುಕೊಂಡು ಅಥವಾ ಕೆಲವೇ ಜನರಿಗಾಗಿ ನಾವು ಮಾತನಾಡಿದರೆ ಸರಿಯಾಗುವುದಿಲ್ಲ. ಮಾನ್ಯ ಬೈರೇಗೌಡರಿಗೆ 100 ಎಕರೆ ಎಂದು ಹೇಳಿದರು, ಅದು ಹೇಗೆ ಉಳಿಯಿತೋ ನನಗೆ ಗೊತ್ತಾಗಲಿಲ್ಲ, ಅಥವಾ ತಪ್ಪು ಅವರು ಹೇಳಿರಬೇಕು. ಸೀಲಿಂಗ್ ಬಂದ ಮೇಲೆ 100 ಎಕರೆ ಉಳಿಯುವುದೇ ಇಲ್ಲ. ಆದರೆ 100 ಎಕರೆಯನ್ನು ನಾವು ಇವತ್ತು ಸಾಧನೆ ಮಾಡಬೇಕಾದರೆ ಅಥವಾ ನೀವೇ ಅದಕ್ಕೆ ಮಾಲೀಕರಾಗಿ ಇವತ್ತು ಅದನ್ನು ನಡೆಸಿಕೊಂಡು ಹೋಗಬೇಕಾದರೂ ಕೂಡ ನಿಮಗೆ 10 ಆಳಾದರೂ ಬೇಕಾಗುತ್ತದೆ. ಒಂದು ಫ್ಯಾಮಿಲಿಯಲ್ಲಿ ಅವರೇ ಎಲ್ಲವನ್ನು ಕೂಡ ಮಾಡುವುದಿಲ್ಲ. ನಿಮ್ಮ ಪ್ರೊಡಕ್ಷನ್ ಅನ್ನು ಹೆಚ್ಚಿಗೆ ಮಾಡಬೇಕಾದರೆ ಅಲ್ಲಿ 10 ಜನ ನಮಗೆ ಆ ಉತ್ಪಾದನೆಗೆ ಸಹಾಯಕರಾಗಿ ಬರುತ್ತಾರೆ. ಅವರ ಬಗ್ಗೆಯೂ ಕೂಡ ಇದರಲ್ಲಿ ನಾವು ಚಿಂತನೆಯನ್ನು ಮಾಡಬೇಕಾಗುತ್ತದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಕೃಷಿ ಕಾರ್ಮಿಕರ ಬಗ್ಗೆ ನಾನು ವಿಸ್ತಾರವಾಗಿ ಮಾತನಾಡುವುದಕ್ಕೆ ಹೋಗಲಿಲ್ಲ. ಏಕೆಂದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕೃಷಿ ಕಾರ್ಮಿಕರ ಬಗ್ಗೆ ಈಗ ಮಾತನಾಡುತ್ತಿದ್ದಾರೆ ಆದ್ದರಿಂದ ಅವರ ಬಗ್ಗೆ ಕಳಕಳಿ ಬೆಳೆಸಿಕೊಳ್ಳಬೇಕಾದರೆ ಏನು ಮಾಡಬೇಕು ಎನ್ನುವ ಬಗ್ಗೆ ಎರಡೇ ಎರಡು ವಿಷಯವನ್ನು ಹೇಳುತ್ತೇನೆ.

ಮೂರು ಕನ್ಸೂಮರ್ ಪ್ರೈಸ್ ಇಂಡೆಕ್ಸ್ ಇರುವಂತಹ ದೇಶ ಇದು ಒಂದೇ. ಮೂರು ಕನ್ಸೂಮರ್ ಪ್ರೈಸ್ ಇಂಡೆಕ್ಸ್ 1) Price index for urban non- manual employees. 2) Price index for industrial workers and 3) Price index for agricultural workers, agricultural labourers. ನನಗೆ ಮಿನಿಮಂ ವೇಜಸ್ ಫಿಕ್ಸ್ 12.60 ಪೈಸೆ ಮಾಡಿದ್ದಾರೆ. ಯಾವ ಆಧಾರದ ಮೇಲೆ ಫಿಕ್ಸ್ ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ. ಏತಕ್ಕೆ ಈ ವಿಷಯವನ್ನು ಇಲ್ಲಿ ಮಾತನಾಡುವುದಿಲ್ಲ ಅಂದರೆ ನಿಮ್ಮ ಕೈಯಲ್ಲಿ ಇವೆಲ್ಲಾ ಇಲ್ಲ. ಮರ್ಯಾದೆ ಇರುವಂತಹ ದೇಶಗಳಲ್ಲಿ ಮರ್ಯಾದೆ ಇರುವಂತಹ ಎಕಾನಮಿಗಳಲ್ಲಿ, in decent economy there will be only one consumer price index, not three. This is a country which is suffering under the caste system and even in the price index, we have a caste system. ಇದನ್ನು ಏನು ಸರಿ ಮಾಡುತ್ತೀರಿ ? ಅದನ್ನು ಮಾಡುವವರೆಗೂ ನೀವು ಕಣ್ಣೀರು ಹಾಕುವ ಹಾಗೆ ಇಲ್ಲ. ಲ್ಯಾಂಡ್‌ಲೆಸ್ ಲೇಬರರ್ಸ್ ಬಗ್ಗೆ ನೀವು ಕಣ್ಣೀರನ್ನು ಹಾಕುವ ಹಾಗೆ ಇಲ್ಲ. ದೆಹಲಿಯಲ್ಲಿ

ನಿಮ್ಮ ಸರ್ಕಾರ ಇದೆ ಇದನ್ನು ಸರಿಮಾಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಇಲ್ಲ, ಅದಕ್ಕೆ ನಾನು ಹೇಳಿದೆ, ನಾನು ಏತಕ್ಕೆ ಹೇಳಿದೆ ಎಂದರೆ ಅಗ್ರಿಕಲ್ಚರಲ್ ಪ್ರೊಡಕ್ಷನ್ ಹೆಚ್ಚಿಗೆ ಆಗಬೇಕು. ಅನ್ನತಕ್ಕ ವಾದ ಸಮ್ಮೆಲ್ಲರದು ಇದೆ. ಅದರ ಜೊತೆಯಲ್ಲಿ ಆ ಅಗ್ರಿಕಲ್ಚರಲ್ ಪ್ರೊಡಕ್ಷನ್‌ಗೆ ಪ್ರೋತ್ಸಾಹ ನೀಡತಕ್ಕ, ಸಹಾಯ ಮಾಡತಕ್ಕಂಥ ಮತ್ತು ಈ ಲ್ಯಾಂಡ್ ಲಾರ್ಡ್ ಶೋಷಣೆಗೆ ಒಳಗಾಗತಕ್ಕಂಥ ಕ್ಲಾಸ್ ಇದೆ ಅದರ ಬಗ್ಗೆಯೂ ಚಿಂತೆಯನ್ನು ಈ ಸಮಾಜದಲ್ಲಿ ಮಾಡಬೇಕಾಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ. ಅದಕ್ಕಾಗಿ ನಾವು ಇವತ್ತು ಸಮಗ್ರವಾಗಿ ಚಿಂತನೆಯನ್ನು ಮಾಡಲೇಬೇಕಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ನಾನು ಬಜೆಟ್ ಮೇಲೆ ಮಾತನಾಡುವಾಗ ಅದನ್ನೇ ಹೇಳಿದೆ, ಅವರನ್ನು ನೀವು ಕೈ ಬಿಟ್ಟಿದ್ದೀರಾ ? ಅವರು 30 ಭಾಗ ಇದ್ದಾರೆ. ಅವರ ಬಗ್ಗೆ ನೀವು ಬಜೆಟ್‌ನಲ್ಲಿ ಏನೂ ಹೇಳಲೇ ಇಲ್ಲ. ನಾನು ಮಾತನಾಡುವಾಗ ಈ ರಾಜ್ಯದಲ್ಲಿ ಜಮೀನು ಇಲ್ಲದೆ ಇರತಕ್ಕಂಥವರು 30 ಭಾಗ ಇದ್ದಾರೆ ಅವರ ಬಗ್ಗೆ ನೀವು ಏನೂ ಹೇಳಿಲ್ಲ ಎಂದು ನಾನೇ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಆ ಕಡೆ ಕುಳಿತಿರುವ ಸದಸ್ಯರು ಮತ್ತು ಈ ಕಡೆ ಕುಳಿತಿರುವ ಸದಸ್ಯರುಗಳು ಚಿಂತನೆ ಮಾಡಬೇಕಾಗುತ್ತದೆ. ಇನ್ನೊಂದು ಪ್ರಾಮುಖ್ಯವಾದುದೇನೆಂದರೆ, ದುರ್ದೈವದಿಂದ, ಸುದೈವದಿಂದ ಅನೇಕ ಸರ್ಕಾರಗಳು ನಾವು ಒಬ್ಬರೇ ಎಂದಿಲ್ಲ, ರಾಜಕಾರಣಿಗಳು, ಪುಢಾರಿಗಳು, ಮುಖಂಡರು ಎಲ್ಲರೂ ಸೇರಿ ಪದೇ ಪದೇ ಒಂದು ಪ್ರಕಟಣೆ ಮಾಡುತ್ತೇವೆ. ಆಗ ಏನಾಗುತ್ತದೆಂದರೆ, ಇವೊತ್ತು ಸಾಲ ಮಾಫಿ ಆಗುತ್ತದೆಯೇ ಬಡ್ಡಿ ಹೋಗುತ್ತದೆಯೇ ಸುಸ್ತಿ ಬಡ್ಡಿ ಹೋಗುತ್ತದೆಯೇ ಎಂದು ರೈತರೆಲ್ಲಾ ಅಂದುಕೊಳ್ಳುತ್ತಾರೆ. ಅನೇಕ ಸಂಘ – ಸಂಸ್ಥೆಗಳಿಗೆ ಕೊಡತಕ್ಕಂಥ ಬಾಕಿ ಕೊಡುವುದಿಲ್ಲ. ಪ್ರೈಮರಿ ಹಂತದಲ್ಲಿ ಸುಮಾರು 4,320 ಸೊಸೈಟಿಗಳಿವೆ. ಅನೇಕ ಸೊಸೈಟಿಗಳು ಇವೊತ್ತು ಅನ್–ಎಲಿಜಬಲ್ ಆಗಿವೆ, ಅಂದರೆ, ಅನರ್ಹತೆ ಪಡೆದಿವೆ. ಅದಕ್ಕೆ ಯಾರು ಕಾರಣ ? ಬರೀ ಸರ್ಕಾರ ಒಂದೇ ಹೊಣೆಯೆ ? ಅನೇಕ ಸಂಘ–ಸಂಸ್ಥೆಗಳಲ್ಲಿ ನಾನ್ – ಅಫಿಷಿಯಲ್ ಬಾಡಿಗಳಿವೆ, ಅದಕ್ಕೆ ಅದರದೇ ಆದಂಥ ವ್ಯವಸ್ಥೆ ಇದೆ. ಹೀಗಿದ್ದರೂ ಕೂಡ ಕೆಲವು ಸಂಘ – ಸಂಸ್ಥೆಗಳು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿಲ್ಲ. ಬಹುಶಃ ಬೆಳಗಾಂ ಜಿಲ್ಲೆ, ದಕ್ಷಿಣ ಕನ್ನಡ, ಉತ್ತರ ಕನ್ನಡದ ಕೆಲವು ಭಾಗ, ಧಾರವಾಡ ಜಿಲ್ಲೆಯ ಕೆಲವು ಭಾಗಗಳನ್ನು ಬಿಟ್ಟರೆ ಉಳಿದ ಎಲ್ಲಿಯೂ ಕೂಡ ವ್ಯವಸ್ಥಿತವಾದಂಥ ರೀತಿಯಲ್ಲಿ ಇಲ್ಲ. ಅದರಲ್ಲೂ ಹೈದರಾಬಾದ್ – ಕರ್ನಾಟಕ ಮತ್ತು ಹಳೇ ಮೈಸೂರು, ಹಾಸನ, ಕೋಲಾರ ಕಡೆಗಳಲ್ಲಿರುವ ಸಂಘ – ಸಂಸ್ಥೆಗಳ ಬಗ್ಗೆ ನಾನು ಹೇಳಬೇಕಾಗುತ್ತದೆ. ಆ ಕಡೆಗಳಲ್ಲೂ ಒಂದೇ ಕಾನೂನು, ಒಂದೇ ಪ್ರಿನ್ಸಿಪಲ್ ಇದೆ. ಸರ್ಕಾರವಾಗಲಿ, ಜನರಾಗಲಿ ಎಲ್ಲರೂ ಕೂಡ ಅದೇ ಒಂದು ಭಾವನೆ ಇಟ್ಟುಕೊಂಡಿದ್ದಾರೆ. ಒಂದು ಕಡೆ ವಿಫಲವಾಗಿದ್ದರೆ ಮತ್ತೊಂದು ಕಡೆ ಯಶಸ್ವಿಯಾಗಿದೆ. ರಿಕವರಿಯಲ್ಲಿ ತೆಗೆದುಕೊಂಡರೆ ಆ ಭಾಗದಲ್ಲಿ ಶೇಕಡ 50–60–70 ಈ ರೀತಿಯಲ್ಲಿ ರಿಕವರಿಯಾಗಿದೆ. ಉಳಿದ ಭಾಗಗಳಲ್ಲಿ ರಿಕವರಿಯಾಗಿಲ್ಲ. ಅದಕ್ಕಾಗಿ ನಾವೆಲ್ಲರೂ ಸೇರಿ ಒಗ್ಗಟ್ಟಾಗಿ ಮನಸ್ಸು ಮಾಡಿ ಯಾರು ಕೊಡಬೇಕಾಗಿದೆ. ಅವರ ಕೈಯಿಂದ ಕೊಡಿಸಿ. ಇದರಿಂದ ಆ ಸಂಸ್ಥೆಯನ್ನು ಎಲಿಜಬಲ್ ಮಾಡಿ ಮತ್ತು ಬೇರೆ ಜನರಿಗೆ ಸಾಲ ಕೊಡಿಸತಕ್ಕಂಥಾದ್ದು ಮಾಡಬೇಕು. ಅದಕ್ಕೆ ನಾನು ಶ್ರೀ ದೇಶಪಾಂಡೆಯವರು ಮಾತನಾಡುವಾಗ ಒಂದು ಮಾತನ್ನು ಕೇಳಿದೆ. ಪ್ರೊ: ನಂಜುಂಡಸ್ವಾಮಿಯವರು ಕೂಡ ಕೇಳಿಕೊಳ್ಳಬೇಕು. ಏಕೆಂದರೆ, ಈಗ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಇದೆ. ಅದು ಸ್ಥಾಪನೆಯಾಗಿ 63 ವರ್ಷವಾಯಿತು ಎಂದು ನಾನು ಓದಿದ್ದೇನೆ. ಅದೇ ರೀತಿ ಅಪೆಕ್ಸ್ ಬ್ಯಾಂಕ್ ಕೂಡ ಸ್ಥಾಪನೆಯಾಗಿ ಸುಮಾರು 70

ವರ್ಷಗಳಾಯಿತು. ಇದರ ಎಲ್ಲಾ ಇತಿಹಾಸ ತೆಗೆದುಕೊಂಡು ಇಲ್ಲಿಯುವರೆಗೆ ಅವರು ಮಾಡಿದ ಟರ್ನ್ ಓವರ್ ಮತ್ತು ಫಲಾನುಭವಿಗಳಿಂದ ಅವರು ಮಾಡಿದಂಥ ಬೆನಿಫಿಟ್ ಎಲ್ಲವನ್ನು ನಾವು ಲೆಕ್ಕಕ್ಕೆ ತೆಗೆದುಕೊಂಡರೆ 12 ಲಕ್ಷಕ್ಕಿಂತ ಜಾಸ್ತಿ ಜನರು ಮೇಲ್ಪಟ್ಟಿಲ್ಲ. ಅಂದರೆ, ಇವೊತ್ತು 60-67 ಲಕ್ಷ ಜನ ರೈತರು, ಪಟ್ಟೆದಾರರು ಕರ್ನಾಟಕ ರಾಜ್ಯದಲ್ಲಿರಬೇಕಾದರೆ, ಈ ಎಲ್ಲಾ ವ್ಯವಸ್ಥೆಯಿಂದ ಕೇವಲ 10-12 ಲಕ್ಷ ಜನರಿಗೆ ಮಾತ್ರ ಸಹಾಯವಾಗಿದೆ. ಸುಮಾರು 10 ವರ್ಷಗಳ ಇತಿಹಾಸ ತೆಗೆದುಕೊಂಡರೆ ಸಾಲ ಪಡೆದುಕೊಂಡಿರುವವರೇ ಪುನಃ ಸಾಲ ಪಡೆದಿದ್ದಾರೆಯೇ ಹೊರತು ಹೊಸಬರು ಸಾಲ ಪಡೆದಿರುವುದು ಬಹಳ ಕಡಿಮೆ. ಪ್ರತಿ ವರ್ಷ ಶೇಕಡಾ 2-3 ರಷ್ಟು ಹೊಸಬರು ಸೇರಿರಬಹುದೇ ಹೊರತು, ಶೇಕಡಾ 30-40 ರಷ್ಟು ಆಗಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಚಳುವಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಯಾರೂ ಕೂಡ ನೀಡಿಲ್ಲ. ಬಡ್ಡಿ ಮನ್ನಾ ಮಾಡಿದ್ದೇವೆಂದು ಹಿಂದಿನ ಸರ್ಕಾರ ಹೇಳಿಕೊಳ್ಳಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. 173 ಕೋಟಿ ರೂಪಾಯಿಗಳನ್ನು ಕೊಟ್ಟಿರಬಹುದು. ಆದರೆ, ಅಷ್ಟು ಜನರಿಗೆ ಕೊಟ್ಟ ನಂತರವೂ ಕೂಡ ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ನಾವು ರೈತರನ್ನು ಇವರೊಳಗಡೆ ತಂದಿದ್ದೇವೆ? ಹೊಸಬರಿಗೆ ಎಷ್ಟು ಪರ್ಸೆಂಟೇಜ್ ಕೊಡಲಾಗಿದೆ? ಎಂಬುದನ್ನು ಕೂಡ ಯೋಚನೆ ಮಾಡಬೇಕಾಗುತ್ತದೆ. ಅದಕ್ಕಾಗಿ ಅನೇಕ ಸಲ, ಡಿಸಿಸಿ ಬ್ಯಾಂಕ್‌ಗಳಾಗಲಿ ಅಥವಾ ಪಿಎಲ್‌ಡಿ ಬ್ಯಾಂಕ್‌ಗಳಾಗಲಿ, ಅನೇಕ ಸಂಸ್ಥೆಗಳನ್ನು ತಮ್ಮ ಕೈಯಲ್ಲೇ ಇಟ್ಟುಕೊಳ್ಳಬೇಕೆನ್ನುವ ದೃಷ್ಟಿಯಿಂದ ಸೊಸೈಟಿಗಳನ್ನು ಅರ್ಹತೆಗೆ ತರುವುದು, ಅಲ್ಲಿಯೇ ಚುನಾವಣೆ ನಡೆಸುವುದು. ಪುನಃ ಚುನಾವಣೆಯಲ್ಲಿ ಅವರೇ ಆರಿಸಿ ಬಂದು ಅಧ್ಯಕ್ಷರು, ಕಾರ್ಯದರ್ಶಿಯಾಗುವುದು. ಇದು ಹೀಗೆ ನಡೆಯುತ್ತಿದೆ. ನಮ್ಮ ಸರ್ಕಾರವಿರಬಹುದು, ನಿಮ್ಮ ಸರ್ಕಾರವಿರಬಹುದು, ಯಾರೇ ಇರಬಹುದು. ಎಲ್ಲರೂ ಕೂಡ ಅದೇ ರೀತಿ ಮಾಡಿಕೊಂಡು ಬಂದ ಕಾರಣ ಇವೊತ್ತು ಏನಾಗಿದೆಯೆಂದರೆ, ಲೆಂಡಿಂಗ್ ಕಡಿಮೆಯಾಗಿದೆ. ಉಳಿದಂಥ ರೈತರು ಏನಿದ್ದಾರೆ, ಅವರು ಪುನಃ ಸಾಹುಕಾರರ ಮನೆ ಬಾಗಿಲಿಗೆ ಹೋಗುತ್ತಾರೆ, ಮಾರವಾಡಿಗಳ ಹತ್ತಿರ ಹೋಗುತ್ತಾರೆ. ಇದು ಕೆಟ್ಟ ಪದ್ಧತಿ ಎಂದು ನಾವು ಎಷ್ಟೇ ಹೇಳಿಕೊಂಡರೂ ಕೂಡ ಇದರಲ್ಲಿ ಮಿಸ್ - ಅಪ್ರೋಪ್ರಿಯೇಷನ್ ಇದೆ ಅಥವಾ ಅನೇಕ ರೀತಿಯಾದ ಅಡಚಣೆಗಳಿದ್ದರೂ ಕೂಡ ಇದೇ ಉತ್ತಮ ಪದ್ಧತಿ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಉಳಿದಂಥ ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ಬ್ಯಾಂಕುಗಳು ರೈತರಿಗೆ ಮಾಡಿರುವ ಕಾಂಟ್ರಿಬ್ಯೂಷನ್ ಬಹಳ ಕಡಿಮೆ ಇದೆ.

ಶ್ರೀ ಎಚ್. ಏಕಾಂತಯ್ಯ:- ತಾವು ಲೆಂಡಿಂಗ್ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದಿರಿ. ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಈ ದೇಶದಲ್ಲಿ ಸಹಕಾರಿ ಸಾಲ, ಆ ಸಾಲದ ಮರು ಪಾವತಿ ಮಾಡುವಂಥ ಯೋಜನೆ ಏನಿದೆ, ಸಾಲವನ್ನು ಕಡಿಮೆ ತೆಗೆದುಕೊಂಡಿದ್ದಕ್ಕೆ ಕಾರಣವೇನು? ಮುಖ್ಯವಾದ ಕಾರಣವೇನೆಂದರೆ, ಕೇಂದ್ರ ಸರ್ಕಾರ ನಬಾರ್ಡ್ ಮತ್ತು ರಿಸರ್ವ್ ಬ್ಯಾಂಕಿನ ಮುಖಾಂತರ ಸಾಲದ ಯಾವ ಒಂದು ನೀತಿಯನ್ನು ಅನುಸರಿಸುತ್ತಿದೆಯೋ ಅದು ಮುಖ್ಯವಾದಂಥ ಕಾರಣವಾಗಿದೆ.

ಡಿ.ಸಿ.ಸಿ. ಬ್ಯಾಂಕಿನಿಂದ ಅಥವಾ ಕಮರ್ಶಿಯಲ್ ಬ್ಯಾಂಕಿನಿಂದ ವ್ಯವಸಾಯೋತ್ಪನ್ನಕ್ಕೆ ಸಾಲವನ್ನು ಕೊಡಬೇಕಾದರೆ ಶೇಕಡಾ ಇಂತಿಷ್ಟೇ ಮರುಪಾವತಿ ಮಾಡಬೇಕೆಂದು ನೀತಿ ಇದೆ. ಹಾಗೆ ಮರುಪಾವತಿ ಮಾಡಿದರೆ ಮಾತ್ರ ಸಾಲವನ್ನು ಕೊಡುತ್ತಾರೆ. ನಾವೆಲ್ಲರೂ ರೈತರ ಪರವಾಗಿ ಹೇಳಿಕೊಳ್ಳುತ್ತೇವೆ, ಪಾರ್ಲಿಮೆಂಟ್‌ನಲ್ಲಿ ಹೇಳಿಕೊಳ್ಳುತ್ತೇವೆ, ಆದರೆ ವಾಣಿಜ್ಯ ಬಳಕೆಗೆ, ವಾಣಿಜ್ಯ ಫಂಡ್‌ಗೆ, ಕೈಗಾರಿಕೆಯ ಉದ್ದೇಶಕ್ಕೆ ಕೊಡತಕ್ಕ ಸಾಲ ಏನಿದೆ ಅದಕ್ಕೆ ಯಾವ ನಿರ್ಬಂಧವೂ ಕೂಡ ಈ ದೇಶದಲ್ಲಿ ಇಲ್ಲ. ವ್ಯಾಪಾರ ಉದ್ದಿಮೆ ಇರಬಹುದು, ಕೈಗಾರಿಕೆ ಇರಬಹುದು ಔಟ್ ಸ್ಟಾಂಡಿಂಗ್ 5 ಕೋಟಿ ಇದ್ದರೂ ಸಹ ಅವರಿಗೆ ಪೂರ್ತಿ ಸಾಲವನ್ನು ಕೊಡಬಹುದು, ಆದರೆ ವ್ಯವಸಾಯದ ಉದ್ದೇಶಕ್ಕಾಗಿ ಔಟ್‌ಲೈನ್

5 ಕೋಟಿ ಇದ್ದರೂ ಸಹ ಅವರು ಮರುಪಾವತಿ ಮಾಡದಿದ್ದರೆ ಸಾಲವನ್ನು ಕೊಡಲು ಸಾಧ್ಯವಿಲ್ಲ. ಈ ನೀತಿ ನಮ್ಮ ನಬಾರ್ಡ್ ಮತ್ತು ಆರ್.ಬಿ.ಐ.ನಲ್ಲಿದೆ. ಆದುದರಿಂದ ತಮ್ಮ ಚಿತ್ತ ಆ ಕಡೆ ಇರಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ಏಕಾಂತಯ್ಯನವರನ್ನು ಪಾರ್ಲಿಮೆಂಟ್‌ಗೆ ಕಳಿಸಿ ಆ ಕೇಂದ್ರ ಸರ್ಕಾರದ ನೀತಿಯನ್ನು ಬದಲಾವಣೆ ಮಾಡಿಸಲು ಹೇಳಬೇಕು.

ಶ್ರೀ ಹೆಚ್. ಏಕಾಂತಯ್ಯ:- ನಾನೊಬ್ಬನೇ ಹೋಗುವುದರಿಂದ ಆದಾಗುವುದಿಲ್ಲ. ನೀವು ಮತ್ತೆ ಖರ್ಗೆಯವರೂ ಕೂಡ ಬರಬೇಕು, ನಾವು ಎಲ್ಲೊ ಕೇವಲ ಮೂರು ಜನರು ಹೋದರೆ ಅದು ಆಗುವುದಿಲ್ಲ. ಅಲ್ಲಿರುವ ಎಲ್ಲಾ 525 ಜನರ ಭಾವನೆಯಲ್ಲಿ ಈ ವಿಷಯ ಬರಬೇಕು. ಬಹುಮತ ಬರಬೇಕು. ಆದರೆ ದುರಾದೃಷ್ಟವಶಾತ್ ನಾವು ಇಲ್ಲಿ ಏನು ಮಾತನಾಡುತ್ತೇವೆ. ನಾವು ನಬಾರ್ಡಿಗೆ ಕೈ ಎತ್ತುತ್ತೇವೆ. ಆ ಒಂದು ಪರಿಸ್ಥಿತಿ ಈ ರಾಜ್ಯದಲ್ಲಿ ಮತ್ತು ಈ ರಾಷ್ಟ್ರವಲ್ಲಿ ಇದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಇದರ ಜೊತೆಗೆ ಸರ್ಕಾರ ಇನ್ನೊಂದು ವಿಷಯವನ್ನು ತಿಳಿದುಕೊಳ್ಳಬೇಕು the quantum of credit earmarked by Reserve Bank and NABARD to agriculture and the quantum of credit earmarked for other sectors of priority, ಬೇರೆಯವರಿಗೆ ಜಾಸ್ತಿ ಕೊಡುತ್ತಾರೆ ಆದರೆ ಕೃಷಿಗೆ ಮಾತ್ರ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಹೇಳತಕ್ಕದಕ್ಕೆ ನನ್ನ ಭಿನ್ನಮತವಿಲ್ಲ, ಭಿನ್ನಾಭಿಪ್ರಾಯವಿಲ್ಲ, ನಮಗೂ ಸಹ ಯಾವ್ಯಾವ ಸೆಕ್ಟರ್‌ಗಳಿಗೆ ಪ್ರಯಾರಿಟಿ ಕೊಡಬೇಕೆಂದು ಗಮನವಿದೆ. ಆದರೆ ಇವತ್ತು ಏನಾಗುತ್ತದೆಂದರೆ ನಮ್ಮ ದೇಶದ ಸುದೈವವೊ ಅಥವಾ ದುರ್ದೈವವೊ ನಮಗೆಲ್ಲರಿಗೂ ಕೂಡ ಪ್ಲೀಡ್ ಮಾಡುವವರಿದ್ದಾರೆ. ಪಬ್ಲಿಕ್ ಸೆಕ್ಟಾರ್ ಬೇಡ, ಜಾಯಿಂಟ್ ಸೆಕ್ಟಾರ್ ಬೇಡ, ಕೋ - ಆಪರೇಟಿವ್ ಮೂವ್‌ಮೆಂಟ್ ಬೇಡ ಎಂದು ಹೇಳುವವರು ನಿಮ್ಮ ಕಡೆ ಮತ್ತು ನಮ್ಮ ಕಡೆ ಎರಡೂ ಕಡೆಯಲ್ಲಿಯೂ ಇದ್ದಾರೆ. ಇದರಿಂದ ಕೂಡ ಪೆಟ್ಟು ಬಿದ್ದಿದೆ. ನಾವು ಆ ರೀತಿಯಲ್ಲಿ ಲೆಕ್ಕವನ್ನು ತೆಗೆದುಕೊಂಡು ನೋಡಿದರೆ ಕೆಳಗಿನವರಿಗೇ ಕಡಿಮೆ ಹೋಗುತ್ತದೆ. ಇವತ್ತು ಆರ್‌ಬಿಐ ನವರು Oberai hotel, industrialistsಗೆ ಯೋಜನೆ ಮಾಡಿದರೆ ನಾನು ಡಿಸಿಸಿ ಬ್ಯಾಂಕಿನ ಬಗ್ಗೆ ಹೇಳುತ್ತೇನೆ. ಅನೇಕ ಸಲ, ತಾಲ್ಲೂಕು ವೈಸ್ ತೆಗೆದುಕೊಂಡು ನೋಡಿದಾಗ ಬಡವರು, ಸಣ್ಣ ಜನರು ಯಾರ್‍ಯಾರು ಎಲ್ಲೆಲ್ಲಿ ಸದಸ್ಯರಾಗಿರುತ್ತಾರೋ ಅಂಥ ಕಡೆ ಅವರಿಗೆ ಕೊಡತಕ್ಕ ಪರಿಮಾಣ ಕಡಿಮೆ ಇರುತ್ತದೆ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಆ ತಾಲ್ಲೂಕಿನ ಹೆಸರನ್ನು ಹೇಳುವುದಿಲ್ಲ. ಆ ತಾಲ್ಲೂಕಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟರೆ ಅದರಲ್ಲಿ small and marginal farmersಗೆ ಕೇವಲ 22 ಲಕ್ಷ ಕೊಟ್ಟಿದ್ದಾರೆ. ಅದರಲ್ಲಿಯೂ ಹರಿಜನ ಗಿರಿಜನರಿಗೆ 59 ಸಾವಿರ ಮಾತ್ರ ಕೊಟ್ಟಿದ್ದಾರೆ. ಇಂಥ ಸಾವಿರಾರು ಉದಾಹರಣೆಗಳನ್ನು ಕೊಡುತ್ತೇನೆ. ಏಕೆಂದರೆ ಯಾರು ಯಾರ ಕೈಯಲ್ಲಿ ಏನೇನು ಸೌಲಭ್ಯಗಳಿರುತ್ತವೆಯೋ ಅದನ್ನು ಅವರವರ ಕಡೆಯವರೇ ಪಡೆದುಕೊಳ್ಳುತ್ತಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಎಲ್ಲರಿಗೂ ಅನುಕೂಲವಾಗುವುದನ್ನು ಮಾಡುವುದಕ್ಕೆ ಯಾರೂ ಹೋಗುವುದಿಲ್ಲ. ಸಣ್ಣವರು ಇರಬಹುದು, ದೊಡ್ಡವರು ಇರಬಹುದು, ರಾಷ್ಟ್ರೀಯ ಮಟ್ಟದಲ್ಲಿ ಕೂಡ ಇದು ಇರುತ್ತದೆ. ಮತ್ತೆ ತಾವು ಏನು ಜನತೆಯ ಬಗ್ಗೆ ಚಿಂತನೆ ಮಾಡಿದ್ದೀರಿ, ತಾವು ಏನು ಕೋ - ಆಪರೇಟೀವ್ ಮೂವ್‌ಮೆಂಟ್ ಬಗ್ಗೆ ಹೇಳುತ್ತಿದ್ದೀರಿ ಅದರಲ್ಲಿಯೂ ಕೂಡ ದುರಾದೃಷ್ಟವಶಾತ್ ಇದು ಇದೆ. ಆದ್ದರಿಂದ ಅದರ ಬಗ್ಗೆ ಇವತ್ತು ಎಷ್ಟೇ ಕೆಟ್ಟದ್ದು ಇದ್ದರೂ ಕೂಡ ಇದೇ ಉತ್ತಮವಾದುದು ಎನ್ನತಕ್ಕ ಒತ್ತಾಯವಿದೆ. ಏಕೆಂದರೆ, ಇವತ್ತು ನ್ಯಾಷನಲ್ ಬ್ಯಾಂಕಿಗೆ ಹೋಲಿಸಿದಾಗ, ಖಾಸಗಿ ಬ್ಯಾಂಕಿಗೆ ಹೋಲಿಸಿದಾಗ, ಮಾರವಾಡಿಯ ಹತ್ತಿರ

ಸಾಲವನ್ನು ಪಡೆಯುವುದಕ್ಕಿಂತ, ಹಳ್ಳಿಯ ಸಾಹುಕಾರನ ಹತ್ತಿರ ಹೋಗಿ ತೆಗೆದುಕೊಳ್ಳತಕ್ಕ ಸಾಲಕ್ಕಿಂತ ಮತ್ತು ಬಡ್ಡಿಗಿಂತ ಇದು ಉತ್ತಮ ಎನ್ನತಕ್ಕ ಭಾವನೆ ನಮ್ಮಲ್ಲಿರುವುದರಿಂದ ನಾವು ಇದನ್ನು ಪ್ರೋತ್ಸಾಹಿಸಬೇಕಾಗಿದೆ.

ಇದರಲ್ಲಿ ಅನಿವಾರ್ಯತೆಯೂ ಇದೆ. ಸ್ಟೆಬಿಲೈಸ್ ಮಾಡತಕ್ಕದ್ದು ಇನ್ನೂ ಹೆಚ್ಚಿನ ರೀತಿಯಲ್ಲಿ ಆರೋಗ್ಯವನ್ನು ತರತಕ್ಕದ್ದು ಅವಶ್ಯಕತೆ ಇದೆ ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮಾನ್ಯ ದೇಶಪಾಂಡೆಯವರು ಅಂಕಿ ಅಂಶಗಳನ್ನು ಕೊಟ್ಟರು, ಮಾನ್ಯ ಯಡಿಯೂರಪ್ಪನವರು, ಬೈರೇಗೌಡರು, ಸಿಂಧ್ಯರವರು, ಕೌಜಲಗಿಯವರು, ರಾಮಯ್ಯನವರು, ಮಾಧುಸ್ವಾಮಿಯವರು, ಜಾಲಪ್ಪನವರು, ಮೇಟಿಯವರು, ವಿನಯಕುಮಾರ್, ಬನ್ನಿಕೋಡ್‌ರವರು ಇದಿನಬ್ಬನವರು, ನಂಜುಂಡಸ್ವಾಮಿ ಇನ್ನೂ ಮುಂತಾದ ಮಾನ್ಯ ಸದಸ್ಯರು ತಮ್ಮ ತಮ್ಮ ಕಳಕಳಿಯನ್ನು ವ್ಯಕ್ತ ಮಾಡಿದ್ದಾರೆ. ಇವತ್ತು ತಾವು ಏನು ಬಡ್ಡಿಯನ್ನು ಮನ್ನಾ ಮಾಡಬೇಕೆಂದು ಕೇಳುತ್ತಿದ್ದೀರಿ ಇದಕ್ಕೆ ಸುಮಾರು 175 ಕೋಟಿ ರೂ. ಬೇಕಾಗುತ್ತದೆ. ಇದೇನೂ ಜಾಸ್ತಿ ಅಲ್ಲವೆಂದು ಮಾನ್ಯ ದೇಶಪಾಂಡೆಯವರು ಹೇಳುತ್ತಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಇದು ಸಹಕಾರಿ ಸಂಘಗಳದ್ದೋ ಅಥವಾ ಎಲ್ಲಾ ವಾಣಿಜ್ಯ ಬ್ಯಾಂಕ್‌ಗಳದ್ದೂ ಸೇರಿದೆಯೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮ ಕ್ಯಾಷ್ ಕಾರ್ಡ್ ಬ್ಯಾಂಕ್ ಅಪೆಕ್ಸ್ ಬ್ಯಾಂಕ್ ಎಲ್ಲಾ ಸೇರಿದೆ. ಇಷ್ಟು ಮಾಡಬೇಕಾದರೆ ನಮಗೆ ಸುಮಾರು 175 ಕೋಟಿ ರೂ. ಬೇಕಾಗುತ್ತದೆ. ತಮಗೂ ಗೊತ್ತಿದೆ. ಇದು ನಮ್ಮ ಬಜೆಟ್ ಪ್ರೊವಿಷನ್‌ನಲ್ಲಿ ಇಲ್ಲ. ಇದನ್ನೇನಾದರೂ ಮಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಯಾವ ರೀತಿ ಕೊಡಬೇಕು, ಎಷ್ಟರ ಮಟ್ಟಿಗೆ ಕೊಡಬೇಕು, ಪೂರ್ತಿಯಾಗಿ ಮನ್ನಾ ಮಾಡಬೇಕೋ ಕರೆಂಟ್ ಡ್ಯೂಸ್ ಮೇಲೆ ಮಾಡಬೇಕೋ, ಎಂಬುದನ್ನು ನೋಡಬೇಕಾಗುತ್ತದೆ. ನಾವು 7 ಪರ್ಸೆಂಟ್ ಕೊಟ್ಟಿದ್ದೇವೆಂದು ತಾವು ಹೇಳಿದಿರಿ. ಅದೇ ರೀತಿ 5 ಪರ್ಸೆಂಟ್ ಸಬ್ಸಿಡಿಯ ಮೇಲೆ ಕೊಡಬೇಕೋ, ಎಂಬ ಬಗ್ಗೆ ಒಂದು ತೀರ್ಮಾನಕ್ಕೆ ಬಂದು ಆದರ ಮೇಲೆ ಒಂದು ಸ್ಟೇಟ್‌ಮೆಂಟನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೆ. ನಾನಾದರೂ ಹೇಳುವುದಿಷ್ಟೆ. ರಿಕವರಿ ಬಗ್ಗೆ ನಾವೆಲ್ಲರೂ ಸ್ವಲ್ಪ ಮಟ್ಟಿಗೆ ಪ್ರೋತ್ಸಾಹ ಕೊಡಬೇಕು. ಈ ದಿಸೆಯಲ್ಲಿ ಮಾನ್ಯ ನಂಜುಂಡಸ್ವಾಮಿಯವರಲ್ಲಿ ಕೇಳಿಕೊಳ್ಳುತ್ತೇನೆ. ರಿಕವರಿ ಹೆಚ್ಚು ಬಂದಷ್ಟೂ ಉಳಿದ ರೈತರಿಗೆ ಅನುಕೂಲವಾಗುತ್ತದೆ. ರೈತರಿಗೆ ತೊಂದರೆಯಾಗಿದೆ ಎಂದು ನಾವು ಇದನ್ನು ಇಷ್ಟಕ್ಕೇ ನಿಲ್ಲಿಸಿದರೆ, ಸುಮಾರು 10-12 ಲಕ್ಷ ಜನರಿಗೆ ಅನುಕೂಲವಾಗಬಹುದು. ಯಾವುದೇ ಸರ್ಕಾರ ಬಂದರೂ ಇದೆಲ್ಲವನ್ನೂ ಮಾಫಿ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನೀವೇ ಅಧಿಕಾರಕ್ಕೆ ಬಂದರೂ ಇದೆಲ್ಲವನ್ನೂ ನೋಡಿಕೊಂಡೇ ಒಂದು ನಿರ್ಣಯಕ್ಕೆ ಅಂತಿಮವಾಗಿ ಬರಬೇಕಾಗುತ್ತದೆ. ಬೇರೆ ರೈತರಿಗೆ ನಾವು ಅನುಕೂಲ ಮಾಡಿಕೊಡಬೇಕೆಂದರೆ ಈ ಸಹಕಾರಿ ಚಳುವಳಿಯನ್ನು ಕೊಲ್ಲಬಾರದು. ಏನಾದರೂ ಮಾಡಿ ಇದಕ್ಕೆ ಶಕ್ತಿಯನ್ನು ತುಂಬಬೇಕು. ನಮ್ಮಲ್ಲೇನಾದರೂ ದೋಷವಿದ್ದರೆ ತಾವು ಹೇಳಬಹುದು, ಇಲ್ಲವೇ ನಮ್ಮ ಜೊತೆ ಕುಳಿತು ಚರ್ಚೆ ಮಾಡಬಹುದು. ಅದಕ್ಕೆ ನಾವೆಲ್ಲಾ ಸೇರಿ ಒಂದು ಪರಿಹಾರವನ್ನು ಕಂಡುಹಿಡಿಯೋಣ.

ಪ್ರೊ. ಎಂ.ಡಿ ನಂಜುಂಡಸ್ವಾಮಿ:- ಸಾಲ ಮರುಪಾವತಿ ಬಗ್ಗೆ ನಾನು ನನ್ನ ಸಂಪೂರ್ಣ ಸಹಕಾರವನ್ನು ಕೊಡುವುದಕ್ಕೆ ತಯಾರಿದ್ದೇನೆ. ನಾವು ಸರ್ಕಾರವನ್ನು ಕೇಳುತ್ತಲೇ ಬರುತ್ತಿದ್ದೇವೆ. ಸೂರ್ಯಕಾಂತಿ, ಶೇಂಗಾ, ಹತ್ತಿ, ಜೋಳ, ಇವು ಕಳೆದ ವರ್ಷ ಯಾವ ಬೆಲೆಯಲ್ಲಿ ಮಾರಾಟವಾದುವು, ಈ ವರ್ಷ ಯಾವ ಬೆಲೆಯಲ್ಲಿ ಮಾರಾಟವಾಗುತ್ತಿವೆ. ಈ ಮಾರ್ಕೆಟಿನಲ್ಲಿ ತಾವು

ಶಿಸ್ತನ್ನು ತರಬೇಕು. ತಾವು ಕಾಟನ್ ಕಾರ್ಪೊರೇಷನ್, ಆಯಿಲ್ ಸೀಡ್ಸ್ ಕಾರ್ಪೊರೇಷನ್ ಎಂದು ಮಾಡಿದ್ದೀರಿ, ಏತಕ್ಕೆ ಮಾಡಿದ್ದೀರಿ ? ಆ ಮಾರ್ಕೆಟ್‌ನ್ನು ತಾವು ಎಂದಾದರೂ ಪ್ರವೇಶ ಮಾಡಿದ್ದೀರಾ ? ಅಲ್ಲಿ ಒಂದು ತಕ್ಕಡಿಯನ್ನು ತಾವು ತೆಗೆದುಕೊಂಡು ಹೋಗಿ ಇಡಿ ನೋಡೋಣ. ಇದು ನಿಮ್ಮಿಂದಾಗುವುದಿಲ್ಲ. ಅಲ್ಲಿ ಎಷ್ಟೇ ಮೋಸ ಮಾಡುತ್ತಿದ್ದರೂ ತಾವು ಕಣ್ಣು ಮುಚ್ಚಿಕೊಂಡು ಸುಮ್ಮನಿದ್ದೀರಿ. ಕಳೆದ ವರ್ಷ ನಾವು ಎಷ್ಟು ಬೆಲೆಗೆ ಮಾರಾಟ ಮಾಡಿದೆವು ಅದರ ಅರ್ಧ ಬೆಲೆಗೂ ನಾವು ಇವತ್ತು ಅಲ್ಲಿ ಮಾರಾಟ ಮಾಡುವುದಕ್ಕಾಗುತ್ತಿಲ್ಲ, ನೀವು ಸಾಲವನ್ನು ವಾಪಸ್ಸು ಕೊಡಿ ಎಂದು ನಾನು ಹೇಗೆ ಹೇಳಲಿ. ಅವರ ಮನೆಯಲ್ಲಿ ಏನಾದರೂ ಇದೆಯೆ ? ಇವತ್ತು ನಿಮ್ಮ ಮಾರ್ಕೆಟ್‌ನಲ್ಲಿ ನಡೆಯುತ್ತಿರುವ ಮೋಸದಿಂದ ರೈತನಿಗೆ ಸಾಲ ಬಂದಿದೆ. ಇದನ್ನು ನೀವು ಸಾಲ ಎನ್ನುತ್ತೀರಾ ? ನಾನು ಇದನ್ನು ಸಾಲ ಎನ್ನುವುದಿಲ್ಲ. ಏಕೆಂದರೆ ನಾನು ನಿಮಗೆ ದುಡಿದು ಕೊಟ್ಟಿದ್ದೇನೆ. ಅದೇ ಸೇಂಗಾ ಎಣ್ಣೆ, ಸೂರ್ಯಕಾಂತಿ ಎಣ್ಣೆಯಿಂದಲೇ ಊಟ ಮಾಡುತ್ತಿರುವುದು. ನೀವು ಬಹಳ ದೊಡ್ಡ ಸಬ್ಸಿಡೈಸರ್ಸ್. ಈಗ ನೀವು ಸಾಲವನ್ನು ಕೊಡಿ ಎಂದರೆ ಎಲ್ಲಿಂದ ಕೊಡುತ್ತಾರೆ. ಖಂಡಿತವಾಗಿ ಒಂದು ಪೈಸೆ ಕೂಡ ಕೊಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನೀವು ಕೊಡುವುದಿಲ್ಲವೆಂದರೆ ಬೇರೆ ರೈತರಿಗೆ ತೊಂದರೆ ಮಾಡಿದಂತಾಗುತ್ತದೆ. ಯಾರೇ ರಾಜಕಾರಣಿ ಆಗಲಿ, ಮಂತ್ರಿಯಾಗಲಿ, ಶಾಸಕನಾಗಲಿ ಕಾಂಟ್ರಿಬ್ಯೂಷನ್ ಮಾಡಿ ಸಾಲವನ್ನು ಮನ್ನಾ ಮಾಡುವುದಕ್ಕೆ ಹೋಗುವುದಿಲ್ಲ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಮಾರ್ಕೆಟ್‌ನಲ್ಲಿ ಒಂದು ಶಿಸ್ತನ್ನು ತರುವುದಕ್ಕೆ ಪ್ರಯತ್ನ ಮಾಡಿ. ಆಗ ತನಗೆ ತಾನೇ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ನಾವು ಪ್ರಾಕ್ಟಿಕಲ್ ಆಗಿರೋಣ. ತಾವು ಕೇಳುತ್ತಿರುವುದು ನ್ಯಾಯವಾಗಿದೆ. ಅದು ಬೇರೆ ಫೋರಂ. ಅದಕ್ಕೆ ಯಾವ ರೀತಿ ಸಮಗ್ರ ಯೋಚನೆ ಮಾಡಿ ಒಂದು ಹೇಳಿಕೆಯನ್ನು ಕೊಡುತ್ತಾರೋ ಅದು ಒಂದು ಕಡೆ ಇರಲಿ.

ಆದರೆ ಇದರ ಬಗ್ಗೆ ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿರುವುದೇನೆಂದರೆ ಈಗ ಸುಮಾರು 4320 ಸೊಸೈಟಿಗಳು ಡೀಫಂಕ್ಟ್ ಆಗತಕ್ಕಂಥ ಸ್ಟೇಜ್‌ನಲ್ಲಿದೆ. ಆದಕ್ಕೆ ತಾವು ಸ್ವಲ್ಪ ಬೆಂಬಲ ನೀಡಿದರೆ, ಉಳಿದಂಥ 2 ಲಕ್ಷ, 3 ಲಕ್ಷ, 4 ಲಕ್ಷ ರೈತರಿಗೆ ಅನುಕೂಲವಾಗುತ್ತದೆ. ಈ 12 ಲಕ್ಷ ಅಲ್ಲದೆ, ಇನ್ನು 4 –5 ಲಕ್ಷ ರೈತರಿಗೆ ಅನುಕೂಲ ಸಿಗುತ್ತದೆ. ಇಷ್ಟಾದರೂ ಕೂಡ ಅನ್ ರಿಕವರ್ಡ್ ಫಾರ್ಮರ್ಸ್ ಎಷ್ಟಿರುತ್ತಾರೆಂದರೆ ಸುಮಾರು 48 ಲಕ್ಷ, 49 ಲಕ್ಷ ಇದ್ದಾರೆ. ಅವರೆಲ್ಲರೂ ಮಾರ್ವಾಡಿ ಮನೆಗೆ, ನ್ಯಾಷನಲೈಸ್ಡ್ ಬ್ಯಾಂಕ್, ಸಾಹುಕಾರರ ಮನೆಗೆ ಲಾಗಿ ಬಡ್ಡಿ ಎಂದು ಹೇಳುತ್ತಾರೆ, ನಮ್ಮ ಕಡೆ ಲಾಗಿ ಬಡ್ಡಿ ಎಂದರೆ ಒಂದು ಚೀಲ ಜೋಳವನ್ನು ಕೊಟ್ಟರೆ ಒಂದು ಚೀಲಕ್ಕೆ ಎರಡು ಚೀಲ ವಾಪಸ್ ಕೊಡಬೇಕು. ಅನೇಕ ಕಡೆ ಮಾನ್ಯ ಸದಸ್ಯರಾದ ಮೇಟಿಯವರಿಗೆ ಚೆನ್ನಾಗಿ ಗೊತ್ತಿದೆ, ಈ ಕಡೆ ಸ್ವಲ್ಪ ಕಡಿಮೆ, ಆ ಕಡೆ ನಮ್ಮ ಬಿಜಾಪುರ, ಗುಲ್ಬರ್ಗಾ ಕಡೆ ಎಲ್ಲಿಯವರೆಗೆ ಹೋಗುತ್ತಾರೆಂದರೆ ನನ್ನ ಮನೆಯಲ್ಲಿರುವ ಗೊಬ್ಬರದ ಮೇಲೂ ಅವರ ಕಂಟ್ರೋಲ್. ನನ್ನ ಮನೆಯಲ್ಲಿ ನಾನು ನಾಲ್ಕು ಹಸುಗಳನ್ನು ಸಾಕಿಕೊಂಡು ಗೊಬ್ಬರವನ್ನು ಶೇಖರಣೆ ಮಾಡಿದ್ದರೆ ಆ ಗೊಬ್ಬರವನ್ನು ಕೂಡ ಬರೆಯಿಸಿಕೊಳ್ಳುತ್ತಾರೆ. ಅಂಥ ಒಂದು ಪರಿಸ್ಥಿತಿ ಕೆಲವು ಕಡೆ ಇದೆ. ಅದಕ್ಕಾಗಿ ಅವರಿಗೂ ಕೂಡ ನಾವು ರಿಲೀಫ್ ಕೊಡಬೇಕಾಗಿದೆ. ಅದರ ಬಗ್ಗೆಯೂ ಕೂಡ ನಾವು ಚಿಂತನೆ ಮಾಡಬೇಕು. ಈ 12 ಲಕ್ಷ ಜನರು ಏನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಇವರಿಗೆ ನೀವು ಕೊಡುವುದಿಲ್ಲವೆಂದರೂ ಕೂಡ 48 ಲಕ್ಷ ಜನರಿಗೆ ಕೊಡತಕ್ಕಂಥದ್ದಕ್ಕೆ ಪ್ರಯತ್ನ ಮಾಡಬೇಕಾಗಿದೆ. ಅವರ ಅಭಿವೃದ್ಧಿಗಾಗಿ ಅವರ ಏಳಿಗೆಗಾಗಿ ನಾವು ಏನಾದರೂ ಒಂದು ಚಿಂತನೆಯನ್ನು ಮಾಡಲೇಬೇಕಾಗಿದೆ. ಬೇಡ

ಇವರದಿಷ್ಟನ್ನು ಮಾಫ್ ಮಾಡಿ ಸುಮ್ಮನೆ ಇರೋಣವೆಂದರೆ ನಾವು 10-12 ಲಕ್ಷ ಜನರ ಬಗ್ಗೆ ಮಾತ್ರ ಚಿಂತನೆ ಮಾಡೋಣ, ಬಾಕಿಯುವರನ್ನು ಬಿಟ್ಟುಬಿಟ್ಟು ಇದನ್ನು ಕ್ಲೋಸ್ ಮಾಡಿಕೊಂಡು ಕುಳಿತು ಇಲ್ಲಿಗೆ ಬಿಡೋಣವೆಂದರೆ ಎಲ್ಲರದು ಇದೇ ಇಚ್ಛೆಯಾದರೆ, ನಾನು ಕೂಡ ಅದನ್ನು ಒಪ್ಪುತ್ತೇನೆ. ಆದರೆ ಉಳಿದವರಿಗೂ ಸಹಾಯ ಮಾಡಬೇಕೆಂದಾಗ ಈ ಚಳುವಳಿಗೆ ಹೆಚ್ಚಿನ ಬೆಂಬಲವನ್ನು ನೀಡಬೇಕಾಗುತ್ತದೆ. ವಸೂಲಾತಿಗೆ ನೀವು ಹೆಚ್ಚಿನ ಸಹಾಯ ಮಾಡಬೇಕಾಗುತ್ತದೆ. ಮತ್ತು ನಿಮ್ಮ ಸಹಕಾರ ನಿಮ್ಮ ಬೆಂಬಲವಿದ್ದರೆ ಖಂಡಿತವಾಗಿಯೂ ಇವತ್ತೇನು 12 ಲಕ್ಷ ಇದೀ ನಮ್ಮ ಎರಡು – ಮೂರು ಬ್ಯಾಂಕ್ ಸೇರಿ ರೈತರಿಗೆ ಲಾಭ ಮಾಡುತ್ತಿದ್ದಾರೆ, ಇನ್ನೂ ಇದರ ಡಬಲ್ ಆಗುತ್ತದೆ. ಅದಕ್ಕಾಗಿ ನಾನು ಕಳಕಳಿಯಿಂದ ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ ಎಲ್ಲೆಲ್ಲಿ ಕೊಡಲಿಕ್ಕೆ ಸಾಧ್ಯವಿದೆ, ಎಲ್ಲೆಲ್ಲಿ ರಿಕವರಿ ನಾವು ಮಾಡಲಿಕ್ಕೆ ಪಾಸಿಬಲಿಟಿ ಇದೆ ಅಲ್ಲಿ ಮಾಡಬೇಕಾಗುತ್ತದೆ. ಈಗ ಎಫೆಕ್ಟೆಡ್ ಏರಿಯಾಸ್ ಇದೆ. ರೈತರ ಶಾರ್ಟ್ ಟರ್ಮ್ ಲೋನನ್ನು ಮೀಡಿಯಂ ಟರ್ಮ್, ಮತ್ತು ಲಾಂಗ್ ಟರ್ಮ್ ಲೋನನ್ನಾಗಿ ಕನ್‌ವರ್ಟ್ ಮಾಡಲಿಕ್ಕೆ ಡೆಪ್ಯೂಟಿ ಕಮೀಷನರಿಗೆ ಬರೆದಿದ್ದೇವೆ. ಆಣೆವಾರಿ ತರಿಸುತ್ತಾ ಇದ್ದೇವೆ, ಆ ಕನ್‌ಸರ್ನ್ ಡೆಪ್ಯೂಟಿ ಕಮೀಷನರಿಂದ ಬಂದ ತಕ್ಷಣ ಅದನ್ನು ಕನ್‌ವರ್ಟ್ ಮಾಡಿ ಅದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಅದರ ಬಗ್ಗೆ ಸಂಶಯವೇನೂ ಪಡಬೇಕಾಗಿಲ್ಲ. ಆದರೆ ಅದರ ಪರ್ಸೆಂಟೇಜ್ ಬಹಳ ಕಡಿಮೆಯಾಗುತ್ತದೆ. ಸ್ವಲ್ಪ ಸಹಾಯವಾಗಬಹುದು. ಆದರೆ ಹೆಚ್ಚಿನ ರೀತಿಯಲ್ಲಿ ನಿಜವಾಗಿಯೂ ಎಲ್ಲೆಲ್ಲಿ ಬೆಳೆದಿದ್ದಾರೋ, ಎಲ್ಲೆಲ್ಲಿ ಕೊಡತಕ್ಕಂಥ ಶಕ್ತಿ ಇದೆ ಅಂಥ ಕಡೆಯಾದರೂ ಕೂಡ ಸದನದ ಎಲ್ಲಾ ಸದಸ್ಯರು ಸಹಾಯ ಮಾಡಿ ರಿಕವರಿ ಹೆಚ್ಚಾದರೆ ಉಳಿದಂಥ ರೈತರಿಗೆ ಅನುಕೂಲವಾಗುತ್ತದೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಸ್ಪಷ್ಟೀಕರಣ. ಈ ಪ್ರದೇಶದಲ್ಲೆಲ್ಲಾ ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುವುದಕ್ಕೆ ಹೇಳಿದ್ದೇವೆಂದು ಹೇಳಿದರಲ್ಲ. ಹಾಗೆಯೇ ಈ ವಸೂಲಾತಿಯ ಬಗ್ಗೆ ಏನು ಆದೇಶವನ್ನು ಕೊಟ್ಟಿದ್ದೀರಿ ? You have said you are converting it into long term.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಎಲ್ಲೆಲ್ಲಿ ನೆರಹಾವಳಿಯಾದಂಥ ಹಳ್ಳಿಗಳು ಏನಿವೆ. ಆ ಹಳ್ಳಿಗಳಿಗೆ ಡೆಪ್ಯೂಟಿ ಕಮೀಷನರಿಗೆ ಈಗಾಗಲೇ ಹೇಳಿದ್ದೇವೆ. ಅದರ ಪ್ರಕಾರ ಅಲ್ಲಿ ರಿಕವರಿ ನೀವು ಮಾಡಬಾರದೆಂದು ಆದೇಶವನ್ನು ಕೂಡ ಕೊಟ್ಟಿದ್ದೇವೆ. ಅಂಥದ್ದೇನಾದರೂ ಇದ್ದಲ್ಲಿ ಅದು ಯಾವ ಹಳ್ಳಿ ಎನ್ನುವುದನ್ನು ವಿಚಾರ ಮಾಡೋಣವೆಂದು ಹೇಳುತ್ತೇನೆ.